ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 16 ಬುಧವಾರ 2024
ಸಂಪುಟ: 45 | ಸಂಚಿಕೆ: 180 | ಪುಟಗಳು: 10
₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಚನ್ನಪಟ್ಟಣ, ಸಂಡೂರು, ಶಿಗ್ಗಾಂವಿ ವಿಧಾನಸಭಾ ಕ್ಷೇತ್ರಗಳಿಗೆ

ನ.13ಕ್ಕೆ ಉಪ ಚುನಾವಣೆ

ನ.23ಕ್ಕೆ ಫಲಿತಾಂಶ ಪ್ರಕಟ

- ಅಧಿಸೂಚನೆ ಅ.18
- ನಾಮಪತ್ರ ಸಲ್ಲಿಸಲು ಕೊನೆಯ ದಿನ ಅ.25
- ನಾಮಪತ್ರ ಪರಿಶೀಲನೆ ಅ.28
- ನಾಮಪತ್ರ ಹಿಂಪಡೆಯಲು ಕೊನೆಯ ದಿನ ಅ.30



ನವದೆಹಲಿ, ಅ.15– ಕೇಂದ್ರ ಚುನಾವಣಾ ಆಯೋಗ ಕರ್ನಾಟಕದ 3 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ಘೋಷಿಸಿದೆ. ಸಂಡೂರು, ಚನ್ನಪಟ್ಟಣ ಹಾಗೂ ಶಿಗ್ಗಾಂವಿ ಕ್ಷೇತ್ರದಲ್ಲಿ ತೆರವಾಗಿರುವ ಸ್ಥಾನಗಳಿಗೆ ನವೆಂಬರ್ 13ರಂದು ಮತದಾನ ನಡೆಯಲಿದೆ. ನ.23 ರಂದು ಮತಎಣಿಕೆ ನಡೆದು ಫಲಿತಾಂಶ ಘೋಷಣೆಯಾಗಲಿದೆ. ಕರ್ನಾಟಕ ಉಪ ಚುನಾವಣೆ ಕುರಿತು ಗೆಜೆಟ್ ನೋಟಿಫಿಕೇಶನ್ ಅ.18ರಂದು ಹೊರಡಿಸಲಾಗುತ್ತದೆ. ನಾಮಪತ್ರ ಸಲ್ಲಿಕೆಗೆ ಅ.25 ಕೊನೆಯ ದಿನವಾಗಿದೆ. ಅಭ್ಯರ್ಥಿಗಳು ಸಲ್ಲಿಸಿದ ನಾಮಪತ್ರ ಪರಿಶೀಲನೆ ಅ.28ಕ್ಕೆ ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಅ.30 ಕೊನೆಯ ದಿನವಾಗಿದೆ.

ದೆಹಲಿಯ ವಿಜ್ಞಾನ ಭವನದಲ್ಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ದಿನಾಂಕ ಘೋಷಣೆ ಮಾಡಿದರು.

ಕರ್ನಾಟಕದ ಮೂರು ವಿಧಾನಸಭಾ ಕ್ಷೇತ್ರಗಳಾದ ಚನ್ನಪಟ್ಟಣ, ಸಂಡೂರು ಹಾಗೂ ಶಿಗ್ಗಾಂವಿ ಸ್ಥಾನ ತೆರವಾಗಿದೆ. ಕಳೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಿಂದ ಗೆದ್ದು ಶಾಸಕರಾಗಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಲೋಕಸಭಾ ಚುನಾವಣೆ ವೇಳೆ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಗೆದ್ದು, ಇದೀಗ ಕೇಂದ್ರ ಸಚಿವರಾಗಿದ್ದಾರೆ. ಹೀಗಾಗಿ ಕುಮಾರಸ್ವಾಮಿ ಚನ್ನಪಟ್ಟಣ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಸಂಡೂರು ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ಇ. ತುಕರಾಂ ಸ್ಪರ್ಧಿಸಿ ಗೆದ್ದಿದ್ದರು. ಆದರೆ, ಅವರು ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾಗಿದ್ದರು. ಹೀಗಾಗಿ ತುಕರಾಂ ತಮ್ಮ ಸಂಡೂರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಶಿಗ್ಗಾಂವಿ ಕ್ಷೇತ್ರದಿಂದ ಶಾಸಕರಾಗಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಲೋಕಸಭಾ ಚುನಾವಣೆ ವೇಳೆ ಹಾವೇರಿ ಕ್ಷೇತ್ರದಿಂದ ಗೆದ್ದು ಸಂಸದರಾಗಿದ್ದಾರೆ.

ಹೀಗಾಗಿ ಬೊಮ್ಮಾಯಿ ಶಿಗ್ಗಾಂವಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಮೂರು ತೆರವಾಗಿರುವ ವಿಧಾನಸಭಾ ಕ್ಷೇತ್ರಗಳಿಗೆ ಇದೀಗ ಚುನಾವಣಾ ಆಯೋಗ ಉಪ ಚುನಾವಣೆ ಘೋಷಣೆ ಮಾಡಿದೆ. ಉಪಚುನಾವಣೆ ನಡೆಯುತ್ತಿರುವ ಮೂರು ಕ್ಷೇತ್ರಗಳಿಗೂ ಆಡಳಿತಾರೂಢ ಕಾಂಗ್ರೆಸ್, ಎನ್‌ಡಿಎ ಮೈತ್ರಿ ಕೂಟದ ಬಿಜೆಪಿ ಮತ್ತು ಜೆಡಿಎಸ್ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದು ಕೊಂಡಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್, ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದು ಸ್ಥಾನದಲ್ಲಿ ಗೆದಿದ್ದವು. ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೂ ಮುನ್ನವೇ ರಾಜಕೀಯ ಪಕ್ಷಗಳು ಕ್ಷೇತ್ರಗಳಲ್ಲಿ ಕಾರ್ಯಕರ್ತರ ಸಭೆ ನಡೆಸಿದರೆ, ಆಡಳಿತಾರೂಢ ಕಾಂಗ್ರೆಸ್ ಅಭಿವೃದ್ಧಿಗೆ ■ 6ನೇ ಪುಟಕ್ಕೆ

ವಯನಾಡ್‌ನಿಂದ ಪ್ರಿಯಾಂಕಾ ಗಾಂಧಿ ಸ್ಪರ್ಧೆ



ನವದೆಹಲಿ, ಅ.15– ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಕೊನೆಗೂ ಕಣಕ್ಕೆ ಇಳಿದಿದ್ದಾರೆ. ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿದ್ದು ನ.13ರಂದು ಉಪ ಚುನಾವಣೆ ನಡೆಯಲಿರುವ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಿಂದ ಅವರು ಸ್ಪರ್ಧೆ ಮಾಡಲಿದ್ದಾರೆ. ಈ ಬಗ್ಗೆ ಎಐಸಿಸಿ ಅಧಿಕೃತವಾಗಿ ತಿಳಿಸಿದೆ. ಕೇಂದ್ರ ಚುನಾವಣಾ ಆಯೋಗ ಮಂಗಳವಾರ ವಯನಾಡು ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆಯನ್ನು ಘೋಷಣೆ ಮಾಡಿತ್ತು. ಇದರ ಬೆನ್ನಲ್ಲೇ ಎಐಸಿಸಿ ತನ್ನ ಸ್ಪರ್ಧಿಯನ್ನು ಅಂತಿಮ ಮಾಡಿದೆ. ಈಗಾಗಲೇ ಈ ಕ್ಷೇತ್ರದಿಂದ ಪ್ರಿಯಾಂಕಾ ಗಾಂಧಿ ಅವರನ್ನು ಕಣಕ್ಕಿಳಿಸುವುದು ಖಚಿತವೂ ಆಗಿತ್ತು.

ಚುನಾವಣೆ ಘೋಷಣೆಯಾದ ಬಳಿಕ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲು ಕಾಂಗ್ರೆಸ್ ನಿರ್ಧರಿಸಿತ್ತು. ಕಳೆದ ಲೋಕಸಭಾ ಚುನಾವಣೆಯ ವೇಳೆ ವಯನಾಡ್ ಹಾಗೂ ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ಸ್ಪರ್ಧೆ ಮಾಡಿದ್ದರು. ಎರಡೂ ಕ್ಷೇತ್ರದಲ್ಲಿ ಗೆದ್ದಿದ್ದ ಅವರು ತಮ್ಮ ಕುಟುಂಬದ ಪ್ರತಿಷ್ಠೆಯ ಕ್ಷೇತ್ರವಾಗಿದ್ದ ರಾಯ್‌ಬರೇಲಿಯನ್ನು ಉಳಿಸಿಕೊಂಡು ವಯನಾಡು ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಈಗ ಅಣ್ಣನ ಕ್ಷೇತ್ರದಲ್ಲಿ ತಂಗಿ ಸ್ಪರ್ಧೆ ಮಾಡಲಿದ್ದಾರೆ. ಇದು ಅವರ ಮೊದಲ ಚುನಾವಣೆಯಾಗಿದೆ. ಮುಸ್ಲಿಂ ಸಮುದಾಯದ ಮತಗಳು ಈ ಕ್ಷೇತ್ರದಲ್ಲಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ಷೇತ್ರದಲ್ಲಿ ಪ್ರಿಯಾಂಕಾ ಗಾಂಧಿ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ಮಹಾರಾಷ್ಟ್ರ ವಿಧಾನಸಭೆಗೆ ನ.20, ಜಾರ್ಖಂಡ್‌ನಲ್ಲಿ ನ.13, 20ಕ್ಕೆ ಚುನಾವಣೆ



ನವದೆಹಲಿ, ಅ.15–ಮಹಾರಾಷ್ಟ್ರದಲ್ಲಿ 288 ಕ್ಷೇತ್ರಗಳಿಗೆ ನವೆಂಬರ್ 20ರಂದು ಒಂದೇ ಹಂತದಲ್ಲಿ ವಿಧಾನಸಭೆಗೆ ಮತದಾನ ನಡೆಯಲಿದ್ದರೆ, ಜಾರ್ಖಂಡ್‌ನಲ್ಲಿ 81 ಕ್ಷೇತ್ರಗಳಿಗೆ ನವೆಂಬರ್ 13ರಂದು ಮೊದಲ ಹಂತದ ಮತದಾನ ನಡೆದರೆ, 2ನೇ ಹಂತದ ಮತದಾನ ನವೆಂಬರ್ 20 ರಂದು ನಿಗದಿಯಾಗಿದೆ. ನವೆಂಬರ್ 23 ರಂದು ಮತ ಎಣಿಕೆ ನಡೆಯಲಿದೆ. ಇದೇ ವೇಳೆ ಇತ್ತೀಚೆಗೆ ಪೂರ್ಣಗೊಂಡ ಹರ್ಯಾಣದ, ಜಮ್ಮು–ಕಾಶ್ಮೀರ ವಿಧಾನಸಭಾ ಚುನಾವಣೆಗಳಲ್ಲಿ ಯಾವುದೇ ಉಪಚುನಾವಣೆಗಳು ಇಲ್ಲ ಎಂದು ಮುಖ್ಯ ಆಯುಕ್ತರು ಘೋಷಿಸಿದ್ದಾರೆ.

ಇಂದು ಮುಡಾ ಅಧ್ಯಕ್ಷ ಸ್ಥಾನಕ್ಕೆ ಕೆ.ಮರೀಗೌಡ ರಾಜೀನಾಮೆ?

- ಸಿಎಂ ಸಿದ್ದರಾಮಯ್ಯ ಸೂಚನೆ ಮೇರೆಗೆ ಹುದ್ದೆ ತ್ಯಜಿಸಲು ನಿರ್ಧಾರ
- ಆಡಳಿತಾಧಿಕಾರಿ ನೇಮಕಕ್ಕೆ ಸರ್ಕಾರ ನಿರ್ಧಾರ

ಮೈಸೂರು, ಅ.15(ಆರ್‌ಕೆ)–ಇಡೀ ದೇಶದಲ್ಲೇ ಸುದ್ದಿಯಾಗಿರುವ ಮುಡಾ ನಿವೇಶನ ಹಂಚಿಕೆ ಹಗರಣದ ಹಿನ್ನೆಲೆಯಲ್ಲಿ ಮನ ನೊಂದಿರುವ ಕೆ.ಮರೀಗೌಡ ಅವರು ನಾಳೆ (ಅ.16) ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ ಎಂದು ವಿಶ್ವಸನೀಯ ಮೂಲಗಳಿಂದ ತಿಳಿದು ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆಯಂತೆ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಕೆ.ಮರೀಗೌಡ ನಿರ್ಧರಿಸಿದ್ದಾರೆ ಎಂದು ಅವರ ಆಪ್ತ ವಲಯ ತಿಳಿಸಿದೆ. 15 ದಿನಗಳ ಹಿಂದೆಯೇ ಪ್ರಕರಣ ತೀವ್ರ ಸ್ವರೂಪ ಪಡೆದುಕೊಂಡು ಪ್ರತಿಪಕ್ಷಗಳು ಹಾಗೂ ಸ್ವಪಕ್ಷದ ಕೆಲವು ಕಾರ್ಯಕರ್ತರು ಆರೋಪ



ಕೆ.ಮರೀಗೌಡ

ಮಾಡುತ್ತಿದ್ದರಿಂದ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾದ ಕಾರಣ ಹುದ್ದೆ ತ್ಯಜಿಸಲು ಮರೀಗೌಡರು ಮುಂದಾಗಿದ್ದರಾದರೂ, ಕೆಲ ಹಿರಿಯ ಸಚಿವರು ದಸರಾ ಮಹೋತ್ಸವದ ನಂತರ ರಾಜೀನಾಮೆ ನೀಡುವಂತೆ ಸಲಹೆ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಇಂದು ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಬೆಂಗಳೂರಿನಲ್ಲಿ ಪ್ರತ್ಯೇಕ ಸಭೆ ನಡೆಸಿ ಸಮಾಲೋಚನೆ ನಡೆಸಿದ ಬಳಿಕ ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮರೀಗೌಡರಿಗೆ ನಿರ್ದೇಶನ ನೀಡಲಾಗಿದೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ನಾಳೆ(ಅ.16) ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಗಳಿಗೆ ಕೆ.ಮರೀಗೌಡ ರಾಜೀನಾಮೆ ಪತ್ರ ಸಲ್ಲಿಸಲಿದ್ದಾರೆ ಎನ್ನಲಾಗಿದೆ. ಸುದ್ದಿ ವಾಹಿನಿಗಳಲ್ಲೂ ಮುಡಾ ■ 6ನೇ ಪುಟಕ್ಕೆ

ಮಾದಕ ವಸ್ತು ನಿಯಂತ್ರಣಕ್ಕೆ ಕಾನೂನು ತಿದ್ದುಪಡಿಗೆ ಚಿಂತನೆ



ಬೆಂಗಳೂರು, ಅ.15, (ಕೆಎಂಶಿ)– ಮಾದಕ ವಸ್ತುಗಳ ನಿಯಂತ್ರಣಕ್ಕೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಲು ಸರ್ಕಾರ ಯೋಚಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಅವರು ಇಂದು ರಾಜ್ಯ NSS ಕೋಶ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಹಭಾಗಿತ್ವದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ತಂಬಾಕು ಮುಕ್ತ ಯುವ ಅಭಿಯಾನ 2.0 ಬೃಹತ್ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯುವಜನತೆ ಈ ದುಶ್ಚಟಕ್ಕೆ ಬಲಿಯಾಗದಂತೆ ಮಾದಕ ವಸ್ತುಗಳ ದಂಧೆಯನ್ನು ನಿಗ್ರಹಿಸುವುದೇ ಸರ್ಕಾರದ ಗುರಿ ಎಂದರು. WHO ಸಂಸ್ಥೆ ವರದಿಯಂತೆ ಭಾರತದಲ್ಲಿ ಪ್ರತಿ ವರ್ಷ 13.5 ಲಕ್ಷ ಜನರು ತಂಬಾಕು ಸೇವನೆಯಿಂದ ಸಾವಿಗೆ ಈಡಾಗುತ್ತಿದ್ದಾರೆ ಎಂಬುದು ಆತಂಕಕಾರಿ ವಿಷಯ. ಯುವಜನತೆ ತಮ್ಮ ಭವಿಷ್ಯ ರೂಪಿಸಿಕೊಳ್ಳುವ ಬದಲು ಈ ದುಶ್ಚಟಗಳಿಗೆ ಬಲಿಯಾಗುತ್ತಿರುವುದರಿಂದ ಈ ಪ್ರಮಾಣದ ಸಾವು ಸಂಭವಿಸುತ್ತಿದೆ. ತಂಬಾಕು ಸೇವಿಸುತ್ತಿರುವವರಲ್ಲಿ ಶೇ.50ರಷ್ಟು ಜನ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಯುವಜನತೆ ತಂಬಾಕು ■ 6ನೇ ಪುಟಕ್ಕೆ

ಮುಡಾ ಹಗರಣದಲ್ಲಿ ಲೋಕಾಯುಕ್ತ ಪೊಲೀಸರಿಂದ ಸಾಕ್ಷ್ಯ, ದಾಖಲೆ ನಾಶ

ರಾಜ್ಯಪಾಲರಿಗೆ ಆರ್‌ಟಿಐ ಕಾರ್ಯಕರ್ತ ಗಂಗರಾಜು ದೂರು

ಸರ್ಕಾರಕ್ಕೆ ಇವರಿಂದಲೇ ಮಾಹಿತಿ ಸೋರಿಕೆ, ಸಿಬಿಐನಿಂದ ಮಾತ್ರ ಸತ್ಯಾಂಶ ಬಹಿರಂಗ ಸಾಧ್ಯ




ಮೈಸೂರು, ಅ.15(ಬಿಎಲ್‌ಯು)– ಸಾವಿರಾರು ಕೋಟಿ ರೂಪಾಯಿಯ ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ದಿನಕ್ಕೊಂದು ತಿರುವು ಪಡೆಯುತ್ತಿದೆ. ಹಗರಣದ ಬಗ್ಗೆ ತನಿಖೆ ನಡೆಸಬೇಕಾಗಿದ್ದ ಲೋಕಾಯುಕ್ತ ಪೊಲೀಸರೇ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆಂಬ ಗಂಭೀರ ಆರೋಪ ಕೇಳಿ ಬಂದಿದೆ. ಅಷ್ಟೆ ಅಲ್ಲದೆ ಹಗರಣದ ಬಗ್ಗೆ ದಾಳಿ ನಡೆಸಲು ವಿಳಂಬ ಮಾಡಿದ ಕಾರಣ ದಾಖಲೆಗಳೆಲ್ಲಾ ನಾಪತ್ತೆಯಾಗಿದೆ ಎಂಬ ಆಪಾದನೆ ಕೂಡ ಲೋಕಾಯುಕ್ತ ಪೊಲೀಸರ ಮೇಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮೈಸೂರು ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾದ ಹಿನ್ನೆಲೆ ಚುರುಕಿನಿಂದ ತನಿಖೆ ನಡೆಯುತ್ತಿದೆ. ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ, ಭಾಮೈದ ಬಿ.ಎಂ.ಮಲ್ಲಿಕಾರ್ಜುನ ಹಾಗೂ ಜಮೀನು ಮಾಲೀಕ ದೇವರಾಜು ವಿರುದ್ಧ ಲೋಕಾಯುಕ್ತದಲ್ಲಿ ತನಿಖೆ ಪ್ರಗತಿಯಲ್ಲಿದೆ. ಹೀಗಿರುವಾಗ ಲೋಕಾಯುಕ್ತ ಪೊಲೀಸರ ಕಾರ್ಯ ನಿರ್ವಹಣೆ ಬಗ್ಗೆ ಅನುಮಾನ ಮೂಡುವ ಬಹಳಷ್ಟು ಅಂಶಗಳು ಬಯಲಾಗಿದ್ದು, ಈ ಆರೋಪ ಈಗ ರಾಜ್ಯಭವನದ ಅಂಗಳ ತಲುಪಿದೆ. ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಲೋಕಾಯುಕ್ತರು ವಿರುದ್ಧವೇ ದೂರು ನೀಡಿದ್ದಾರೆ. ಮುಡಾ ಹಗರಣ ಸಂಬಂಧ ಒಂದು ಸಾವಿರ ಪುಟಗಳ ಸಾಕ್ಷ್ಯ ಸಂಗ್ರಹಿಸಿದ್ದರೂ ಲೋಕಾಯುಕ್ತ ಪೊಲೀಸರು ದಾಳಿ ನಡೆಸದೆ ಹಗರಣದಲ್ಲಿ ಶಾಮೀಲಾಗಿದ್ದಾರೆ ಎಂದು ಆರೋಪಿಸಿದ್ದಾರೆ. ರಾಜ್ಯಪಾಲರಿಗೆ ಇ–ಮೇಲ್ ಹಾಗೂ ಅಂಚೆ ಮೂಲಕ ದೂರು ಸಲ್ಲಿಸಿರುವ ಗಂಗರಾಜು, ಲೋಕಾಯುಕ್ತ ಪೊಲೀಸರು ಹಗರಣದಲ್ಲಿ ಯಾವ ರೀತಿ ಭಾಗಿಯಾಗಿದ್ದಾರೆ. ಯಾವ ರೀತಿ ಹಣದ ಅವ್ಯವಹಾರ ನಡೆದಿದೆ ಎಂಬ ಬಗ್ಗೆ ಸಮಗ್ರ ಮಾಹಿತಿ ಸಲ್ಲಿಸಿದ್ದಾರೆ. ಮೈಸೂರು ಲೋಕಾಯುಕ್ತ ಕಚೇರಿಯ ಇನ್ಸ್‌ಪೆಕ್ಟರ್ ರವಿಕುಮಾರ್ ನೇತೃತ್ವದ ತಂಡ ಮುಡಾ ಅಕ್ರಮಗಳ ಬಗ್ಗೆ ಸಾವಿರ ಪುಟಗಳ ಸಾಕ್ಷ್ಯ ಸಂಗ್ರಹಿಸಿತ್ತು. ಈ ಸಂಬಂಧ ಸರ್ಚ್ ವಾರೆಂಟ್‌ಗಾಗಿ ಅಂದಿನ ಲೋಕಾಯುಕ್ತ ಎಸ್ಪಿ ವಿ.ಜೆ.ಸುಜಿತ್ ಮೂಲಕ ■ 6ನೇ ಪುಟಕ್ಕೆ

ಲೋಕಾಯುಕ್ತ ಪೊಲೀಸರಿಂದಲೇ 8 ಕೋಟಿ ಡೀಲ್

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರ ಕಾನೂನುಬಾಹಿರ ಕೃತ್ಯಗಳನ್ನು ಮುಚ್ಚಿ ಹಾಕಲು ಲೋಕಾಯುಕ್ತ ಡಿವೈಎಸ್ಪಿ ಎಸ್.ಕೆ.ಮಾಲತೇಶ್ ಹಾಗೂ ಇನ್ಸ್‌ಪೆಕ್ಟರ್ ರವಿಕುಮಾರ್ 8 ಕೋಟಿ ರೂಪಾಯಿಗಳ ಲಂಚದ ಒಪ್ಪಂದದ ಮಾತುಕತೆ ನಡೆಸಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಗಂಗರಾಜು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಸಲ್ಲಿಸಿದ ದೂರಿನಲ್ಲಿ ಗಂಭೀರ ಆರೋಪ ಮಾಡಿದ್ದಾರೆ. ಈ ಹಗರಣ ಮುಚ್ಚಿ ಹಾಕಲು ಮುಡಾ ಅಧಿಕಾರಿಗಳು ಹಾಗೂ ಇತರರು ಕರ್ನಾಟಕ ಲೋಕಾಯುಕ್ತಕ್ಕೆ 8 ಕೋಟಿ ರೂಪಾಯಿ ನೀಡಿದ್ದಾರೆ ಎಂದು ಸ್ವತಃ ಮಾಲತೇಶ್ ಮೈಸೂರು ಲೋಕಾಯುಕ್ತ ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದಾರೆ ಎಂದು ಹೇಳಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ಮಾಲತೇಶ್ ಮೈಸೂರಿನ ಇಲವಾಲ ಹೋಬಳಿ ಕರಕನಹಳ್ಳಿ ಗ್ರಾಮದ ಸರ್ವೆ ನಂಬರ್ 196/2ರಲ್ಲಿ ಬೇನಾಮಿಯಾಗಿ ಫಾರ್ಮ್ ಹೌಸ್ ಹೊಂದಿದ್ದಾರೆ ಎಂದು ಆಪಾದಿಸಿದ್ದಾರೆ. ಈ ಹಿನ್ನೆಲೆ ಮುಡಾ ಹಗರಣದಲ್ಲಿ ಭಾಗಿಯಾಗಿರುವ ತಪ್ಪಿತಸ್ಥ ಲೋಕಾಯುಕ್ತರ ವಿರುದ್ಧ ತನಿಖೆ ನಡೆಸಬೇಕು. ಈ ಸಂಬಂಧ ಇವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಗಂಗರಾಜು ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಅ.21ರಿಂದ 27ರವರೆಗೆ ಮಹಾಭಾರತ ಪ್ರವಚನ ಮಾಲಿಕೆ



ಮೈಸೂರು, ಅ.15–ಮೈಸೂರಿನ ಶ್ರೀರಾಂಪುರದಲ್ಲಿರುವ (ಶ್ರೀ ಉತ್ತರಾದಿ ಮಠಕ್ಕೆ ಸೇರಿರುವ) ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದಲ್ಲಿ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ ಆಜ್ಞಾನುಸಾರ ಅ.21ರಿಂದ 27ರವರೆಗೆ ಸಂಜೆ 6ರಿಂದ 7ರವರೆಗೆ ನಾಡಿನ ಸುಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ ಶ್ರೀನಿವಾಸತೀರ್ಥಾಚಾರ್ಯ ಹೆಬ್ಬೂರು ಇವರಿಂದ ಮಹಾಭಾರತ ಪ್ರವಚನ ಮಾಲಿಕೆ (ಆದಿಪರ್ವ) ಎಂಬ ವಿಷಯದ ಕುರಿತು ವಿಶೇಷ ಪ್ರವಚನವನ್ನು ಆಯೋಜಿಸಲಾಗಿದೆ.

ಅ.27ರಂದು ಭಾನುವಾರ ಬೆಳಿಗ್ಗೆ ಮಂಗಳ ಮಹೋತ್ಸವದ ಪರ್ವಕಾಲದಲ್ಲಿ ಲೋಕಕ್ಷೇಮಕ್ಕಾಗಿ 'ನವಗ್ರಹ ಹೋಮ'ವನ್ನು ಏರ್ಪಡಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ವ್ಯವಸ್ಥಾಪಕ ಪಂ.ಹೇಮಂತಾಚಾರ್ಯ ಗುಡಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 8147205326 ಸಂಪರ್ಕಿಸಬಹುದು.

ರಾಮಾನುಜಾಚಾರ್ಯರ ಸಾಮಾಜಿಕ ಗುರುಕುಲ ಸೇವಾಶ್ರಮಕ್ಕೆ ಶಂಕುಸ್ಥಾಪನೆ



ಮೈಸೂರಿನ ಕೆ.ಆರ್.ಎಸ್ ರಸ್ತೆಯ ನಿಸರ್ಗ ಧಾಮ ಕಲ್ಲೂರು ನಾಗನಹಳ್ಳಿ ಸಮೀಪವಿರುವ ರಾಮಾನುಜಾಚಾರ್ಯರ ಸಾಮಾಜಿಕ ಗುರುಕುಲ ಸೇವಾಶ್ರಮದ ಶಂಕುಸ್ಥಾಪನೆ ನೆರವೇರಿಸಲಾಯಿತು.

ಮೈಸೂರು,ಅ.15–ಮೈಸೂರಿನ ಕೆಆರ್‌ಎಸ್ ರಸ್ತೆಯ ನಿಸರ್ಗಧಾಮ ಕಲ್ಲೂರು ನಾಗನಹಳ್ಳಿ ಸಮೀಪವಿರುವ ರಾಮಾನುಜಾಚಾರ್ಯರ ಸಾಮಾಜಿಕ ಗುರುಕುಲ ಸೇವಾಶ್ರಮದ ಶಂಕುಸ್ಥಾಪನೆ ನೆರವೇರಿತು.

ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಸಮಾಜ ಸೇವಕರು, ಕೃಷಿಕರಾದ ಬಾಲರಾಜು, ಇಂದಿನ ವಿದ್ಯಾರ್ಥಿಗಳಿಗೆ ಗುರುಕುಲ ಪದ್ಧತಿಯಲ್ಲಿ ವೇದ ಶಿಕ್ಷಣವನ್ನು ನೀಡುವುದು ವೇದಪಾಠ, ಆಯುರ್ವೇದಿಕ್ ಚಿಕಿತ್ಸೆ ನೊಂದ ಕುಟುಂಬಗಳಿಗೆ ಸಹಾಯ, ಸಹಕಾರ ಮಾಡುತ್ತಾ, ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ನೆರವಾಗುವುದು ನಮ್ಮ ಮೂಲ ಉದ್ದೇಶವೆಂದು ತಿಳಿಸಿದರು.

ಟ್ರಸ್ಟ್‌ನ ಸದಸ್ಯ ಶಾಂತಕುಮಾರ್ ಮಾತನಾಡಿ, ನಿಸರ್ಗಧಾಮದ ಪರಿಕಲ್ಪನೆಯನ್ನಿಟ್ಟುಕೊಂಡು ಇಂದಿನ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದು ನಮ್ಮ ಉದ್ದೇಶವಾಗಿದೆ. ಸನಾತನ ಸಂಸ್ಕೃತಿ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ ಹಳ್ಳಿಗಳ ನೊಂದ ಕುಟುಂಬಗಳಿಗೆ ನೆರವು ನೀಡಿ ಅವರಿಗೂ ಕೂಡ ಶಿಕ್ಷಣ ದೊರಕುವಂತಾಗಲಿ ಎಂಬುದು ನಮ್ಮ ಉದ್ದೇಶ ಎಂದರು. ಟ್ರಸ್ಟಿಗಳಾದ ಕವಿತಾ ಕೆ.ಆರ್ ಮತ್ತು ಭಕ್ತಾದಿಗಳು ಉಪಸ್ಥಿತರಿದ್ದರು.

ಸರ್ಕಾರಿ ಉರ್ದು ಶಾಲಾ ಮಕ್ಕಳಿಗೆ ಸ್ವೆಟರ್, ನೋಟ್‌ಬುಕ್ ವಿತರಣೆ



ಮೈಸೂರಿನ ಹೆಲ್ಪಿಂಗ್ ಹ್ಯಾಂಡ್ಸ್ ಜೈನ್ ಯುವ ಸಂಘಟನೆಯಿಂದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ಸ್ವೆಟರ್ಸ್, ನೋಟ್‌ಬುಕ್ ವಿತರಿಸಲಾಯಿತು. ಸಂಸ್ಥೆಯ ಆನಂದ್ ಪಟ್ವಾ, ಮಹಾವೀರ ಖಾಬಿಯಾ, ರಾಜನ್ ಬಾಗ್ಮಾರ್, ಮನೋಹರ್ ಸಂಕಲಾ, ಸಂಪತ್ ಬಗ್ಮಾರ್ ಪ್ರಕಾಶ್ ಗಾಂಧಿ, ಜಂಬು ಲೋಢಾ, ಸೀಮಾ ಬೋಹ್ರಾ, ಬಿಂದು ಬಾಗ್ಮಾರ್, ಕುಷ್ಬು ಮುತಾ, ರಸನಾ ಲೋಢಾ, ಆಶಾ ಬಾಗ್ಮಾರ್ ಇದ್ದರು.

ಅತ್ಯುತ್ತಮ ಮಾರುಕಟ್ಟೆ ವ್ಯವಸ್ಥಾಪಕ ಪ್ರಶಸ್ತಿ



ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕ ಡಾ.ಅಮ್ಮಸಂದ್ರ ಸುರೇಶ್ ಅವರಿಗೆ ಕರ್ನಾಟಕ ಅಂಚೆ ವೃತ್ತದ ಫಿಲಾಟೆಲಿ ಪ್ರಶಸ್ತಿ ನೀಡಲಾಯಿತು.

ಮೈಸೂರು,ಅ.15–ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕ ಡಾ.ಅಮ್ಮಸಂದ್ರ ಸುರೇಶ್ ಅವರು 2023–24ನೇ ಸಾಲಿನ ಕರ್ನಾಟಕ ಅಂಚೆ ವೃತ್ತದ ಫಿಲಾಟೆಲಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಾಜ್ಯ ಮಟ್ಟದ ಎರಡು ಪ್ರಶಸ್ತಿಗಳಿಗೆ ಆಯ್ಕೆಯಾಗಿರುವ ಅವರು ಅಂಚೆ ಚೀಟಿ ಸಂಗ್ರಹದ ಠೇವಣಿ ಖಾತೆಗಳನ್ನು ತೆರೆಯುವುದು, ಕಾರ್ಯಾಗಾರಗಳು, ಸೆಮಿನಾರ್‌ಗಳನ್ನು ನಡೆಸುವ ವಿಭಾಗದಲ್ಲಿ ಪ್ರಥಮ ಸ್ಥಾನ ಮತ್ತು ವಿಶೇಷ ಅಂಚೆ ಲಕೋಟೆ, ಚಿತ್ರ ಅಂಚೆ ಕಾರ್ಡ್‌ಗಳು ವಿಭಾಗದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಇತ್ತೀಚೆಗೆ ಬೆಂಗಳೂರಿನ ಜನರಲ್ ಪೋಸ್ಟ್ ಆಫೀಸ್‌ನ ಮೇಘದೂತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಅವರು ಪ್ರಶಸ್ತಿ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕ ವೃತ್ತದ ಪೋಸ್ಟ್ ಮಾಸ್ಟರ್ ಜನರಲ್ ಡಾ. ಚಂದ್ರಶೇಖರ್ ಕಾಕುಮನು, ನಿರ್ದೇಶಕರಾದ ಡಾ.ಸಂದೇಶ್ ಮಹದೇವಪ್ಪ ಹಾಜರಿದ್ದರು.

ಅ.20ರಂದು ಸಖಿ ದಸರಾ ಉತ್ಸವ

ಮೈಸೂರು,ಅ.15–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಅ.20ರಂದು ಮಧ್ಯಾಹ್ನ 3ರಿಂದ 5ರವರೆಗೆ ಸಖಿ ದಸರಾ ಉತ್ಸವ ಹಮ್ಮಿಕೊಳ್ಳಲಾಗಿದೆ. ಈ ಉತ್ಸವದಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದ ಮಹಿಳೆಯರಿಗಾಗಿ ಜುಮುಕಾ ಸ್ಪರ್ಧೆ, ಮೆಹಂದಿ ಸ್ಪರ್ಧೆ ಹಾಗೂ ಕೇಕ್ ತಿನ್ನುವ ಸ್ಪರ್ಧೆಗಳಿರುತ್ತವೆ. ಜುಮುಕಾ ಸ್ಪರ್ಧೆಯಲ್ಲಿ ಮಹಿಳೆಯರು ತಮ್ಮ ಬಳಿ ಇರುವ ಯಾವುದೇ ಬಗೆಯ ಜುಮುಕಿಯನ್ನಾದರೂ ಧರಿಸಿ ಅದರ ವಿಶೇಷತೆಯನ್ನು ತೀರ್ಪುಗಾರರಿಗೆ ತಿಳಿಸಬೇಕು. ಮೆಹಂದಿ ಸ್ಪರ್ಧೆಯಲ್ಲಿ ಮಹಿಳೆಯರು ಮನೆಯಿಂದಲೇ ಒಂದು ಕೈಗೆ ಮಾತ್ರ ತಮ್ಮಿಷ್ಟದ ಮೆಹಂದಿ ಧರಿಸಿ ಬರಬಹುದಾಗಿದೆ. ಇದರ ಜೊತೆಗೆ ಮೂವತ್ತು ಸೆಕೆಂಡ್‌ನಲ್ಲಿ ಕೇಕ್ ತಿನ್ನುವ ಸ್ಪರ್ಧೆಯೂ ಇರಲಿದೆ. ಸ್ಪರ್ಧೆಗಳು ನಡೆಯುವ ಸ್ಥಳ: ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜು ಆವರಣ, ರಾಮಕೃಷ್ಣನಗರ, ಮೈಸೂರು. ನೋಂದಣಿಗಾಗಿ ಸಂಪರ್ಕಿಸಿ 9964790442, 8310306882

ಭಗವದ್ಗೀತೆಯ ಸಾರ ಕುರಿತು ಪ್ರವಚನ



ಮೈಸೂರು, ಅ. 15– ಮೈಸೂರಿನ ಭಾರತೀಯ ವಿದ್ಯಾಭವನದ ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಅ.26 ಮತ್ತು 27ರಂದು ಸಂಜೆ 6.45ರಿಂದ 7.45ರವರೆಗೆ ಬೆಂಗಳೂರಿನ ವೇದಾಂತ ಇನ್‌ಸ್ಟಿಟ್ಯೂಟ್ ಸಂಸ್ಥಾಪಕ ಆಚಾರ್ಯ ಶ್ರೀ ಈಶ್ವರನ್ ಅವರಿಂದ ಭಗವದ್ಗೀತೆಯ ಸಾರ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ ಏರ್ಪಡಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ. 90358 96665 ಸಂಪರ್ಕಿಸಬಹುದು.

ಯುವರಾಜ ಕಾಲೇಜಿನಲ್ಲಿ ಅವ್ಯವಸ್ಥೆ: ವಿದ್ಯಾರ್ಥಿಗಳ ದಿಢೀರ್ ಪ್ರತಿಭಟನೆ



ಯುವರಾಜ ಕಾಲೇಜಿನ ಆವರಣದಲ್ಲಿ ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಅ.15(ಜಿಎ)–ಮೈಸೂರು ಯುವರಾಜ ಕಾಲೇಜಿನಲ್ಲಿ ಸೂಕ್ತ ಮೂಲ ಸೌಕರ್ಯಗಳ ವ್ಯವಸ್ಥೆ ಇಲ್ಲದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮಂಗಳವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಕಾಲೇಜಿನಲ್ಲಿ ಅವ್ಯವಸ್ಥೆ ಆಗರದಿಂದ ಬೇಸತ್ತ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಧರಣಿ ನಡೆಸಿದರು. ಸೂಕ್ತ ಶೌಚಾಲಯ, ಕುಡಿಯುವ ನೀರು, ಸ್ವಚ್ಛತೆಗೆ ಆದ್ಯತೆ ಕೊಡದ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ವಿರುದ್ಧ ವಿದ್ಯಾರ್ಥಿಗಳು ಕಿಡಿಕಾರಿದರು.

ಯುವರಾಜ ಕಾಲೇಜಿಗೆ ವಿದ್ಯಾರ್ಥಿ ಗಳು ಬೇರೆ ಬೇರೆ ಜಿಲ್ಲೆಗಳಿಂದ ಬಂದು ವ್ಯಾಸಂಗ ಮಾಡುತ್ತಿದ್ದಾರೆ. ಆದರೆ, ಕಾಲೇಜಿನಲ್ಲಿ ಗಬ್ಬೆದ್ದು ನಾರುವ ಶೌಚಾಲಯ, ಶುದ್ಧ ಕುಡಿಯುವ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಉಂಟಾಗಿದೆ. ಪ್ರತಿಷ್ಠಿತ ಕಾಲೇಜಿನಲ್ಲೇ ಸೂಕ್ತ ಮೂಲಸೌಕರ್ಯಗಳು ವಿದ್ಯಾರ್ಥಿಗಳಿಗಿಲ್ಲ. ವಸತಿ ನಿಲಯದಲ್ಲೂ ಗುಣಮಟ್ಟದ ಊಟ ಕೊಡುತ್ತಿಲ್ಲ. ಇತ್ತ ಕಾಲೇಜಿನಲ್ಲೂ ಸೂಕ್ತ ವ್ಯವಸ್ಥೆಗಳಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವಂತೆ ಆಗ್ರಹಿಸಿದರು.

ಒಳ ಮೀಸಲಾತಿ: ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹ

ಜಾತಿಗಳ ಔದ್ಯೋಗಿಕ, ಸಾಮಾಜಿಕ, ಆರ್ಥಿಕ ಸ್ಥಿತಿ ಕುರಿತು ಸಮೀಕ್ಷೆಗೆ ಆಗ್ರಹ

ಮೈಸೂರು,ಅ.15(ಜಿಎ)–ಒಳ ಮೀಸಲಾತಿ ಜಾರಿ ಕುರಿತ ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹವಾದರೂ, ಜಾರಿ ವೇಳೆ ರಾಜ್ಯ ಸರ್ಕಾರ ಸಂಬಂಧಿತ ಜಾತಿಗಳ ಔದ್ಯೋಗಿಕ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಕುರಿತ ಇತ್ತೀಚಿನ ಸ್ಥಿತಿಗತಿ ಸಮೀಕ್ಷೆ ನಡೆಸಬೇಕಾದ ಅಗತ್ಯವಿದೆ ಎಂದು ರಾಜ್ಯ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ತೀರ್ಪಿನ ಮಾನದಂಡದಂತೆ ಪರಿಶಿಷ್ಟ ಜಾತಿಯಲ್ಲಿ ಬರುವ ಉಪ ಜಾತಿಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಗದ ಬಗ್ಗೆ ಖಚಿತವಾದ ಅಂಕಿ ಅಂಶಗಳನ್ನೊಳಗೊಂಡ ವರದಿ ಆಧಾರದ ಮೇಲೆ ರಾಜ್ಯ ಸರ್ಕಾರ ನ್ಯಾಯಯುತ ವರ್ಗೀಕರಣ ಮಾಡಬೇಕು, ವರ್ಗೀಕರಣವು ನ್ಯಾಯಯುತವಾದ, ಅಗತ್ಯವಾದ, ಪೂರ್ಣ ಅಂಕಿ ಅಂಶಗಳನ್ನು ಒಳಗೊಂಡಿರಬೇಕೆಂದು ತಿಳಿಸಿದೆ. ಹೀಗಾಗಿ ಇದನ್ನು ಪಾಲನೆ ಮಾಡಬೇಕು. ಈಚೆಗೆ ಜನಗಣತಿ ನಡೆದಿಲ್ಲ. ಈಗ ರಾಜ್ಯ ಸರ್ಕಾರ ಪಡೆದಿರುವ ಜಾತಿಗಣತಿ ವರದಿ ಸಹ ಪೂರ್ಣ ಮಾಹಿತಿ ಒಳಗೊಂಡಿಲ್ಲ. ಹೀಗಾಗಿ ಗ್ರಾಮ ಲೆಕ್ಕಿಗರು, ಮೊದಲಾದವರನ್ನು ಬಳಸಿಕೊಂಡು, ಜಿಲ್ಲಾಧಿಕಾರಿಗಳ ಅಡಿಯಲ್ಲಿ ಕೂಡಲೇ ರಾಜ್ಯಾದ್ಯಂತ ಈ ರೀತಿಯ ಅಂಕಿ ಅಂಶ ಸಂಗ್ರಹಿಸಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರ ಸದ್ಯದಲ್ಲಿಯೇ 2021ರ ಜನಗಣತಿ ನಡೆಸುವ ಸಾಧ್ಯತೆ ಇರುವುದರಿಂದ ಈ ಜಾತಿಗಳ ಜನಸಂಖ್ಯೆ, ಅವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುವ ಮೂಲಕ ಸುಪ್ರೀಂಕೋರ್ಟಿನ ತೀರ್ಪಿನಲ್ಲಿ ನೀಡಿರುವ ಮಾನದಂಡ ಪಾಲಿಸಲು ಸಾಧ್ಯವಾಗಬಹುದಾಗಿದೆ. ಈ ಬಗ್ಗೆ ಕೇಂದ್ರಕ್ಕೆ ಮನವಿಯೊಂದನ್ನು ಸಲ್ಲಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಿಂಧುವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಉಮಾಪತಿ ಮತ್ತಿತರರು ಉಪಸ್ಥಿತರಿದ್ದರು.

ಅ.20ರಂದು ರಾಜ್ಯ ಮಟ್ಟದ ಕರೋಕೆ ಗಾಯನ ಕಾರ್ಯಕ್ರಮ

ಸಂಗೀತ ಮನಸ್ಸಿನ ಆರೋಗ್ಯಕ್ಕೆ ಒಳ್ಳೆಯದು: ಶ್ರೀವತ್ಸ



ಸ್ವರ ಸಂಭ್ರಮ ರಾಜ್ಯಮಟ್ಟದ ಕರೋಕೆ ಗಾಯನ ಕಾರ್ಯಕ್ರಮದ ಪ್ರಚಾರದ ಪೋಸ್ಟರ್‌ಗಳನ್ನು ಶಾಸಕ ಟಿ.ಎಸ್. ಶ್ರೀವತ್ಸ ಬಿಡುಗಡೆ ಮಾಡಿದರು.

ಮೈಸೂರು,ಅ.15–ಕಲಾಭೂಮಿ ವತಿಯಿಂದ ಅ.20ರಂದು ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ ಹೂಟಗಳ್ಳಿ ಬಿ.ಎನ್.ರಾವ್ ಸಭಾಂಗಣದಲ್ಲಿ ನಡೆಯುವ ಸ್ವರ ಸಂಭ್ರಮ ರಾಜ್ಯಮಟ್ಟದ ಕರೋಕೆ ಗಾಯನ ಕಾರ್ಯಕ್ರಮದ ಪ್ರಚಾರ ಪೋಸ್ಟರ್‌ಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಇಂದಿನ ಒತ್ತಡ ಮತ್ತು ಕಲುಷಿತ ವಾತಾವರಣದ ಜೀವನದಲ್ಲಿ ಸಂಗೀತ ಮನಸ್ಸಿನ ಆರೋಗ್ಯವನ್ನು ಕಾಪಾಡುತ್ತದೆ. ಆದ್ದರಿಂದ ಮನಸ್ಸಿನ ಆರೋಗ್ಯಕ್ಕೆ ಸಂಗೀತವೇ ಮದ್ದು, ಸಂಗೀತದಿಂದ ಆರೋಗ್ಯ ವೃದ್ಧಿಯಾಗುತ್ತದೆ. ಸಂಗೀತಕ್ಕೆ ಅಗಾಧ ಶಕ್ತಿಯಿದ್ದು, ಎಂಥವರನ್ನೂ ತಲೆದೂಗುವಂತೆ ಮಾಡುತ್ತದೆ. ಹೀಗಾಗಿ ಜುಗುಪ್ಸೆ ಎನಿಸಿದಾಗ ಸಂಗೀತ ಆಲಿಸಿ ಆರೋಗ್ಯ ಹೆಚ್ಚಿಸಿಕೊಳ್ಳಿ ಎಂದರು.

ಚಿತ್ರ ನಿರ್ದೇಶಕರು ಹಾಗೂ ನಿರ್ಮಾಪಕರಾದ ಆಸ್ಕರ್ ಕೃಷ್ಣ, ಸ್ವರ ಸಂಭ್ರಮ ಕಾರ್ಯಕ್ರಮವು ಉದಯೋನ್ಮುಖ ಹಾಗೂ ಪರಿಣತ ಗಾಯಕ, ಗಾಯಕಿಯರಿಗೆ ಕನ್ನಡ ಚಿತ್ರರಂಗದ ಸಾಧಕರು, ಕಲಾವಿದರು ಹಾಗೂ ತಂತ್ರಜ್ಞರ ಸಮ್ಮುಖದಲ್ಲಿ ಹಾಡುವ ಅವಕಾಶ ಒದಗಿಸಿದ್ದು ಇದು ರಾಜ್ಯ ಮಟ್ಟದ ಕರೋಕೆ ಗಾಯನ ಕಾರ್ಯಕ್ರಮವಾಗಿದೆ. ವೇದಿಕೆಯಲ್ಲಿ ಆ ಹಾಡು ಹೇಳಲು ಇಚ್ಛಿಸುವವರು 9206694999/8660073484 ನಂಬರಿಗೆ ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು.

ಕಾರ್ಯಕ್ರಮದ ಆಯೋಜಕ ಬಿ.ನಿಂಗರಾಜ್, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಪ್ರದೀಪ್‌ಕುಮಾರ್, ಎಸ್.ಎನ್. ರಾಜೇಶ್, ಕಿಶೋರ್, ಕೀರ್ತಿ ಹಾಗೂ ಇನ್ನಿತರರು ಹಾಜರಿದ್ದರು.

ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರಕ್ಕೆ ನಟಿ ರಶ್ಮಿಕಾ ಮಂದಣ್ಣ ರಾಯಭಾರಿ



ನವದೆಹಲಿ: ಡೀಪ್ ಫೇಕ್ ವಿಡಿಯೋಗಳಿಗೆ ತುತ್ತಾಗಿ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದ ಖ್ಯಾತ ನಟಿ, ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಇದೀಗ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರಕ್ಕೆ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ರಶ್ಮಿಕಾ ಮಂದಣ್ಣ ಅವರನ್ನು ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ (I4C) ಬ್ರಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಲಾಗಿದೆ.

ಈ ಕುರಿತು ಖುದ್ದು ನಟಿ ವಿಷಯ ತಿಳಿಸಿದ್ದು, ಕೆಲವು ವರ್ಷಗಳ ಹಿಂದೆ ನನ್ನ ಡೀಪ್ ಫೇಕ್ ವಿಡಿಯೋ ವೈರಲ್ ಆಗಿದ್ದು ಗೊತ್ತೇ ಇದೆ. ಅದು ಸೈಬರ್ ಕ್ರೈಂ. ಅದರ ನಂತರ ನಾನು ಸೈಬರ್ ಅಪರಾಧಗಳ ವಿರುದ್ಧ ಹೋರಾಡಬೇಕು ಎಂದು ಯೋಚಿಸಿದೆ. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು ಎಂದುಕೊಂಡಿದ್ದೆ. ಆ ನಿಮಿತ್ತ ಕಾರ್ಯಯೋಜನೆ ರೂಪಿಸಿದ್ದೆ ಎಂದು ತಮ್ಮ ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಇದೇ ವೇಳೆ ನಾನು ಕೇಂದ್ರ ಸರ್ಕಾರದ ಜೊತೆಗೆ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ ಬ್ರಾಂಡ್ ಅಂಬಾಸಿಡರ್ ಆಗಿದ್ದೇನೆ ಎಂದು ಹೇಳಲು ನನಗೆ ಸಂತೋಷವಾಗಿದೆ. ಸೈಬರ್ ಕ್ರಿಮಿನಲ್‌ಗಳು ಎಲ್ಲರನ್ನೂ ಟಾರ್ಗೆಟ್ ಮಾಡುತ್ತಿದ್ದಾರೆ. ನಾವು ಎಚ್ಚರವಾಗಿರುವುದು ಮಾತ್ರವಲ್ಲದೆ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು ಮತ್ತು ಸೈಬರ್ ಅಪರಾಧಗಳ ವಿರುದ್ಧ ಕೆಲಸ ಮಾಡಬೇಕು. ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ ಬ್ರಾಂಡ್ ಅಂಬಾಸಿಡರ್ ಆಗಿ ನಾನು ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುತ್ತೇನೆ. ಸೈಬರ್ ಅಪರಾಧಗಳಿಂದ ದೇಶವನ್ನು ರಕ್ಷಿಸಬೇಕು ಎಂದು ಅದು ಹೇಳಿದೆ ಎಂದು ನಟಿ ಹೇಳಿದ್ದಾರೆ.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು, ಅ. 15–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ.17ರಂದು ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಅ.18ರಿಂದ ರಾಜ್ಯ ಮಕ್ಕಳ ವೈದ್ಯರ ಸಮ್ಮೇಳನ

ಮೈಸೂರು, ಅ.15(ಜಿಎ)–ಕರ್ನಾಟಕ ರಾಜ್ಯ ಮಕ್ಕಳ ವೈದ್ಯರ ರಾಜ್ಯ ಸಂಘದ ಸಮ್ಮೇಳನವನ್ನು ನಗರದ ಜೆಎಸ್‌ಎಸ್ ಮಹಾ ವಿದ್ಯಾಲಯ, ಮೈಸೂರು ವೈದ್ಯಕೀಯ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಅ.18, 19, 20ರಂದು ಆಯೋಜಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷರಾದ ಡಾ.ಎಸ್.ಎನ್.ಮೋತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.19ರಂದು ಬೆಳಗ್ಗೆ 11ಗಂಟೆಗೆ ಬನ್ನಿಮಂಟಪದ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ಡಾ.ಜಿ.ವಿ. ಬಸವರಾಜ, ಡಾ.ಬಿ.ಸುರೇಶ್, ಡಾ.ಎಂ.ಎ. ಶೇಖರ್, ಡಾ.ಸಿಂಗಾರವೇಲು, ಡಾ.ಕೆ. ಆರ್.ದಾಕ್ಷಾಯಿಣಿ, ಡಾ.ಹೆಚ್.ಬಸವನಗೌಡಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಈ ಮೂರೂ ದಿನದ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಭಾಗದಿಂದ ಸುಮಾರು 1200 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಇವರಿಗೆ ನಗರದ ವಿವಿಧ ಆಸ್ಪತ್ರೆಗಳಲ್ಲಿ ಕಾರ್ಯಾಗಾರ ಏರ್ಪಡಿಸಿ, ಮಕ್ಕಳ ಚಿಕಿತ್ಸೆ, ಆರೋಗ್ಯ ಕುರಿತಂತೆ ಇತ್ತೀಚಿನ ವಿದ್ಯಮಾನಗಳ ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ. ಶಶಿಕಿರಣ್, ಡಾ.ಪ್ರಶಾಂತ್ ಉಪಸ್ಥಿತರಿದ್ದರು.

ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡದೆ ತೊಂದರೆ

ಮೈಸೂರು, ಅ.15(ಜಿಎ)–ಮೈಸೂರು ವಿವಿಯಲ್ಲಿ ಸಂಶೋಧನಾ ಕಾರ್ಯ ನಡೆಸುತ್ತಿರುವ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಕಳೆದ ನಾಲ್ಕು ವರ್ಷಗಳಿಂದ ಲ್ಯಾಪ್‌ಟಾಪ್ ನೀಡಿಲ್ಲ. ಇದರಿಂದ ಇವರ ಶೈಕ್ಷಣಿಕ ಪ್ರಗತಿಗೆ ಅಡ್ಡಿಯಾಗಿದೆ ಎಂದು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಈ ಹಿಂದೆ ವಿತರಿಸಿದ ಲ್ಯಾಪ್‌ಟಾಪ್‌ಗಳು ಕಳಪೆಯಾ ಗಿವೆ. ಈ ಬಗ್ಗೆ ಸಿಎಂ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಹಲವಾರು ಬಾರಿ ಪತ್ರ ಬರೆದರೂ ಪ್ರಯೋಜನವಾಗಿಲ್ಲ. ಹೀಗಾಗಿ ಕೂಡಲೇ ಉತ್ತಮ ಗುಣಮಟ್ಟದ ಲ್ಯಾಪ್‌ಟಾಪ್ ವಿತರಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರು, ಇಲಾಖೆ, ಸರ್ಕಾರದ ವಿರುದ್ಧ ತೀವ್ರವಾದ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಲಿಂಗರಾಜು, ಪ್ರದೀಪ್‌ರಾಜು ಇರಸವಾಡಿ, ನವೀನ್, ಸಿದ್ದಪ್ಪಾಜಿ ಬಿಸಲ್ವಾಡಿ ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಅ.15– ವಿ.ವಿ.ಮೊಹಲ್ಲಾ ಉಪವಿಭಾಗ ವ್ಯಾಪ್ತಿ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಅ.16ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿಜಯನಗರ 2ನೇ ಹಂತ, ಸ್ನೇಕ್ ಶ್ಯಾಮ್ ರಸ್ತೆ, ಹಂಪಿ ಸರ್ಕಲ್, ಕೆ.ಡಿ ಸರ್ಕಲ್, ಹೊಯ್ಸಳ ಸರ್ಕಲ್, ರೈಲ್ವೆ ಬಡಾವಣೆ, ವಿಜಯನಗರ ವಾಟರ್ ಟ್ಯಾಂಕ್ ಸರ್ಕಲ್, ಪೊಲೀಸ್ ಸ್ಟೇಷನ್ ಏರಿಯಾ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.10.2024 ಬುಧವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ಬೆಳ್ಳಿ ತೇರೋತ್ಸವ, ನಿವೇದನ, ಮಹಾಮಂಗಳಾರತಿ, ಸಂಜೆ ವೈಭವಶಯನೋತ್ಸವ, ಸಂಗೀತ, ಕ್ಷೀರಭಕ್ಷ್ಯಾದಿಗಳ ಸಮರ್ಪಣೆ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಚತುರ್ದಶಿ ಬೆಳಗ್ಗೆ ದುರ್ಗಾಪೂಜೆ, ದುರ್ಗಾಹೋಮ, ದುರ್ಗಾ ಪಾರಾಯಣ, ಅಭಿಷೇಕ, ಸಾಯಂಕಾಲ ಶಯನೋತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಚತುರ್ದಶಿ ಶ್ರೀ ಕಾಮಧೇನು, ಶ್ರೀ ಕುಬೇರಲಕ್ಷ್ಮಿ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಮತ್ತು ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ಪ್ರತ್ಯೇಕ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ರಾಮಚಂದ್ರ ಮಿಷನ್ :** ಪದ್ಮಭೂಷಣ ಕಮಲೇಶ್ ಡಿ. ಪಾಟೀಲ್ ಅವರಿಂದ ಸಾಮೂಹಿಕ ಧ್ಯಾನ, ಸ್ಥಳ: ಶ್ರೀ ರಾಮಚಂದ್ರ ಮಿಷನ್, ಲಿಂಗದೇವರಕೊಪ್ಪಲು, ಬೆಳಗ್ಗೆ 7.30 ರಿಂದ

■ **ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ, ಶೇಷಾದ್ರಿಪುರಂ ಪದವಿ ಕಾಲೇಜು:** ದತ್ತಿ ಕಾರ್ಯಕ್ರಮ, ಉದ್ಘಾಟನೆ ಹಾಗೂ ಉಪನ್ಯಾಸ : ವಿದ್ವಾಂಸ ಪ್ರೊ. ಓ.ಎಲ್.ನಾಗಭೂಷಣಸ್ವಾಮಿ, ವಿಷಯ : ಬಸವ ವಚನ ಮತ್ತು ವ್ಯಕ್ತಿತ್ವದ ಬೆಳವಣಿಗೆ, ಉಪಸ್ಥಿತರು: ಬಿ.ಎ.ಅನಂತರಾಮ್, ಡಾ.ಸೌಮ್ಯ ಈರಪ್ಪ ಕೆ., ಡಾ.ಲಾವಣ್ಯ ಸಿ.ಪಿ., ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮಾರುತಿ ಪ್ರಸನ್ನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ವಾದ್ಯ ವೈಭವ–ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎ. ಎಸ್. ನಾಗಲಕ್ಷ್ಮಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ವಾತ್ಸಲ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, 8.30 ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.10 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಬ್ರಿಜ್ ನಾರಾಯಣ– ಸರೋದ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.30 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.35 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಡಾ. ಸ್ನೇಹಶ್ರೀ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕರ್ನಾಟಕ ಪೊಲೀಸ್ ಬ್ಯಾಂಡ್ – ವಾದ್ಯವೃಂದ, 4.00 ಮಹಿಳಾರಂಗ–ಸಖೀ ಸಾಹಿತ್ಯ, ಇತ್ತೀಚಿನ ಮಹಿಳಾ ಕಾವ್ಯ : ಒಂದು ಸಂವಾದ, ಭಾಗವಹಿಸುತ್ತಾರೆ : ಉಷಾನರಸಿಂಹನ್, ಮೀನಾಕ್ಷಿ ಹಾಗೂ ಡಾ. ವಿನೋದ, ಪ್ರಸ್ತುತಿ : ಜಿ. ಶಾಂತಕುಮಾರ್, 4.45 ಹಿಂದಿ ಪಾಠ–ಡಾ. ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ : ಕೃಷಿ ದೀವಿಗೆ 'ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ' ಕುರಿತ ಬಾನುಲಿ ಸರಣಿ, ಭತ್ತದ ಸಮಗ್ರ ಕೀಟ ನಿರ್ವಹಣೆ. ಈ ಕುರಿತು ಮಂಡ್ಯದ ವಿ. ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ. ಎಸ್. ಕಿತ್ತೂರ್‌ಮಠ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಕ್ಷಿತಿಜ ಲಿಟರರಿ ಗುರು–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತ : ಹಿರಣ್ಮಯಿ. ಎಸ್–ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು


■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು :** 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹಕಾರ ವಿಷಯ ಕುರಿತು ಚರ್ಚಾ ಸ್ಪರ್ಧೆ, ಉದ್ಘಾಟನೆ : ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಚ್. ಮಹೇಂದ್ರ ಕುಮಾರ್, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಮುಖ್ಯ ಅತಿಥಿಗಳು : ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಪ್ರಾಂಶುಪಾಲ ಚಂದ್ರಶೇಖರ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

ದೊಡ್ಡಕಾನ್ಯದಲ್ಲಿಂದು, ಮೈಸೂರು ತಾಲೂಕು

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಸಮುದಾಯ ಜೀವನ ಶಿಬಿರ, ಸ್ಥಳ: ಡಾ. ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ, ಬೆಳಗ್ಗೆಯಿಂದ.

ಧಮ್ಮ ದೈವ ಕೇಂದ್ರೀತವಲ್ಲ, ಮನುಷ್ಯನ ಕ್ರಿಯಾಶಕ್ತಿ ಕೇಂದ್ರೀತ

ಪ್ರಜ್ಞೆ-ಕರುಣೆಯ ಸಂಗಮವೂ ಹೌದು ; ವಿಮರ್ಶಕ ಪ್ರೊ.ರಹಮತ್ ತರೀಕೆರೆ



ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಮಂಗಳವಾರ ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಬುದ್ಧನ ಮೂರ್ತಿಗೆ ದೀಪ ಬೆಳಗಿಸಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಮೈಸೂರು,ಅ.15(ಪಿಎಂ)– ಬೌದ್ಧ ಧಮ್ಮ ದೈವ ಕೇಂದ್ರೀತವಲ್ಲ, ಬದಲಿಗೆ ಮನುಷ್ಯನ ಕ್ರಿಯಾಶಕ್ತಿ ಕೇಂದ್ರಿತವಾಗಿದ್ದು, ಇಲ್ಲಿ ಬುದ್ಧಿ ಪ್ರಧಾನ ಸ್ಥಾನ ಪಡೆಯುತ್ತದೆ. ಪ್ರಜ್ಞೆ ಮತ್ತು ಕರುಣೆಯ ಸಂಗಮವೂ ಆಗಿದೆ ಎಂದು ಚಿಂತಕ ಮತ್ತು ವಿಮರ್ಶಕ ಪ್ರೊ.ರಹಮತ್ ತರೀಕೆರೆ ಹೇಳಿದರು.

ಮೈಸೂರಿನ ಅಶೋಕ ವೃತ್ತ ಸಮೀಪದ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ 68ನೇ ಧಮ್ಮದೀಕ್ಷಾ ದಿನಾಚರಣೆ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಡಾ.ಬಿ.ಆರ್.ಅಂಬೇಡ್ಕರ್ ಅವರ ಬುದ್ಧ ಮತ್ತು ಆತನ ಧಮ್ಮ' ಪುಸ್ತಕದ ಕುರಿತು ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಈ ಪುಸ್ತಕದಲ್ಲಿ ಧಮ್ಮ ಮತ್ತು ಧರ್ಮದ ವ್ಯತ್ಯಾಸವನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಧಮ್ಮ ಎಂದರೆ ಪ್ರಜ್ಞೆ ಮತ್ತು ಕರುಣೆಯ ಸಂಗಮ ಎಂಬುವುದನ್ನು ಅವರು ಪದೇಪದೆ ಹೇಳಿದ್ದಾರೆ. ಧರ್ಮ ಎಂದರೆ ಆಚರಣಾ ಪ್ರಧಾನವಾದುದು ಎಂದಿದ್ದಾರೆ. ವ್ಯಕ್ತಿತ್ವ ನಿರ್ಮಾಣ ಇದರಲ್ಲಿ ಬಹಳ ಇರುವುದಿಲ್ಲ ಎಂದಿದ್ದು, ಇಡೀ ಪುಸ್ತಕದಲ್ಲಿ ಯಜ್ಞ ಯಾಗಾದಿಗಳ ವಿರೋಧ ಹೆಚ್ಚು ಕಂಡುಬರಲಿದೆ. ಯಜ್ಞಗಳಿಂದ ಮೋಕ್ಷ ಪಡೆಯುತ್ತೇನೆ ಎಂಬ ಹಲವು ಬ್ರಾಹ್ಮಣರಿಗೆ ಬುದ್ಧ ಧಮ್ಮದೀಕ್ಷೆ ನೀಡಿದ್ದಾರೆ ಎಂಬುದು ಪುಸ್ತಕದಲ್ಲಿದೆ ಎಂದರು.

ಪುಸ್ತಕ ಬರವಣಿಗೆಯ ವಿಧಾನ ಉತ್ತಮವಾಗಿದ್ದು, ಸರಳವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ. ತತ್ವಶಾಸ್ತ್ರವನ್ನು ಹೀಗೆ ಸರಳವಾಗಿ ಬರೆಯುವುದು ಸಾಮಾನ್ಯ ಸಂಗತಿಯಲ್ಲ. ಆದರೆ ಅಂಬೇಡ್ಕರ್ ಅವರು ಈ ಪುಸ್ತಕದಲ್ಲಿ ಅದನ್ನು ಸಾಧ್ಯ ಮಾಡಿದ್ದಾರೆ. ಹಾಗಾಗಿ ಈ ಪುಸ್ತಕವನ್ನು ಕೈಪಿಡಿ ರೂಪದಲ್ಲಿ ಹೊರತರಬೇಕೆಂದು ಪ್ರಕಾಶಕರಲ್ಲಿ ವಿನಂತಿ ಮಾಡಿದ್ದೇನೆ. ಭಾರತದಲ್ಲಿ ಕಥೆಗಳು ತತ್ವಶಾಸ್ತ್ರವನ್ನು ಜನರಿಗೆ ಮುಟ್ಟಿಸುವ ಚತುರ ಮಾಧ್ಯಮವಾಗಿ ಕಾರ್ಯ ನಿರ್ವಹಿಸಿವೆ. ಹಾಗಾಗಿ ಸದರಿ ಪುಸ್ತಕದಲ್ಲಿ ಅಂಬೇಡ್ಕರ್ ಅವರು ಕಥನ ಶೈಲಿ ಬಳಸಿದ್ದಾರೆ. ಅವರ ಇತರೆ ಯಾವುದೇ ಕೃತಿಯಲ್ಲಿ ಈ ರೀತಿ ಕಥನ ವಿಧಾನ ಕಂಡು ಬರುವುದಿಲ್ಲ ಎಂದರು.

ಬೌದ್ಧ ಧಮ್ಮ ವೈಜ್ಞಾನಿಕತೆಯಿಂದ ಕೂಡಿದೆ ಎಂದು ನಿದರ್ಶನಗಳ ಮೂಲಕ ಪ್ರತಿಪಾದಿಸಿದ್ದಾರೆ. ಇಡೀ ಭಾರತವು ಧಮ್ಮ ಪಥದಲ್ಲಿ ನಡೆಯಬೇಕೆಂಬ ಪ್ರಾರ್ಥನೆಯಲ್ಲಿ ಪುಸ್ತಕ ಕೊನೆಗೊಳ್ಳುತ್ತದೆ. ಆದರಲ್ಲಿಯೂ ಧಮ್ಮವು ಎಲ್ಲ ದಮನಿತರ ತಾಯಿ ಆಗಬೇಕೆಂದು ಅಂಬೇಡ್ಕರ್ ಬಯಸಿದ್ದಾರೆ ಎಂದು ಹೇಳಿದರು.

ಅಲ್ಲಮ ಕನ್ನಡದ ಬುದ್ಧ: ಅಲ್ಲಮ ಪ್ರಭುಗಳು ಶೂನ್ಯ ಸಿಂಹಾಸನ ಸ್ಥಾಪಿಸಿಕೊಂಡಿರುವ ಪ್ರಸಂಗ ಅದ್ಭುತವಾಗಿದ್ದು, ಕಲ್ಯಾಣದಲ್ಲಿ ಬಸವಣ್ಣ ಸೇರಿದಂತೆ ಶರಣರು ಅಲ್ಲಮ ಪ್ರಭುಗಳಿಗಾಗಿ ಕಾಯುತ್ತಿರುವಾಗ ಅವರ ಬರುವಿಕೆ ಗಮನಾರ್ಹ. ಅಲ್ಲಮ ಪ್ರಭುಗಳು ಬರುವಾಗ ಅವರ ಮೈತುಂಬ ಧೂಳು ಸೇರಿದಂತೆ ಅತ್ಯಂತ ಕೊಳಕಾಗಿ ಇರುತ್ತಾರೆ. ಅಂದರೆ ತಿರುಗಾಟ ದೇಹವನ್ನು ಮಲಿನ ಮಾಡಿದರೂ ಆತ್ಮ, ವಿದ್ಯೆ ಮತ್ತು ಜ್ಞಾನವನ್ನು ಮೂಡಿಸುತ್ತದೆ. ಅಲ್ಲಮ ಪ್ರಭುಗಳು ಕನ್ನಡ ಬುದ್ಧ ಎಂದರು.

ನಮ್ಮ ಧಮ್ಮ ಚರ್ಚೆಯಲ್ಲಿ ಮತಾಂತರ ಶಬ್ದ ಬಳಸದೇ ಧಮ್ಮದೀಕ್ಷೆ ಪದ ಬಳಸುವುದೇ ಸೂಕ್ತ ಧಮ್ಮದೀಕ್ಷೆ ಎಂದರೆ ನಮ್ಮ ಮೂಲಕ್ಕೆ ಮರಳುವುದಾಗಿದೆ. ಅಂಬೇಡ್ಕರ್ ಹಾಗೂ ಸಾಹು ಮಹಾರಾಜರನ್ನು ದ್ವೇಷ ಮಾಡಿದ ತಿಲಕರ ಪುತ್ರ, ಅಂಬೇಡ್ಕರ್ ಅವರ ಹೋರಾಟಕ್ಕೆ ಸೇರಿಕೊಂಡಿದ್ದರು. ಇಡೀ ಪುಸ್ತಕದಲ್ಲಿ ಬ್ರಾಹ್ಮಣವಾದ (ಅಸಮಾನತೆ) ಬಗ್ಗೆ ಮಾತ್ರವಿರೋಧ ವ್ಯಕ್ತಪಡಿಸಿದ್ದಾರೆಯೇ ಹೊರತು ಆ ಸಮುದಾಯದ ಬಗ್ಗೆ ಯಾವುದೇ ರೀತಿಯ ವಿರೋಧವಿಲ್ಲ ಎಂದು ಹೇಳಿದರು.

ಅಂತಾರಾಷ್ಟ್ರೀಯ ಸಾರನಾಥ ಬುದ್ಧವಿಹಾರದ ಭಿಕ್ಕುಣಿ ಗೌತಮಿ ಭಂತೇ ಉಪಸ್ಥಿತರಿದ್ದರು. ಮೈಸೂರು ವಿವಿ ಡಾ.ಅಂಬೇಡ್ಕರ್ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ.ಆನಂದ್, ಲೇಖಕ ಸಿದ್ದಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿನಿಯರಿಗೆ 2 ದಿನದ ಕೌಶಲಾಭಿವೃದ್ಧಿ ಕಾರ್ಯಾಗಾರ



ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜಿನಲ್ಲಿ ಎರಡು ದಿನದ ಕೌಶಲಾಭಿವೃದ್ಧಿ ಕಾರ್ಯಾಗಾರ ಉದ್ಘಾಟಿಸಲಾಯಿತು

ಮೈಸೂರು, ಅ.15(ಎಸ್‌ಪಿಎನ್)– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜಿನ ಕರಿಯರ್ ಗೈಡೆನ್ಸ್ ಅಂಡ್ ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಎರಡು ದಿನದ ಕೌಶಲಾಭಿವೃದ್ಧಿ ಕಾರ್ಯಾಗಾರವನ್ನು ಡಿಶಿಟೇ ಸಂಸ್ಥೆಯ ಸಹಯೋಗದಲ್ಲಿ ಪ್ರಥಮ ವರ್ಷ ವಿದ್ಯಾರ್ಥಿನಿಯರಿಗೆ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎನ್.ಭಾರತಿ ಮಾತನಾಡಿ, ವಿದ್ಯಾರ್ಥಿಗಳಿಗೆ ಕೌಶಲಗಳ ಮಹತ್ವ ಮತ್ತು ಜೀವನ ಮೌಲ್ಯಗಳ ಅಳವಡಿಸಿಕೊಂಡು ಮುಂದಿನ ಜೀವನ ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು.


ಡಿಶಿಟೇ ಸಂಸ್ಥೆಯ ಮುಖ್ಯಸ್ಥರಾದ ಸೀಮಂತಿನಿ ಮಾತನಾಡಿ, ಮಹಿಳಾ ಸಬಲೀಕರಣ ಮತ್ತು ವಿವಿಧ ರೀತಿಯ ಕೌಶಲಗಳ ಪ್ರಾಮುಖ್ಯತೆ ವಿವರಿಸಿದರು. ಈ ವೇಳೆ ಡಿಶಿಟೇ ಸಂಸ್ಥೆಯ ತರಬೇತುದಾರ, ಸಹಾಯಕ ಪ್ರಾಧ್ಯಾಪಕ ಎಸ್.ಮಹದೇವಸ್ವಾಮಿ, ಸದಸ್ಯರಾದ ಎಂ.ಆರ್.ನಿರಂತ್, ಹರ್ಷಿತ್ ಮಲ್ಲಿಕ್, ಕಾವ್ಯ, ಅಭಿಷೇಕ್, ಋತ್ ರಾಮಚಂದ್ರ ಹೆಗ್ಡೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ನಿರ್ವಹಣೆ ಇಲ್ಲದೆ ಗಬ್ಬೆದ್ದು ನಾರುತ್ತಿರುವ ಸುಬ್ಬರಾವ್ ಪಾರ್ಕ್ ಶೌಚಾಲಯ

ಮೈಸೂರು, ಅ.15(ಎಸ್‌ಪಿಎನ್)– ಮೈಸೂರು ನಿವೇದಿತಾನಗರ ಸುಬ್ಬರಾವ್ ಪಾರ್ಕ್‌ನಲ್ಲಿರುವ ಶೌಚಾಲಯ ಸ್ವಚ್ಛತೆ ಮತ್ತು ನಿರ್ವಹಣೆ ಇಲ್ಲದೆ ಗಬ್ಬು ನಾರುತ್ತಿದ್ದು, ಈ ಕುರಿತು ಹಲವು ಬಾರಿ ಪಾಲಿಕೆ ಅಧಿಕಾರಿಗಳಿಗೆ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿಯುತ್ತಿಲ್ಲ ಎಂಬ ಆರೋಪ ಇಲ್ಲಿನ ವಾಯುವಿಹಾರಿಗಳಿಂದ ಕೇಳಿ ಬರುತ್ತಿದೆ.

ಕಳೆದೊಂದು ವರ್ಷದಿಂದ ಸುಬ್ಬರಾವ್ ಪಾರ್ಕ್‌ನ ಶೌಚಾಲಯ ನಿರ್ವಹಣೆ ಇಲ್ಲದೆ, ಪಾಳುಬಿದ್ದಿದ್ದು, ವಾಯು ವಿಹಾರಿಗಳಿಗೆ ಇದರ ದುರ್ವಾಸನೆಯಿಂದ ತೀವ್ರ ತೊಂದರೆಯಾಗುತ್ತಿದೆ. ಈ ಸಮಸ್ಯೆ ಕುರಿತು ಹಲವು ಬಾರಿ ವಲಯ ಕಚೇರಿ–3ರ ವ್ಯಾಪ್ತಿಯ ಅಧಿಕಾರಿಗಳ ಗಮನಕ್ಕೆ ತಂದರೂ ನಮಗೂ ಇದಕ್ಕೂ ಸಂಬಂಧ ಇಲ್ಲದಂತೆ ವರ್ತಿಸುತ್ತಿದ್ದಾರೆ ಎಂದು ವಾಯುವಿಹಾರಿಗಳು ಆರೋಪಿಸಿದ್ದಾರೆ.

ಅಲ್ಲದೆ, ಪ್ರತಿನಿತ್ಯ ಈ ಉದ್ಯಾನವನಕ್ಕೆ ಆನಂದ ನಗರ, ರಾಜರಾಜೇಶ್ವರಿ ನಗರ, ಶಾರದಾದೇವಿ ನಗರ, ಬಸವೇಶ್ವರ ನಗರ,



ಸಿಎಫ್‌ಟಿಆರ್‌ಐ ಬಡಾವಣೆ, ಜನತಾನಗರ ಸೇರಿದಂತೆ ಇತರೆ ಬಡಾವಣೆಗಳಿಂದ ವಾಯುವಿಹಾರಕ್ಕಾಗಿ ವೃದ್ಧರು, ಮಹಿಳೆಯರು, ಮಕ್ಕಳು ಬರುತ್ತಾರೆ. ಅವರಲ್ಲಿ ಯಾರಿಗಾದರೂ ಶೌಚಕ್ಕೆ ಹೋಗಬೇಕಾದರೆ, ಪುನಃ ಮನೆಗೆ ಹೋಗಬೇಕು. ಇಲ್ಲವೆ ಬಯಲನ್ನು ಆಶ್ರಯಿಸಬೇಕು ಎನ್ನುತ್ತಾರೆ ಹಿರಿಯ ನಾಗರಿಕರಾದ ಬಸವರಾಜು.

ಈ ಸಮಸ್ಯೆ ನಗರದ ಬಹುತೇಕ ಉದ್ಯಾನಗಳಲ್ಲಿರುವ ಶೌಚಾಲಯ ನಿರ್ವಹಣೆ ಇದೇ ಪರಿಸ್ಥಿತಿ ಎದುರಾಗಿದ್ದು, ಪಾಲಿಕೆ ಅಧಿಕಾರಿಗಳನ್ನು ಪ್ರಶ್ನಿಸಿದರೆ, ಸರ್ಕಾರ ನಿಗದಿಪಡಿಸುವ ಅನುದಾನಕ್ಕೆ ಯಾರೂ ಟೆಂಡರ್ ಬಿಡ್‌ನಲ್ಲಿ ಭಾಗವಹಿಸುತ್ತಿಲ್ಲ. ಇದೀಗ ವಿಜಯಪುರದ ಗುತ್ತಿಗೆದಾರರೊಬ್ಬರು ನಗರದ ಉದ್ಯಾನವನದಲ್ಲಿನ ಶೌಚಾಲಯ ನಿರ್ವಹಣೆ ಮಾಡಲು ಮುಂದೆ ಬಂದಿದ್ದು, ಇನ್ನೊಂದು ವಾರದಲ್ಲಿ ಈ ಸಮಸ್ಯೆ ಬಗೆಹರಿಯಲಿದೆ ಎಂಬ ಸಬೂಬು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಈ ಬಾರಿ ನಗರದ ಉದ್ಯಾನವನಗಳಲ್ಲಿನ ಶೌಚಾಲಯ ನಿರ್ವಹಣೆ ಸಮಸ್ಯೆ ಬಗೆಹರಿಯದಿದ್ದರೆ, ಮೈಸೂರು ನಗರ ಪಾಲಿಕೆ ಕಚೇರಿ ಮುಂದೆ ವಾಯು ವಿಹಾರಿಗಳು ಒಟ್ಟುಗೂಡಿ ಮುಂದಿನ ತಿಂಗಳು ಆರಂಭದಲ್ಲಿ ಪ್ರತಿಭಟನೆ ನಡೆಸುತ್ತೇವೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಶಾಸಕ ಶ್ರೀವತ್ಸರಿಂದ ಓವರ್‌ಹೆಡ್ ಟ್ಯಾಂಕ್ ಕಾಮಗಾರಿ ಪರಿಶೀಲನೆ



ಮುಡಾ ಪಕ್ಕದಲ್ಲಿ ಓವರ್‌ಹೆಡ್ ಟ್ಯಾಂಕ್ ಕಾಮಗಾರಿಯನ್ನು ಶಾಸಕ ಶ್ರೀವತ್ಸ ಹಾಗೂ ಅಧಿಕಾರಿಗಳು ಪರಿಶೀಲಿಸುತ್ತಿರುವುದು.

ಮೈಸೂರು, ಅ.15(ಎಸ್‌ಪಿಎನ್)– ನಗರ ಹೃದಯ ಭಾಗದ ಜನವಸತಿ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹಬ್ಬ–ಹರಿದಿನಗಳಲ್ಲೇ ಪದೇಪದೆ ಉಲ್ಬಣಗೊಳ್ಳುತ್ತಿದ್ದು, ಈ ಸಮಸ್ಯೆ ಬಗೆಹರಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಅವರಲ್ಲಿ ಮನವಿ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಡಾ ಕಚೇರಿ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಓವರ್ ಹೆಡ್ ಟ್ಯಾಂಕ್ ಕಾಮಗಾರಿ ವೀಕ್ಷಣೆ ಮಾಡಿ, ಅಧಿಕಾರಿಗಳಿಂದ ಮಾಹಿತಿ ಪಡೆದು ಇನ್ನಾರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಸೂಚಿಸಿದರು.

ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ಪ್ರದೇಶಗಳಾದ ಹೊಸಕೇರಿ 5ನೇ ಕ್ರಾಸ್, ಸುಣ್ಣದ ಕೇರಿ 7ನೇ ಕ್ರಾಸ್, ಶಿವಪುರ, ಶ್ರೀರಾಂಪುರ, ವಿವೇಕಾನಂದ ವೃತ್ತ ಕುವೆಂಪುನಗರ ಹಾಗೂ ಕಾಮಾಕ್ಷಿ ಆಸ್ಪತ್ರೆಯ ಹಿಂಭಾಗ ಬಡಾವಣೆ ಸೇರಿದಂತೆ ಇತರೆ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸುತ್ತಿದ್ದು, ಈ ಬಾರಿ ಆಯುಧ ಪೂಜೆ ಹಾಗೂ ವಿಜಯದಶಮಿಯಂದೇ ಈ ಪ್ರದೇಶಗಳ ನೀರು ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿರುವುದಕ್ಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಇಲ್ಲಿನ ಸಮಸ್ಯೆ ಬಗೆಹರಿಸಲು ವಿಫಲರಾದ ಅಧಿಕಾರಿಗಳ ಕಾರ್ಯವೈಖರಿಗೆ ಬೇಸರ ಹೊರಹಾಕಿದರು.

ಸ್ಥಳ ಪರಿಶೀಲನೆ ವೇಳೆ ವಾಣಿವಿಲಾಸ ಒಳಚರಂಡಿ ವಿಭಾಗದ ಅಧಿಕಾರಿಗಳಾದ ನಾಗರಾಜು, ಧನುಷ್, ಮುಸ್ತಫಾ, ಪ್ರಶಾಂತ್, ಪ್ರಸನ್ನ ಇತರೆ ಅಧಿಕಾರಿಗಳು ಉಪಸ್ಥಿತರಿದ್ದು, ಕಬಿನಿ 2ನೇ ಹಂತದ ಕಾಮಗಾರಿಯು ಪೂರ್ಣಗೊಂಡರೆ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುತ್ತದೆ. ನ. 15ರೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಹಬ್ಬ–ಹರಿದಿನಗಳಲ್ಲಿ ಈ ಬಡಾವಣೆಗಳಲ್ಲಿ ನೀರಿನ ಪೂರೈಕೆಯಲ್ಲಿ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸುವಂತೆ ತಾಕೀತು ಮಾಡಿದರು.

ಮುಡಾ ಪಕ್ಕದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಓವರ್ ಹೆಡ್ ಟ್ಯಾಂಕ್ ಕಾಮಗಾರಿ ಪೂರ್ಣಗೊಂಡರೆ ಹೊಸಕೇರಿ, ಸುಣ್ಣದಕೇರಿಯ ಮತ್ತು ಇತರೆ ಪ್ರದೇಶಗಳ ಮತದಾರರಿಗೆ ಅನುಕೂಲವಾಗಲಿದೆ. ಹಾಗೆಯೇ ಭೇಟಿ ನೀಡಿದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವಂತೆ ವಲಯದ ಆಯುಕ್ತರಿಗೆ ದೂರವಾಣಿ ಕರೆಯ ಮೂಲಕ ಸೂಚಿಸಿದರು.

ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಸೌಮ್ಯ ಉಮೇಶ್, ಜಗದೀಶ್, ಜಯರಾಮ್, ಹಾಗೂ ಪಕ್ಷದ ಮುಖಂಡರಾದ ಕೃಷ್ಣ ನಾಯಕ್, ಪ್ರಸಾದ್, ಪ್ರದೀಪ್, ಕಿಶೋರ್ ಸೇರಿದಂತೆ ಇತರರಿದ್ದರು.

ಸಿಎಂ ಸಿದ್ದರಾಮಯ್ಯ, ದರ್ಶನ್ ಬಗ್ಗೆ ಕೋಡಿ ಶ್ರೀಗಳ ಮಾರ್ಮಿಕ ಭವಿಷ್ಯ

ಮಹಾಭಾರತದಲ್ಲಿ ಶ್ರೀ ಕೃಷ್ಣ ಇದ್ದ, ಭೀಮ ಗೆದ್ದ; ಈಗ ಶ್ರೀ ಕೃಷ್ಣ ಇಲ್ಲ ದುರ್ಯೋಧನ ಗೆಲ್ಲುತ್ತಾನೆ ಪಾಪದ ಪಾಷಾಣ ಕಳೆಯಬೇಕು. ಮಾಡಿದ ಪಾಪವನ್ನು ಅನುಭವಿಸಲೇಬೇಕು

ಚಿಕ್ಕಬಳ್ಳಾಪುರ, ಅ.15– ಮಹಾಭಾರತದಲ್ಲಿ ಶ್ರೀ ಕೃಷ್ಣ ಇದ್ದ ಹೀಗಾಗಿ ಭೀಮ ಗೆದ್ದ. ಈಗ ಶ್ರೀ ಕೃಷ್ಣ ಇಲ್ಲ ದುರ್ಯೋಧನ ಗೆಲ್ಲುತ್ತಾನೆ. ಪಾಪದ ಪಾಷಣ ಕಳೆಯಬೇಕು. ಮಾಡಿದ ಪಾಪವನ್ನು ಅನುಭವಿಸಲೇಬೇಕು ಎಂದು ಕೋಡಿ ಮಠದ ಶ್ರೀಗಳು ಚಿಕ್ಕಬಳ್ಳಾಪುರದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ನಟ ದರ್ಶನ್ ಬಗ್ಗೆ ಅಚ್ಚರಿಯ ಭವಿಷ್ಯ ನುಡಿದಿದ್ದಾರೆ.



ನಗರದ ಗರಿಗರೆಡ್ಡಿ ಎಂಬ ಭಕ್ತರ ಮನೆಗೆ ಆಗಮಿಸಿದ್ದ ಶ್ರೀಗಳು, ಸಿದ್ದರಾಮಯ್ಯ ಹಾಗೂ ನಟ ದರ್ಶನ್ ಬಗ್ಗೆ ಮಾರ್ಮಿಕವಾಗಿ ಮಾತನಾಡಿದ್ದಾರೆ. ಈ ಹಿಂದೆ ಹಲವು ಬಾರಿ ಕೋಡಿ ಮಠದ ಶ್ರೀಗಳು ಹೇಳಿದ್ದ ಭವಿಷ್ಯ ನಿಜವಾಗಿತ್ತು. ಅಲೆಯ ಅಬ್ಬರವಿರಲಿದೆ, ಭೂ ಕುಸಿತವಾಗಲಿದೆ ಎಂದು ಭವಿಷ್ಯ ನುಡಿದಿದ್ದಾಗ, ಅಂಕೋಲಾದ ಶಿರೂರು ಹಾಗೂ ಕೇರಳದ ವಯನಾಡಿನಲ್ಲಿ ಆಘಾತ ಸಂಭವಿಸಿತ್ತು. ಸಿಎಂ ಸಿದ್ಧರಾಮಯ್ಯ ಅವರ ಪತ್ನಿ ಪಾರ್ವತಿ ಮುಡಾ ನಿವೇಶನ ವಾಪಸ್ ನೀಡಿದ್ದರೂ, ಅವರಿಗೆ ದೈವಬಲವಿಲ್ಲ ಎನ್ನುವ ಮೂಲಕ ಸಿಎಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಎನ್ನುವ ಸೂಚನೆ ನೀಡಿದ್ದಾರೆ.

ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಕೋಡಿ ಶ್ರೀಗಳು ಮಾತನಾಡುತ್ತಾ, ಮಹಾಭಾರತದಲ್ಲಿ ಅಭಿಮನ್ಯುವಿನ ಬಿಲ್ಲಿನ ದಾರವನ್ನು ಮೋಸದಿಂದ ಕರ್ಣನ ಕೈಯಲ್ಲಿ ಕಟ್ ಮಾಡಿಸುತ್ತಾರೆ. ಆಗ ಅವನ ಹೆಂಡತಿ ರಣರಂಗ ಪ್ರವೇಶ ಮಾಡುತ್ತಾಳೆ. ಮಹಾಭಾರತದಲ್ಲಿ ಶ್ರೀ ಕೃಷ್ಣ ಇದ್ದ ಹೀಗಾಗಿ ಬೀಮ ಗೆಲ್ಲುತ್ತಾನೆ. ಇಲ್ಲಿ ಕೃಷ್ಣ ಇಲ್ಲ ದುರ್ಯೋಧನ ಗೆಲ್ಲುತ್ತಾನೆ ಎಂದು ಹೇಳಿದರು. ಸಿದ್ದರಾಮಯ್ಯನವರ ಪತ್ನಿ ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿರಲಿಲ್ಲ. ಖುದ್ದು ಸಿಎಂ ಸಿದ್ದರಾಮಯ್ಯ ಅವರೇ ಹೇಳುತ್ತಿದ್ದರು ಆಕೆ ಎಲ್ಲಿಗೂ ಬರುವುದಿಲ್ಲ ಎಂದು. ಆದರೆ ಈಗ ಏನಾಯ್ತು. ಇತ್ತೀಚೆಗೆ ಮಠಕ್ಕೆ ಬಂದಿದ್ದ ಸಿದ್ದರಾಮಯ್ಯನವರೇ ನನಗೆ ಹೇಳಿದರು, 'ಇಡೀ ದೇಶಕ್ಕೆ ನನ್ನ ಹೆಂಡತಿ ಕಾಣಿಸಿಕೊಂಡರು' ಅಂತಾ. ಈಗ ಮುಡಾ ಕೇಸ್‌ನಲ್ಲಿ ಪ್ರವೇಶ ನೀಡಿದ ಅವರ ಪತ್ನಿ, ಖುದ್ದಾಗಿ ಬಂದು ನನಗೆ ನಿವೇಶನಗಳು ಬೇಡ ಎಂದು ವಾಪಸ್ಸು ಬರೆದು ಕೊಟ್ಟಿದ್ದಾರೆ. ಇದೆಲ್ಲ ಹೀಗೆ ಆಗುತ್ತೆ ಅಂತ ನಾನು ಕಳೆದ ಮೂರು ತಿಂಗಳ ಹಿಂದೆಯೇ ಭವಿಷ್ಯ ನುಡಿದಿದ್ದೆ ಎಂದು ಹೇಳಿದ್ದಾರೆ.

ಈ ವೇಳೆ ನಟ ದರ್ಶನ್ ಬಗ್ಗೆ ಮಾತನಾಡಿದ ಕೋಡಿ ಶ್ರೀಗಳು, ಮಾಡಿದ ಪಾಪವನ್ನು ಅನುಭವಿಸಲೇಬೇಕು. ಪುಣ್ಯದ ಕೆಲಸ ಮಾಡಲು ಭಯಪಡಬಾರದು. ಜನರು ಅದ್ಯಾಕೋ ಭಯಪಡುತ್ತಿದ್ದಾರೆ. ಪಾಪದ ಪಾಷಾಣ ಕಳೆಯಬೇಕು. ಪಾಪದ ಕೆಲಸ ಮಾಡುವ ಮುಂಚೆಯೇ ಹೆದರಬೇಕಿತ್ತು ಎಂದರು. ಅಲ್ಲದೇ ದೊಡ್ಡ ದೊಡ್ಡವರೆಲ್ಲ ಜೈಲಿಗೆ ಹೋಗ್ತಾರೆ ಅಂತ ನಾನು ಈ ಹಿಂದೆಯೇ ಹೇಳಿದ್ದೆ. ಮುಂದೆ ಮತ್ತಷ್ಟು ಗಂಡಾಂತರಗಳು ಕಾದಿವೆ ಸದ್ಯಕ್ಕೆ ಅದನ್ನು ಹೇಳುವುದಿಲ್ಲ ಎಂದರು.

ಸತ್ತಿಗೆ ಕುಣಿತ ಕಲಾ ಪ್ರದರ್ಶನಕ್ಕೆ ಪ್ರಥಮ ಬಹುಮಾನ

ಮೈಸೂರು, ಅ.15(ಆರ್‌ಕೆ)ಅಕ್ಟೋಬರ್ 12ರಂದು ನಡೆದ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡು ಸತ್ತಿಗೆ ಕುಣಿತ ಜಾನಪದ ಕಲಾ ಪ್ರದರ್ಶನ ನೀಡಿದ ವಿಜಯಪುರ ಜಿಲ್ಲೆಯ ಶ್ರೀ ರೇವಣ ಸಿದ್ದೇಶ್ವರ ಯುವಕ ಕಲಾ ಸಂಘಕ್ಕೆ ಪ್ರಥಮ ಬಹುಮಾನ ಬಂದಿದೆ. ಯಾದಗಿರಿಯ ಲಂಬಾಣಿ ನೃತ್ಯ, ಮಂಡ್ಯ ಜಿಲ್ಲೆಯ ಪೂಜಾ ಕುಣಿತ ಹಾಗೂ ಚಿಕ್ಕರಸಿನಕೆರೆ ಶ್ರೀ ಕಾಲಭೈರವೇಶ್ವರ ಯುವಕ ಸಂಘದ ಪೂಜಾ ಕುಣಿತಕ್ಕೆ ದ್ವಿತೀಯ ಬಹುಮಾನ, ಹಾವೇರಿ ಜಿಲ್ಲೆಯ ಪುರವಂತಿಕೆ ಮತ್ತು ಕೋಲಾರ ಜಿಲ್ಲೆಯ ಗಾರುಡಿ ಗೊಂಬೆ ಪ್ರದರ್ಶನಕ್ಕೆ ತೃತೀಯ ಬಹುಮಾನ ಬಂದಿದೆ. ಪ್ರಥಮ 15,000 ರೂ., ದ್ವಿತೀಯ 5,000 ರೂ. ಹಾಗೂ ತೃತೀಯ 2500 ರೂ. ನಗದು ಬಹುಮಾನ ಪ್ರಕಟಿಸಲಾಗಿದೆ ಎಂದು ದಸರಾ ಮೆರವಣಿಗೆ ಉಪ ಸಮಿತಿ ಉಪ ವಿಶೇಷಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಚುನಾವಣೆ ವೇಳೆ ಉಚಿತ ಭರವಸೆಗಳನ್ನು ನಿರ್ಬಂಧಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ

ಕೇಂದ್ರ, ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿ

ನವದೆಹಲಿ, ಅ. 15–ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಭರವಸೆಗಳಿಗೆ ನಿರ್ಬಂಧ ಹೇರುವಂತೆ ಸಲ್ಲಿಸಿದ್ದ ಅರ್ಜಿ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿ ಮಾಡಿದೆ.



ಬೆಂಗಳೂರಿನ ನಿವಾಸಿ ಶಶಾಂಕ್ ಜೆ ಶ್ರೀಧರ್ ಅವರು ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್, ನ್ಯಾ. ಜೆಬಿ ಪರ್ದಿವಾಲಾ ಮತ್ತು ನ್ಯಾ. ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ಪೀಠ ನೋಟಿಸ್ ಜಾರಿ ಮಾಡಿ ಅಭಿಪ್ರಾಯ ಸೂಚಿಸುವಂತೆ ತಿಳಿಸಿದೆ.

ಉಚಿತ ಕೊಡುಗೆಗಳ ಭರವಸೆಯಿಂದ ಸಾರ್ವಜನಿಕ ಖಜಾನೆಯ ಮೇಲೆ ಗಮನಾರ್ಹ ಮತ್ತು ಲೆಕ್ಕಿಸಲಾದ ಆರ್ಥಿಕ ಹೊರೆಯ ಬೀಳುತ್ತದೆ. ಅಷ್ಟೇ ಅಲ್ಲದೇ ಚುನಾವಣಾ ಪೂರ್ವ ಭರವಸೆಗಳ ಈಡೇರಿಕೆಯನ್ನು ಖಚಿತಪಡಿಸಿಕೊಳ್ಳಲು ಯಾವುದೇ ಕಾರ್ಯವಿಧಾನವಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ಉಚಿತ ಭರವಸೆಗಳನ್ನು ನೀಡುವುದನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ನೀಡಬೇಕೆಂದು ಅರ್ಜಿದಾರರು ಕೋರಿದ್ದಾರೆ.

ಭಾರೀ ಮಳೆಗೆ ಬಂಡೆ ಕಲ್ಲು ಬಿದ್ದು ಇಬ್ಬರು ಮಕ್ಕಳೂ ಸೇರಿ ಮೂವರು ಸಾವು

ರಾಯಚೂರು, ಅ.15– ಕಲ್ಲು ಬಂಡೆ ಬಿದ್ದು ಮೂವರು ಮೃತರಾಗಿರುವ ಘಟನೆ ರಾಯಚೂರಿನಲ್ಲಿ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿಗಳು ಜೆಸಿಬಿ ಸಹಾಯದಿಂದ ಕಲ್ಲು ಬಂಡೆ ಎತ್ತಿ ಮೃತರ ಶವ ಹೊರಗೆ ತೆಗೆದಿದ್ದಾರೆ. ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲ್ಲೂಕಿನ ಗೌಂಡೂರು ತಾಂಡಾದಲ್ಲಿ ಈ ಘಟನೆ ನಡೆದಿದ್ದು, ಘಟನೆಯಲ್ಲಿ ಮಂಜುನಾಥ (9), ವೈಶಾಲಿ (8), ರಘು (18) ಸಾವಿಗೀಡಾಗಿದ್ದು, ಮಾಹಿತಿ ತಿಳಿದು ಸ್ಥಳಕ್ಕೆ ಹಟ್ಟಿ ಪೊಲೀಸರು ದೌಡಾಯಿಸಿ ತನಿಖೆ ನಡೆಸುತ್ತಿದ್ದಾರೆ. ಮಕ್ಕಳ ಮೃತದೇಹ ನೋಡಿದ ಪೋಷಕರು ಹಾಗೂ ತಾಂಡಾದಲ್ಲಿನ ಜನರ ಆಕ್ರಂದನ ಮುಗಿಲು ಮುಟ್ಟಿದೆ.

ಹೊಲದಲ್ಲಿ ಆಟವಾಡಲು ತೆರಳಿದ ಮಕ್ಕಳ ಮೈಮೇಲೆ ದೊಡ್ಡ ಗಾತ್ರದ ಬಂಡೆ ಕಲ್ಲು ಬಿದ್ದಿದೆ. ನೋವು ತಾಳಲಾರದೇ ಮಕ್ಕಳು ಜೋರಾಗಿ ಚೀರಾಡಿದ್ದಾರೆ. ಆದರೆ ಬೃಹತ್ ಗಾತ್ರದ ಕಲ್ಲು ಆಗಿದ್ದರಿಂದ ಅವರಿಗೆ ತಕ್ಷಣವೇ ಹೊರಬರಲು ಸಾಧ್ಯವಾಗಲಿಲ್ಲ. ಹೀಗಾಗಿ, ಇಬ್ಬರು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಮಾಹಿತಿ ತಿಳಿದು ಬಂದಿದೆ.

ಮಹಾರಾಷ್ಟ್ರ ಚುನಾವಣೆಗೆ ಕಾಂಗ್ರೆಸ್‌ನಿಂದ ವೀಕ್ಷಕರ ನೇಮಕ; ಡಾ. ಜಿ. ಪರಮೇಶ್ವರ್, ಎಂ.ಬಿ.ಪಾಟೀಲ್‌ಗೆ ಹೊಣೆ

ಹೊಸದಿಲ್ಲಿ, ಅ. 15– ಮಹಾರಾಷ್ಟ್ರ ವಿಧಾನ ಸಭೆ ಚುನಾವಣೆಗೆ ದಿನಾಂಕ ಘೋಷಣೆಯಾದ ಬೆನ್ನಲ್ಲೇ ಕಾರ್ಯತಂತ್ರ ರೂಪಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ರಾಜ್ಯದ ವಿವಿಧ ಭಾಗಗಳಿಗೆ ಹಿರಿಯ ನಾಯಕರನ್ನು ವೀಕ್ಷಕರನ್ನಾಗಿ ನೇಮಕ ಮಾಡಿ ಮಂಗಳವಾರ ಆದೇಶ ಹೊರಡಿಸಿದೆ




ವೀಕ್ಷಕರಾಗಿ ನೇಮಕಗೊಂಡ ನಾಯಕರಲ್ಲಿ ರಾಜ್ಯದ ಸಚಿವರಾದ ಡಾ. ಜಿ. ಪರಮೇಶ್ವರ್, ಎಂ.ಬಿ. ಪಾಟೀಲ್ ಹಾಗೂ ರಾಜ್ಯಸಭೆ ಸದಸ್ಯ ಡಾ. ಸೈಯದ್ ನಾಸೀರ್ ಹುಸೇನ್ ಪ್ರಮುಖರು.

ಮುಂಬಯಿ ಮತ್ತು ಕೊಂಕಣ ವಲಯಕ್ಕೆ ಅಶೋಕ್ ಗೆಹ್ಲೋಟ್ ಹಾಗೂ ಡಾ.ಜಿ. ಪರಮೇಶ್ವರ್, ವಿದರ್ಭ (ಅಮರಾವತಿ ಮತ್ತು ನಾಗ್ಪುರ) ಪ್ರದೇಶಕ್ಕೆ ಭೂಪೇಶ್ ಬಘೇಲ್, ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ಉಮಂಗ್ ಸಿಂಗಾರ್, ಮರಾಠವಾಡ ವಲಯಕ್ಕೆ ಸಚಿನ್ ಪೈಲಟ್, ಉತ್ತಮ್ ಕುಮಾರ್ ರೆಡ್ಡಿ, ಪಶ್ಚಿಮ ಮಹಾರಾಷ್ಟ್ರ ವಿಭಾಗಕ್ಕೆ ಟಿ. ಎಸ್. ಸಿಂಗ್‌ಡಿಯೊ, ಎಂ.ಬಿ. ಪಾಟೀಲ್ ಹಾಗೂ ಉತ್ತರ ಮಹಾರಾಷ್ಟ್ರ ವಿಭಾಗಕ್ಕೆ ಡಾ. ಸೈಯ್ಯದ್ ನಾಸೀರ್ ಹುಸೇನ್ ಮತ್ತು ಡಾ. ಅನಸೂಯ ಸೀತಕ್ಕ ಅವರನ್ನು ಹಿರಿಯ ವೀಕ್ಷಕರನ್ನಾಗಿ ಕಾಂಗ್ರೆಸ್ ನೇಮಿಸಿದೆ.

ಇನ್ನುಳಿದಂತೆ ಮುಕುಲ್ ವಾಸ್ನಿಕ್ ಮತ್ತು ಅವಿನಾಶ್ ಪಾಂಡೆ ಅವರನ್ನು ಮಹಾರಾಷ್ಟ್ರ ಚುನಾವಣೆಗೆ ಹಿರಿಯ ಸಂಯೋಜಕರನ್ನಾಗಿ ನೇಮಿಸಲಾಗಿದೆ. ಸೋಮವಾರ ರಾತ್ರಿ ಖರ್ಗೆ ಅವರ ನೇತೃತ್ವದಲ್ಲಿ ದಿಲ್ಲಿಯಲ್ಲಿ ಕಾಂಗ್ರೆಸ್ ನಾಯಕರು ಮಹಾರಾಷ್ಟ್ರ ಚುನಾವಣೆ ಕಾರ್ಯತಂತ್ರ ಸಂಬಂಧ ಸಭೆ ನಡೆಸಿದ್ದರು. ಮರು ದಿನವಾದ ಇಂದು ಈ ನೇಮಕವಾಗಿದೆ

ನಾಳೆ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ


ಮೈಸೂರು, ಅ.15(ಎಸ್‌ಬಿಡಿ)– ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದೇ ಮೈಸೂರಿನಲ್ಲಿ ಅವರ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಲಿದೆ.



ವಾಲ್ಮೀಕಿ ಸಮುದಾಯದವರ ಹಲವು ವರ್ಷಗಳ ಹೋರಾಟದ ಫಲವಾಗಿ ಸಿದ್ಧಾರ್ಥನಗರದಲ್ಲಿನ ನೂತನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ಸ್ಥಾಪನೆಗೆ ಮುಹೂರ್ತ ನಿಗದಿಯಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆ ಮೇರೆಗೆ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅವರ ಸಮ್ಮುಖದಲ್ಲಿ ಅ.17ರಂದು ಬೆಳಗ್ಗೆ 9ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹ ದೇವಪ್ಪ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಂಸದರಾದ ಯದುವೀರ್, ಸುನೀಲ್‌ಬೋಸ್, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಹಾಗೂ ಶಾಸಕರು ಉಪಸ್ಥಿತರಿರಲಿದ್ದಾರೆ.

ನಜರ್‌ಬಾದ್‌ನ ಮಿನಿ ವಿಧಾನಸೌಧ ಮುಂಭಾಗದ ಉದ್ಯಾನದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಸ್ಥಾಪಿಸುವಂತೆ ವಾಲ್ಮೀಕಿ ಸಮುದಾಯದವರು ಹಲವು ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದರು. ಆದರೆ ಕಡೇ ಗಳಿಗೆಯಲ್ಲಿ ನೂತನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪುತ್ಥಳಿ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ನಾಯಕ ಸಮುದಾಯದ ಮುಖಂಡರೊಂದಿಗೆ ಮಂಗಳವಾರ ಮಾತುಕತೆ ನಡೆಸಿದರು.

ಎಚ್ಚರಿಕೆ ನೀಡಿದ್ದರು: ಮಿನಿ ವಿಧಾನಸೌಧದ ಮುಂಭಾಗದ ಉದ್ಯಾನವನದಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸಲು ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ. ಹಾಗಾಗಿ ಜಿಲ್ಲಾಡಳಿತದ ವತಿಯಿಂದ ನಡೆಸಲಾಗುವ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಬಹಿಷ್ಕರಿಸುವುದಾಗಿ ತಾಲೂಕು ನಾಯಕರ ಸಂಘ ಮಂಗಳವಾರ ಬೆಳಗ್ಗೆ ಸುದ್ದಿಗೋಷ್ಠಿ ಮೂಲಕ ಎಚ್ಚರಿಕೆ ನೀಡಿತ್ತು. ಇದರ ಬೆನ್ನಲ್ಲೇ ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಮೈಸೂರಿನ ನಿವಾಸದಲ್ಲಿ ನಾಯಕರ ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದಾರೆ. ಅಲ್ಲದೆ ಸ್ಥಳದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕರೆ ಮಾಡಿ, ವಿಷಯ ತಿಳಿಸಿದ್ದಾರೆ. ಇದರ ಬೆನ್ನಲ್ಲೇ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಸ್ಥಾಪನೆಗೆ ಶಂಕುಸ್ಥಾಪನೆ ನಿಗದಿಯಾಗಿದೆ

ಈ ಸಂಬಂಧ ಕರ್ನಾಟಕ ರಾಜ್ಯ ನಾಯಕ ಜನಾಂಗದ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಅವರು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಜಿಲ್ಲಾಡಳಿತದ ವತಿಯಿಂದ ಆಚರಿಸುವ ಮಹರ್ಷಿ ವಾಲ್ಮೀಕಿ ಜಯಂತಿ ಬಹಿಷ್ಕರಿಸುವ ಎಚ್ಚರಿಕೆ ನೀಡಿದ ಬೆನ್ನಲ್ಲೇ ಆಹ್ವಾನದ ಮೇರೆಗೆ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭಾಕರ ಹುಣಸೂರು, ತಾಲೂಕು ಅಧ್ಯಕ್ಷ ವಿನೋದ್ ನಾಗವಾಲ, ಮುಖಂಡರಾದ ನಾರಾಯಣ ಸೋಮೇಶ್ವರಪುರ, ಚಿಕ್ಕವೀರನಾಯಕ, ಗೋಪಾಲ್ ಮತ್ತಿತರರೊಂದಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಭೇಟಿಯಾದೆವು. ಅವರು ಮುಖ್ಯಮಂತ್ರಿಗಳಿಗೆ ಕರೆ ಮಾಡಿ, ವಿಷಯ ತಿಳಿಸಿದರು. ನಂತರ ಸಿಎಂ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದರಿಂದ ಈ ಕಾರ್ಯಕ್ರಮ ನಿಗದಿಪಡಿಸಲಾಗಿದೆ. ಇದಕ್ಕಾಗಿ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಮಾಜಿ ಶಾಸಕ ಮಂಜುನಾಥ್ ಅವರಿಗೆ ಸಮುದಾಯದ ಎಲ್ಲರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಂಗೆ ಲಾಟರಿ ಹೊಡೆದ್ರೆ ಏನ್ ಮಾಡ್ತೀಯಾ?
ಹೆಂಡತಿ : ಲಾಟರಿ ದುಡ್ಡಲ್ಲಿ ನಂಗೆ ಅರ್ಧ ಕೊಟ್ ಬಿಡ್ರಿ. ನಾನು ಪರ್ಮನೆಂಟ್ ಆಗಿ ಅಮ್ಮನ ಮನೆಗೆ ಹೋಗಿ ಇದ್ ಬಿಡ್ತೀನಿ.
ಗಂಡ : ನೂರು ರೂಪಾಯಿ ಲಾಟರಿ ಹೊಡೆದಿದೆ. 50 ರೂಪಾಯಿ ತಗೊಂಡು ನಿಮ್ಮ ಅಮ್ಮನ ಮನೆಗೆ ಹೋಗು.

ಮೈಸೂರು ಮಿತ್ರ
ಬುಧವಾರ, 16 ಅಕ್ಟೋಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಾ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಮನಕೆ ನೋವಾಗದೆ ಎಂದು ಇಂದೇ ಕಣ್ಣೀರು ಖಾಲಿ ಮಾಡಿದರೆ, ಮುಂದೊಂದು ದಿನ ಬರುವ ಆನಂದ ಭಾಷ್ಪಕ್ಕೆ ನೀರೆಲ್ಲಿ?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕತ್ತೆಗೆ ಲತ್ತೆ ಪೆಟ್ಟು, ಜಾಣರಿಗೆ ಮಾತಿನ ಪೆಟ್ಟು

ನಿಮ್ಮ ಪತ್ರಗಳು

ಯುವ ದಸರಾ ಮೆರುಗು ಹೆಚ್ಚಿಸಿದ ಇಳಯರಾಜರ ಸಂಗೀತ ಸಂಜೆ

ಮಾನ್ಯರೆ,
ಯುವ ದಸರಾದ ಕೊನೆಯ ದಿನ ಇಂಪಾದ ಗಾನ ಸುಧೆ ಹರಿಸುವುದರ ಮೂಲಕ ಸಂಗೀತ ಸಾಮ್ರಾಟ್ ಇಳಯರಾಜ ಮತ್ತು ಅವರ ತಂಡದವರು ಸಂಗೀತಾಸಕ್ತರನ್ನು ಬೇರೆ ಲೋಕಕ್ಕೆ ಕರೆದೊಯ್ದರು. ಚಾಮುಂಡೇಶ್ವರಿ ತಾಯಿಯನ್ನು ಭಜಿಸುವ ಭಕ್ತಿಗೀತೆಯನ್ನು ಸ್ವತಃ ಹಾಡಿದ ಇಳಯರಾಜ ತಮ್ಮ ಸಂಗೀತ ನಿರ್ದೇಶನದ ಅನೇಕ ಹಾಡುಗಳನ್ನೂ ಹಾಡಿದರು. ಖ್ಯಾತ ಗಾಯಕ ಎಸ್.ಪಿ.ಬಾಲು ಅವರು ಇಳಯರಾಜ ಅವರ ಸಂಗೀತ ನಿರ್ದೇಶನದಲ್ಲಿ ಕನ್ನಡದಲ್ಲಿ ಹಾಡಿದ್ದ, ಜನಪ್ರಿಯ ಹಾಡುಗಳನ್ನು ಬಾಲು ಅವರ ಮಗ ಎಸ್.ಪಿ.ಚರಣ್ ಹಾಡಿ ಮನಸ್ಸಿಗೆ ಮುದ ನೀಡಿದರು. ಇತರ ಕಲಾವಿದರೂ ಅದ್ಭುತವಾಗಿ ಹಾಡಿದರು. ಸಂಗೀತಗಾರರಂತೂ ಅದ್ಭುತವಾಗಿ ನುಡಿಸಿದರು. ಕಾರ್ಯಕ್ರಮದ ಮಧ್ಯೆ ಹಾಡಿನ ಹಿನ್ನೆಲೆಯ ಬಗ್ಗೆ ಕನ್ನಡದಲ್ಲೇ ಇಳಯರಾಜ ವಿವರಿಸಿದ್ದು ಮತ್ತು ಹೆಚ್ಚು ಕನ್ನಡ ಹಾಡುಗಳನ್ನು ಹಾಡಲು ಆರಿಸಿಕೊಂಡಿದ್ದು ಮನಸ್ಸಿಗೆ ಖುಷಿ ನೀಡಿತು. ಸುಮಾರು ಮೂವತ್ತು, ನಲವತ್ತು ವರ್ಷಗಳ ಹಿಂದೆ 'ತಾಂತ್ರಿಕತೆ' ಇಷ್ಟು ಮುಂದುವರೆಯದಿದ್ದ ಕಾಲದಲ್ಲೇ ತನ್ನ 'ಮಾಂತ್ರಿಕತೆ'ಯಿಂದ ಹೊಸ ಹೊಸ ಪ್ರಯೋಗ ಮಾಡಿ ಚಿರಕಾಲ ನೆನಪಿನಲ್ಲಿರುವಂತಹ ಅದ್ಭುತವಾದ ಮಧುರ ಹಾಡನ್ನು ನೀಡಿದವರು ಇಳಯರಾಜ. ಅವರ ಸಂಗೀತ ಸಂಜೆ ಮೈಸೂರು ಯುವದಸರಾದ ಮೆರುಗು ಹೆಚ್ಚಿಸಿರುವುದಂತೂ ನಿಜ.
–ರಾಘವೇಂದ್ರ ಜೋಯಿಸ್, ಮೈಸೂರು

ದಸರೆಯ ಸವಿನೆನಪೇ ಮನದಲ್ಲಿ ಆರಾಧನೆ!

ಮಾನ್ಯರೆ,
ಹೋದ ಪುಟ್ಟಿ ಬಂದಾ ಪುಟ್ಟಿ ಅನ್ನುವ ಹಾಗೆ ವಿಶ್ವವಿಖ್ಯಾತ ದಸರಾ ಮಹೋತ್ಸವ ಸಂಪನ್ನಗೊಂಡಿದ್ದರೂ, ದಸರೆಯ ಸವಿನೆನಪಿನ ಗುಂಗು ಇನ್ನಷ್ಟು ದಿನಗಳ ಕಾಲ ನಮ್ಮನ್ನು ಬಿಡದೇ ಕಾಡಬಹುದು. ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತ ಮುಂತಾದ ಲಲಿತ ಕಲೆಗಳ ತವರೂರಾದ ಅರಮನೆಗಳ ನಗರಿ ಮೈಸೂರು, ಬಣ್ಣ ಬಣ್ಣದ, ಚಿತ್ತಾಕರ್ಷಕ, ನಯನ ಮನೋಹರ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಾ, ಇಂದ್ರನ ಅರಮನೆಗೆ ಸವಾಲು ಹಾಕುವಂತಿತ್ತು. ಸಂಗೀತ ಕ್ಷೇತ್ರದ ದಿಗ್ಗಜರಾದ ಇಸೈ ಜ್ಞಾನಿ, ಮ್ಯೂಸಿಕ್ ಮಾಸ್ಟ್ರೋ ಇಳಯರಾಜ, ಚೆಲುವಿನ ಖನಿ, ಕೋಗಿಲೆಯ ಧ್ವನಿ ಶ್ರೀಮತಿ ಶ್ರೇಯಾ ಘೋಷಲ್, ಬಾಲಿವುಡ್ ಮತ್ತೊಬ್ಬ ಶ್ರೇಷ್ಠ ಕಂಪೋಸರ್ ಎ.ಆರ್. ರೆಹಮಾನ್, ಕನ್ನಡಿಗರ ಕಣ್ಮಣಿ ರವಿ ಬಸ್ರೂರು ಮುಂತಾದವರ ಅಮೋಘ ಸಂಗೀತ ಕಾರ್ಯಕ್ರಮ ದಸರೆಯ ಮೆರುಗನ್ನು ಮತ್ತಷ್ಟು ಹೆಚ್ಚಿಸಿತ್ತು. ಪಂಚ ಕಾವ್ಯೋತ್ಸವ, ದಸರಾ ವಸ್ತು ಪ್ರದರ್ಶನ, ಫಲ ಪುಷ್ಪ ಪ್ರದರ್ಶನ, ದಸರಾ ಕುಸ್ತಿ, ಮುಂತಾದ ಹತ್ತು ಹಲವು ವೈವಿಧ್ಯಮಯ ಕಾರ್ಯಕ್ರಮಗಳಿಂದ ಶೋಭಿತಳಾದ ತಾಯಿ ಭುವನೇಶ್ವರಿ, ಸಂತೃಪ್ತಳಾಗಿ, ವಿಜಯದಶಮಿಯಂದು ತನ್ನ ಹರ್ಷದ ಪ್ರತೀಕವಾಗಿ ತುಂತುರು ಮಳೆಯನ್ನು ಸಹ ಪನ್ನೀರಿನಂತೆ ಚೆಲ್ಲಿದಳು. ಇದ ಕಂಡು ಮುದಗೊಂಡ ಪ್ರಾಣಿ ಪಕ್ಷಿಗಳು ಸಹ ಹರ್ಷೋದ್ಗಾರದಿಂದ ಕೇಕೆ ಹಾಕಿದವು. ಈ ಬಾರಿಯ ದಸರೆಯಲ್ಲಿ ಅನೇಕ ಕಾರ್ಯಕ್ರಮಗಳಿಗೆ ಹೋಗಬೇಕೆಂದು ನಿರ್ಧರಿಸಿದ್ದರೂ ಸಹ, ಕಾರಣಾಂತರಗಳಿಂದ ಸಾಧ್ಯವಾಗದೇ ಜಂಬೂಸವಾರಿ ಮತ್ತು ಪಂಜಿನ ಕವಾಯಿತನ್ನು ಮನೆಯಲ್ಲೇ ಕುಳಿತು ಟಿವಿಯಲ್ಲಿ ನೋಡಿ ಪುಳಕಿತಗೊಂಡೆ. ಪಂಜಿನ ಕವಾಯಿತಿನಲ್ಲಿ ಮೋಟಾರ್ ಬೈಕ್ ಸವಾರರು ಮಾಡುತ್ತಿದ್ದ ಒಂದೊಂದು ಪ್ರದರ್ಶನವೂ ಮೈರೋಮಾಂಚನಗೊಳಿಸುತ್ತಿತ್ತು. ಈ ಬಾರಿಯ ಮತ್ತೊಂದು ಆಕರ್ಷಣೆ ಡ್ರೋನ್ ಪ್ರದರ್ಶನ ಕೂಡ ಒಂದು ಹೊಸ ಲೋಕವನ್ನೇ ತೆರೆದಿಟ್ಟಿತು. ಅಬ್ಬಬ್ಬ, ಏನು ಸಾಹಸ, ಏನು ಚಾತುರ್ಯ, ಏನು ತಂತ್ರಜ್ಞಾನ, ಇವೆಲ್ಲ ಮನುಷ್ಯನಿಂದ ಸಾಧ್ಯವೇ ಎಂದು ಯೋಚಿಸುವ ಹೊತ್ತಿಗೆ ನಿದ್ರಾದೇವಿ ನನ್ನ ಕೈಬೀಸಿ ಕರೆಯುತ್ತಿದ್ದಳು.
–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಶ್ರೀರಾಂಪುರ ವೃತ್ತದಲ್ಲಿ ಪೇದೆ ನೇಮಿಸಿ

ಮಾನ್ಯರೆ,
ಮೈಸೂರಿನ ಹೆಚ್.ಡಿ. ಕೋಟೆ ಮುಖ್ಯ ರಸ್ತೆಯ ಶ್ರೀರಾಂಪುರ ಟ್ರಾಫಿಕ್ ಸಿಗ್ನಲ್ ವೃತ್ತದಲ್ಲಿ ಬೆಳಗ್ಗೆ ಮತ್ತು ಸಂಜೆಯ ಸಮಯದಲ್ಲಿ ವಾಹನದ ಸಂಚಾರ ದಟ್ಟಣೆಯು ಹೆಚ್ಚಾಗುತ್ತಿದ್ದು ಸದರಿ ವೃತ್ತದಲ್ಲಿ ಟ್ರಾಫಿಕ್ ಸಿಗ್ನಲ್‌ಗೂ ಕ್ಯಾರೆ ಎನ್ನದ ವಾಹನ ಸವಾರರು ಹಾಗೂ ಸದರಿ ವೃತ್ತದಲ್ಲಿಯೇ ಪ್ರಯಾಣಿಕರ ಭಾರಿ ವಾಹನವು (ಬಸ್ಸುಗಳು) ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾರೆ. ಇದರಿಂದ ಹಿಂದಿನ ವಾಹನಗಳಿಗೆ ಹಾಗೂ ಸುತ್ತಮುತ್ತಲಿನ ವಾಹನಗಳಿಗೆ ತುಂಬಾ ತೊಂದರೆ ಯಾಗುತ್ತಿದೆ. ಆದ್ದರಿಂದ ಹಿರಿಯ ಅಧಿಕಾರಿಗಳು ಸದರಿ ವೃತ್ತದಲ್ಲಿ ಸಂಚಾರಿ ಪೇದೆಯನ್ನು ನೇಮಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ.
–ಪ್ರದೀಪ್ ಯರಗನಹಳ್ಳಿ, ಮೈಸೂರು

ನೀರಿನ ಟ್ಯಾಂಕ್ ಸಮಸ್ಯೆ ಬಗೆಹರಿಸಿ



ಮಾನ್ಯರೆ,
ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿಗೆ ಸೇರಿರುವ ಚಿಕ್ಕಾಟಿ ಗ್ರಾಮದಲ್ಲಿರುವ ಒಂದು ನೀರಿನ ಟ್ಯಾಂಕ್‌ನಲ್ಲಿ ನೀರು ತುಂಬಿ ಪ್ರತಿನಿತ್ಯ ವ್ಯರ್ಥವಾಗಿ ಹರಿಯುತ್ತಿದೆ. ಅದನ್ನು ನಿಲ್ಲಿಸುವ ವ್ಯವಸ್ಥೆ ಇಲ್ಲ. ನಿತ್ಯ ನೀರು ಹರಿದು ಟ್ಯಾಂಕ್ ಕೂಡ ಪಾಚಿಯಾಗಿ ಹಾಳಾಗಿದೆ. ಟ್ಯಾಂಕಿನ ಸುತ್ತಲಿನ ವಾತಾವರಣವು ಕಲುಷಿತವಾಗಿದೆ. ಅಕ್ಕಪಕ್ಕದ ಮನೆಗಳಿಗೂ ವಸ್ತಿಯಾಗಿ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಗಮನ ಹರಿಸುತ್ತಿಲ್ಲ. ಮುಂದಿನ ದಿನಗಳಲ್ಲಿ ಹಣಕೊಟ್ಟು ನೀರು ಪಡೆಯಬೇಕಾಗುತ್ತದೆ. ಮುಂದಿನ ಪೀಳಿಗೆಯವರು ಹತ್ತರಲ್ಲಿ ಒಬ್ಬರಿಗೆ ಮಾತ್ರ ನೀರು ದೊರೆಯುತ್ತದೆ ಎಂಬ ವೈಜ್ಞಾನಿಕ ಮಾತುಗಳು ಇರುವ ಸಂದರ್ಭದಲ್ಲಿ ಈ ರೀತಿ ನೀರು ವ್ಯರ್ಥವಾಗಿ ಹರಿಯುತ್ತಿರುವುದು ದುರಂತ! ಈ ಸಮಸ್ಯೆಯು ತೀವ್ರತೆಗೆ ಒಳಗಾದರೆ ನೀರಿನಿಂದ ಹರಡಬಹುದಾದ ಅಸ್ತಮಾ, ಕಾಲರಾ ಮೊದಲಾದ ರೋಗಗಳು ಸಂಭವಿಸುವ ಸಾಧ್ಯತೆಗಳಿವೆ. ಆದ್ದರಿಂದ ಸಮಸ್ಯೆಯು ದೊಡ್ಡದಾಗುವ ಮೊದಲೇ ಸಂಬಂಧಪಟ್ಟವರು ಸಮಸ್ಯೆಯನ್ನು ಪರಿಹರಿಸಬೇಕು. ನೀರನ್ನು ನಿಲ್ಲಿಸುವ ವ್ಯವಸ್ಥೆ ಕಲ್ಪಿಸಿ ಮತ್ತು ಟ್ಯಾಂಕನ್ನು ದುರಸ್ತಿಗೊಳಿಸಬೇಕು.
– ಎನ್.ಆರ್.ಚೇತನ್, ನಂಜನಗೂಡು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಯೋಗಾಂಗಗಳಾದ ಯಮ ಮತ್ತು ನಿಯಮ

ಯೋಗ ಸೂತ್ರಗಳನ್ನು ಜಗತ್ತಿಗೆ ನೀಡಿದ ಪತಂಜಲಿ ಮಹರ್ಷಿಗಳು ಯೋಗಿಯು ಹೇಗೆ ಈ ಪ್ರಪಂಚದಲ್ಲಿ ಬದುಕಬೇಕೆಂಬ ಸ್ಪಷ್ಟ ಕಲ್ಪನೆಯನ್ನು ಹೊಂದಿದ್ದರು. ಆ ಯೋಗ ಜೀವನಕ್ಕೆ ಅನುಗುಣವಾದ ತತ್ತ್ವಗಳೇ ಯಮ ಮತ್ತು ನಿಯಮ. ಹೊರಗಿನ ಪ್ರಪಂಚದಲ್ಲಿ ಯೋಗಿಯು ಪಾಲಿಸಬೇಕಾದ ಶಿಸ್ತಿನ ಸಾರವೇ ಯಮ. ಯಮದಲ್ಲಿ ಐದು ಆವಶ್ಯಕ ಅಂಶಗಳಿವೆಯೆಂದು ಪಾತಂಜಲ ಯೋಗಸೂತ್ರವು ತಿಳಿಸಿದೆ.

'ಅಹಿಂಸಾ–ಸತ್ಯ–ಅಸ್ತೇಯ–ಬ್ರಹ್ಮಚರ್ಯ–ಅಪರಿಗ್ರಹಾ ಯಮಾಃ'

ಮೊದಲನೆಯ ಯಮ ಎಂದರೆ ಅಹಿಂಸೆ. ಜೀವಕ್ಕೆ ನೋವನ್ನುಂಟು ಮಾಡುವುದು ಹಿಂಸೆ. ಎಲ್ಲ ಪ್ರಾಣಿಗಳಿಗೂ ಬದುಕುವ ಹಕ್ಕು ಇದೆ. ಯೋಗಿಯಾಗ ಬಯಸುವವನು ಯಾವ ಪ್ರಾಣಿಗೂ ನೋವನ್ನು ಉಂಟು ಮಾಡಬಾರದು. ಆ ನೋವು ಸಾವಿನಲ್ಲಿ ಪರಿಣಮಿಸಿದರೆ ಘೋರಪರಾಧ. ಹಿಂಸೆಯೆಂಬುದು ಮಾನಸಿಕ, ವಾಚಿಕ ಮತ್ತು ಶಾರೀರಿಕವೆಂದು ಮೂರು ವಿಧ. ಯಾರನ್ನಾದರೂ ಹಿಂಸಿಸಬೇಕು ಎಂದು ಮನಸ್ಸಿನಲ್ಲಿ ಯೋಚಿಸುವುದೂ ಪಾಪ. ಆದರೆ ಇದು ಅಲ್ಪ ಪಾಪ. ಹಾಗೆ ಯೋಚಿಸಿದ ಮೇಲೆ ಅದನ್ನು ಮಾತಿನ ರೂಪಕ್ಕೆ ಇಳಿಸಿದರೆ ಅದು ವಾಚಿಕ ಹಿಂಸೆ. ಇತರರನ್ನು ಹಳಿಯುವುದು, ವ್ಯಂಗ್ಯವಾದ ರೀತಿಯಿಂದ ನಿಂದಿಸುವುದು, ಅವರ ಬಗೆಗೆ ಲೇಖನ ರೂಪದಲ್ಲಿ ಅವಹೇಳನ ಮಾಡುವುದು, ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಮಾತಿನಿಂದ ಅವಮಾನಿಸುವುದು – ಇದೆಲ್ಲ ವಾಚಿಕ ಹಿಂಸೆ. ಇದು ಘೋರತರ. ಇನ್ನು ಶಾರೀರಿಕವಾಗಿ ಹೊಡೆಯುವುದು, ಬಡಿಯುವುದು, ಕಡಿಯುವುದು, ಆಯುಧಗಳಿಂದ ಅಂಗಾಂಗಳನ್ನು ಮುರಿಯುವುದು, ಬೆಂಕಿಯಿಂದ ಸುಡುವುದು ಘೋರತಮವಾದ ಪಾಪ. ಯೋಗಿಯಾಗಲು ಬಯಸುವವನು ಮೂರು ವಿಧವಾದ ಹಿಂಸೆಯನ್ನೂ ತ್ಯಜಿಸಬೇಕು. ಮನುಷ್ಯರಿಗೆ ಮಾತ್ರ ಇದು ಅನ್ವಯಿಸುತ್ತದೆ. ಪ್ರಾಣಿಗಳನ್ನು ಕೊಂದರೆ ತಪ್ಪಿಲ್ಲ ಎನ್ನಬಾರದು. ವೃಕ್ಷಗಳಿಗೂ ಪ್ರಾಣವಿದೆ. ಯಾವುದಕ್ಕೂ ಹಿಂಸೆಯನ್ನು ಮಾಡದೆ ಜೀವಿಸುವವನೇ ಯೋಗಿ. ಅಹಿಂಸಾ ಪರಮೋ ಧರ್ಮಃ.

ಎರಡನೆಯ ಯಮ ಸತ್ಯ. ಸತ್ಯಮೇವ ಜಯತೇ, ನಾನೃತಮ್ ಎಂಬುದು ಮುಂಡಕೋಪನಿಷತ್ತಿನ ತತ್ತ್ವ. ಅದೇ ಭಾರತ ಸರ್ಕಾರದ ಧ್ಯೇಯವಾಕ್ಯ. ಸತ್ಯವನ್ನು ಎತ್ತಿ ಹಿಡಿಯುವುದಕ್ಕಾಗಿಯೇ ಹರಿಶ್ಚಂದ್ರ, ಶ್ರೀರಾಮ, ಯುಧಿಷ್ಠಿರ ಮುಂತಾದವರು ಹೋರಾಡಿದರು. ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬುದು ಗೋವಿನ ಮಾತು.

ಭಯ, ಲೋಭ, ಪ್ರಲೋಭನೆಗಳಿಗೆ ಈಡಾಗದೆ ವಸ್ತುಸ್ಥಿತಿಯನ್ನು ಯಾವ ವ್ಯತ್ಯಾಸವನ್ನೂ ಮಾಡದೆ, ಯಾವ ಅಂಶವನ್ನೂ ಮುಚ್ಚಿಡದೆ ಹೇಳುವುದು ಸತ್ಯ. ಯಾರದೋ ಮುಲಾಜಿಗಾಗಿ, ದಾಕ್ಷಿಣ್ಯಕ್ಕಾಗಿ, ಯಾರನ್ನೋ ಖುಷಿಪಡಿಸಲು ಅಯಥಾರ್ಥವಾಗಿ ಹೊಗಳುವುದು, ಇಲ್ಲದ ದೋಷಗಳನ್ನು ಇತರರ ಮೇಲೆ ಆರೋಪಿಸುವುದು, ಅಯಥಾರ್ಥ ಭಾಷಣ–ಇವೆಲ್ಲ ಅಸತ್ಯ. ಯೋಗಿಯಾಗಲು ಬಯಸುವವನು ಅಸತ್ಯವನ್ನು ವರ್ಜಿಸಬೇಕು.

ಮೂರನೆಯ ಯಮವನ್ನು ಅಸ್ತೇಯ ಎಂದು ಕರೆದಿದ್ದಾರೆ. ಸಂಸ್ಕೃತದಲ್ಲಿ ಸ್ತೇನ ಎಂದರೆ ಕಳ್ಳ, ಸ್ತೇಯ ಎಂದರೆ ಕಳ್ಳತನ. ಅಸ್ತೇಯ ಎಂದರೆ ಕಳ್ಳತನವನ್ನು ಮಾಡದಿರುವುದು. ಕದಿಯದಿರುವುದು. ಎಂದರೆ ಯಾರದೋ ಮನೆಗೆ ಕನ್ನ ಹಾಕಿ ಕಳ್ಳತನ ಮಾಡುವುದು, ವಸ್ತುವಿನ ಒಡೆಯನಿಗೆ ತಿಳಿಯದಂತೆ ಅದನ್ನು ತನ್ನದಾಗಿ ಮಾಡಿಕೊಳ್ಳುವುದು ಅಥವಾ ವಸ್ತುವಿನ ಒಡೆಯನನ್ನು ಬೆದರಿಸಿ ಹೆದರಿಸಿ ಕಿತ್ತುಕೊಳ್ಳುವುದು ಮಾತ್ರವಲ್ಲ, ಯಾರಿಗಾದರೂ ಅತ್ಯಂತ ಆವಶ್ಯಕವಾದ ವಸ್ತುವನ್ನು ಧನಬಲದಿಂದ, ಸಾಮಾಜಿಕ ಸ್ಥಾನದ ಬಲದಿಂದ, ಬುದ್ಧಿ ಬಲದಿಂದ ಬೇರೆಯವರು ವಶಪಡಿಸಿಕೊಂಡರೂ ಅದು ಕಳ್ಳತನವೇ. ಅಸ್ತೇಯ ಎಂಬ ತತ್ತ್ವಕ್ಕೆ ಅದು ವಿರುದ್ಧ. ಕಾಳಸಂತೆ (black market) ಮುಂತಾದವು. ಅನೇಕ ವೇಳೆ ಕಾನೂನಿಗೆ ವಿರುದ್ಧವಾಗಿಲ್ಲದೆ ಇರಬಹುದು. ಆದರೂ ಅದು ಧರ್ಮದ ದೃಷ್ಟಿಯಿಂದ ಕಳ್ಳತನವೇ. ಯೋಗಿಯಾಗಲು ಬಯಸುವವನು ಅದನ್ನು ಸರ್ವಥಾ ವರ್ಜಿಸಬೇಕು.

ಮೇಲೆ ಹೇಳಿದ ಅಸ್ತೇಯ, ಅಹಿಂಸೆ, ಸತ್ಯ ಎಂಬ ಮೂರು ಯಮಗಳನ್ನೇ ಭಕ್ತಿ ಭಂಡಾರಿ ಬಸವಣ್ಣನವರು –

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಎಂಬ ವಚನದಲ್ಲಿ ಹೇಳಿದ್ದಾರೆಂಬುದನ್ನು ಗಮನಿಸಬೇಕು.

ನಾಲ್ಕನೆಯ ಯಮವೆಂದರೆ ಬ್ರಹ್ಮಚರ್ಯ. ಬ್ರಹ್ಮಚಾರೀ ಎಂದರೆ ವೇದ ವಿದ್ಯಾರ್ಥಿ. ವೇದವನ್ನು ಕಲಿಯುತ್ತಿರುವ ವಯಸ್ಸಿನಲ್ಲಿ ಸ್ತ್ರೀ ಸಂಪರ್ಕವನ್ನು ಮನಸಾ, ವಾಚಾ, ಕಾಯೇನ (ಮನಸ್ಸಿನಲ್ಲಾಗಲೀ, ಮಾತಿನಲ್ಲಾಗಲೀ, ಶರೀರದಲ್ಲಾಗಲೀ) ಮಾಡದಿರುವುದು ಶಾಸ್ತ್ರ ವಿಹಿತವಾದ್ದರಿಂದ ಅದರ ಅನುಸರಣೆ ಬ್ರಹ್ಮಚರ್ಯ. ಅದೇ ರೀತಿಯಲ್ಲಿ ಸ್ತ್ರೀಯೂ ಪುರುಷ ಸಂಪರ್ಕವನ್ನು ಸರ್ವಥಾ ವರ್ಜಿಸುವುದು ಬ್ರಹ್ಮಚರ್ಯ. ನವರಾತ್ರಿಯಲ್ಲಿ ನಾವು ಪೂಜಿಸುವ ದೇವಿಯರಲ್ಲಿ ಒಬ್ಬಳು ಬ್ರಹ್ಮಚಾರಿಣೀ ಎಂಬ ದೇವತೆ ಇದ್ದಾಳೆ ಎಂಬುದನ್ನು ಗಮನಿಸಬೇಕು. ಗೃಹಸ್ಥರು ಯೋಗಿಗಳಾಗ ಬಯಸಿದಾಗಲೂ ಅವರು ಶರೀರದ ಕಾಮನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡು ಬ್ರಹ್ಮಚರ್ಯವನ್ನು ಪಾಲಿಸಬೇಕು.

ಐದನೆಯ ಯಮವನ್ನು ಅಪರಿಗ್ರಹ ಎಂದು ಕರೆದಿದ್ದಾರೆ. ಪರಿಗ್ರಹ ಎಂದರೆ ಸಿಕ್ಕಿದುದನ್ನೆಲ್ಲ ತನ್ನದಾಗಿ ಮಾಡಿಕೊಳ್ಳುತ್ತಿರುವುದು. ಮಾನವನ ಆಸೆಗೆ ಮಿತಿಯಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಏನನ್ನು ಕಂಡರೂ ಅದು ನನ್ನದಾಗಲಿ ಎನ್ನುತ್ತದೆ ಮನಸ್ಸು. ಎಷ್ಟೋ ಜನರ ಬಳಿ ಎಷ್ಟು ಧನವಿರುತ್ತದೆಯೆಂದರೆ, ಅವರು ಅದನ್ನು ಖರ್ಚು ಮಾಡುವುದಕ್ಕೂ ಆಗದು. ಆದರೂ ಮತ್ತೆ ಹಣ ಬಂದರೆ ಅವರು ಬೇಡ ಎನ್ನುವುದಿಲ್ಲ. ಯೋಗ ಮಾರ್ಗದಲ್ಲಿದ್ದವನು ಹಾಗೆ ಆಸೆ ಪಡದೆ ಇರುವುದು ಅಪರಿಗ್ರಹ. ಬುದ್ಧನಿಗೆ ಅಪಾರವಾದ ಹಣವನ್ನೂ ಭೂಮಿಯನ್ನು ಕೊಡಲು ರಾಜರು, ಶ್ರೀಮಂತರು ಸಿದ್ಧರಾಗಿದ್ದರು. ಆದರೆ ಬುದ್ಧನು ಅದು ಯಾವುದನ್ನೂ ಸ್ವೀಕರಿಸಲಿಲ್ಲ. ಶರೀರದ ಪ್ರಾಣಧಾರಣೆಗಾಗಿ ಆ ದಿನ ಎಷ್ಟು ಬೇಕಾಗಿತ್ತೋ ಅಷ್ಟು ಆಹಾರವನ್ನು ಮಾತ್ರ ಅವನು ಸ್ವೀಕರಿಸುತ್ತಿದುದು. ಈ ಅಪರಿಗ್ರಹವ್ರತವನ್ನು ಎಲ್ಲರೂ ಪಾಲಿಸಿದರೆ ಜಗತ್ತಿನಲ್ಲಿ ಎಲ್ಲರಿಗೂ ತೃಪ್ತಿಯಾಗುವಷ್ಟು ಆಹಾರ, ವಸ್ತ್ರ, ವಸತಿ ಎಲ್ಲವೂ ದೊರಕುತ್ತವೆ.

ಅನೇಕರು ತಾವು ಅಹಿಂಸಾದಿ ವ್ರತಗಳನ್ನು ಪಾಲಿಸುತ್ತಿರುವುದಾಗಿ ಹೇಳಿಕೊಳ್ಳುತ್ತಾರೆ. ನೇರವಾಗಿ ಯಾವ ಪ್ರಾಣಿಯನ್ನೂ ತಾವು ಕೊಲ್ಲುತ್ತಿಲ್ಲ ಎಂಬುದು ಅವರ ವಿವರಣೆ. ಅವರು ಮಾಂಸಾಹಾರವನ್ನು ತಿನ್ನುತ್ತಾ ನಾವು ಯಾವ ಪ್ರಾಣಿಯನ್ನೂ ಕತ್ತರಿಸಿ ಕೊಲ್ಲಲಿಲ್ಲ ಎನ್ನುತ್ತಾರೆ. ಆದರೆ ಮಾಂಸವನ್ನು ಹಣ ಕೊಟ್ಟು ಕೊಳ್ಳುವವರು ಇದ್ದಾರೆ ಎಂಬ ಕಾರಣದಿಂದ ಕಟುಕರು ಪ್ರಾಣಿಗಳನ್ನು ಕೊಂದು ಮಾಂಸವನ್ನು ಮಾರುತ್ತಾರೆ. ಆದ್ದರಿಂದ ಮಾಂಸ ಭಕ್ಷಕರು ಪ್ರಾಣಿಗಳನ್ನು ಕೊಲ್ಲದಿದ್ದರೂ ಇತರರಿಂದ ಕೊಲ್ಲಿಸುತ್ತಾರೆ. ಅನೇಕರು ರೇಷ್ಮೆ ಬಟ್ಟೆಗಳನ್ನು ತೊಡುತ್ತಾರೆ. ಅದು ಎಷ್ಟು ಜೀವಹಿಂಸೆಗೆ ಕಾರಣ ಎಂಬ ಅರಿವು ಅವರಿಗೆ ಇರುವುದಿಲ್ಲ. ರೇಷ್ಮೆಯ ಒಂದು ಸೀರೆ ಅಥವಾ ಪಂಚೆಯನ್ನು ತಯಾರಿಸಲು ಹತ್ತು ಸಾವಿರ ಜೀವಂತ ರೇಷ್ಮೆ ಹುಳುಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಸಾಯಿಸಿರುತ್ತಾರೆ. ರೇಷ್ಮೆ ಬಟ್ಟೆಯನ್ನು ತೊಡುವವರು ಸಾಕ್ಷಾತ್ತಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಆ ಹುಳುಗಳನ್ನು ಕೊಂದಂತೆ ಅಲ್ಲವೆ? ಮಾಡುವವನಿಗೆ ಎಷ್ಟು ಪಾಪವೋ ಮಾಡಿಸುವ ವ್ಯಕ್ತಿಗೂ ಅಷ್ಟೇ ಪಾಪ. ಹಾಗೆ ಮಾಡಲು ಪ್ರೇರಣೆಯನ್ನು ಕೊಡುವವನಿಗೂ, ಪಾಪ ಕಾರ್ಯವನ್ನು ಮಾಡುವುದನ್ನು ನೋಡುತ್ತಾ ಅನುಮೋದನೆ ಮಾಡುವವನಿಗೂ ಅಷ್ಟೇ ಪಾಪ ಸುತ್ತಿಕೊಳ್ಳುತ್ತದೆ ಎಂದು ಶಾಸ್ತ್ರ ಹೇಳಿದೆ.

**ಕರ್ತಾ ಕಾರಯಿತಾ ಚೈವ ಪ್ರೇರಕಶ್ಚಾನುಮೋದಕಃ।
ಸುಕೃತೇ ದುಷ್ಕೃತೇ ಚೈವ ಚತ್ವಾರಃ ಸಮಭಾಗಿನಃ॥**

'ಒಳ್ಳೆಯ ಕೆಲಸವಾಗಲಿ, ಕೆಟ್ಟ ಕೆಲಸವಾಗಲಿ, ಮಾಡುವವನು, ಮಾಡಿಸುವವನು, ಪ್ರೇರೇಪಿಸುವವನು, ಅನುಮೋದಿಸುವವನು ಎಂಬ ನಾಲ್ವರೂ ಪುಣ್ಯ –ಪಾಪಗಳಲ್ಲಿ ಸಮಭಾಗಿಗಳು'.

ಈ ತಪ್ಪುಗಳನ್ನು ಮಾಡುವವರು ಯೋಗವನ್ನು ಅಭ್ಯಸಿಸಲು ಬೇಕಾದ ಅರ್ಹತೆಯನ್ನೇ ಹೊಂದಿಲ್ಲವೆನ್ನಬೇಕಲ್ಲವೆ? ನಾನು ಸುಳ್ಳು ಹೇಳುವುದಿಲ್ಲ, ಆದರೆ ನ್ಯಾಯಾಲಯದಲ್ಲಿ ಯಾರಿಗೋ ದುಡ್ಡು ಕೊಟ್ಟು ಸುಳ್ಳು ಸಾಕ್ಷಿ ಹೇಳಿಸಿ ಗೆಲ್ಲುತ್ತೇನೆ ಎಂದರೆ ಸತ್ಯವನ್ನು ಪಾಲಿಸಿದಂತಾಯಿತೆ?

ಯೋಗಾಭ್ಯಾಸಿಗಳಲ್ಲಿ ಆರುರುಕ್ಷು, ಯೋಗಾರೂಢ ಎಂಬ ಎರಡು ಹಂತಗಳನ್ನು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಹೇಳಿದ್ದಾನೆ. ಇನ್ನೂ ಯೋಗವನ್ನು ಕಲಿಯುತ್ತಿರುವವನು ಆರುರುಕ್ಷು. ಕಲಿತು ಪರಿಪಕ್ವ ಬುದ್ಧಿಯನ್ನು ಪಡೆದು ಪರಿಣತನಾಗಿರುವವನು ಯೋಗಾರೂಢ.

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ॥**

ಯೋಗವನ್ನು ಇನ್ನೂ ಕಲಿಯಬೇಕೆಂಬ ಅವಸ್ಥೆಯಲ್ಲಿದ್ದಾಗ, ಕರ್ಮವೇ ಮಾರ್ಗ ಎನ್ನುತ್ತೇವೆ. ಅವನೇ ಯೋಗಾರೂಢನಾದಾಗ ಶಮ (ಶಾಂತಿಯೇ)ವೇ ಮಾರ್ಗ ಎನ್ನುತ್ತೇವೆ. ಆದ್ದರಿಂದ ಆರಂಭಾವಸ್ಥೆಯಲ್ಲಿ ಯೋಗಾಭ್ಯಾಸಿಯು ಯಮಗಳನ್ನು ಯಥಾಶಕ್ತಿ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಸಂಪೂರ್ಣವಾಗಿ ಅನುಸರಿಸಲು ಆಗದೆಂದು ಬಿಟ್ಟು ಬಿಡಬಾರದು. ಮೊದಲು ಎಲ್ಲ ಮನುಷ್ಯರಿಗೆ, ಅನಂತರ ಎಲ್ಲ ಪ್ರಾಣಿಗಳಿಗೆ, ಕೊನೆಗೆ ಜೀವವಿರುವ ಎಲ್ಲ ಚೇತನಗಳಿಗೆ ಅಹಿಂಸೆಯನ್ನು ವಿಸ್ತರಿಸಬೇಕು. ಸತ್ಯ ಪಾಲನೆಯನ್ನು ಮಾಡುತ್ತ ಹೋದಂತೆ, ಸತ್ಯದ ಶಕ್ತಿ ಗೋಚರವಾಗುತ್ತದೆ. ಯೋಗಾರೂಢನಾದವನು ಯಾವ ಆಶೆಯನ್ನೂ ಹೊಂದಿರದ ಕಾರಣ, ಅವನು ಹಿಂಸೆ, ಅಸತ್ಯ, ಸ್ತೇಯಗಳಲ್ಲಿ ಭಾಗಿಯಾಗುವ ಸಂದರ್ಭವೇ ಇರುವುದಿಲ್ಲ.

**ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ।
ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ॥**

ಎಂಬ ಶ್ಲೋಕವು ಇದನ್ನು ಸ್ಪಷ್ಟಪಡಿಸುತ್ತದೆ. ಯೋಗಾರೂಢನು ತನ್ನ ಬ್ರಹ್ಮಚರ್ಯ ವ್ರತವನ್ನು ಭಗ್ನಗೊಳಿಸುವುದಾಗಲಿ, ಜನರಿಂದ ಅದನ್ನೋ ಇದನ್ನೋ ಪರಿಗ್ರಹಿಸುವುದಾಗಲಿ ಅಸಂಭವ. ಆ ಸ್ಥಿತಿಗೆ ತಲುಪುವುದು ಪ್ರತಿಯೊಬ್ಬ ಯೋಗಿಯ ಧ್ಯೇಯವಾಗಿರಬೇಕು.

ಎಂಟು ಯೋಗಾಂಗಗಳಲ್ಲಿ ಮೊದಲನೆಯದು ಯಮ. ಅದರ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ಅರಿತುಕೊಂಡೆವು. ಮುಂದಿನ ಲೇಖನಗಳಲ್ಲಿ ನಿಯಮಗಳನ್ನು ಪರಿಚಯಿಸಿಕೊಳ್ಳೋಣ.

**ಯೋಗೇನ ಚಿತ್ತಸ್ಯ ಪದೇನ ವಾಚಾಂ
ಮಲಂ ಶರೀರಸ್ಯ ಚ ವೈದ್ಯಕೇನ।
ಯೋಽಪಾಕರೋತ್ತಂ ಪ್ರವರಂ ಮುನೀನಾಂ
ಪತಂಜಲಿಂ ಪ್ರಾಂಜಲಿರಾನತೋಽಸ್ಮಿ॥**

ದಕ್ಷಿಣ ಗಂಗೆ ಕಾವೇರಿ ಕಲಿ ಕಲ್ಮಷನಾಶಿನಿ



ವಿ.ಕೇಶವಮೂರ್ತಿ
ಜ್ಯೋತಿಷ ವಿದ್ವಾಂಸ
'ಚೈತನ್ಯಶ್ರೀ'
ಮೊ: 9740973224

ನಮ್ಮ ಪುರಾಣಗಳ ಪ್ರಕಾರ ಸಪ್ತ ದ್ವೀಪಗಳು ಎಂದರೆ ಜಂಬು, ಪಕ್ಷ, ಶುಕ, ಕ್ರೌಂಚ, ಶಾಕ, ಶಾಲ್ಮಲಿ ಮತ್ತು ಪುಷ್ಕರ. ಇವುಗಳಲ್ಲಿ ಭಾರತ ದೇಶವನ್ನೇ ಜಂಬು ದ್ವೀಪವೆಂದು ಕರೆದಿರುವುದು. ಯಾವುದೇ ಪೂಜೆ, ಯಜ್ಞ, ಶ್ರಾದ್ಧ, ತರ್ಪಣಾದಿಗಳನ್ನು ಮಾಡುವಾಗ ಹೇಳುವ ಸಂಕಲ್ಪದಲ್ಲಿ ಜಂಬೂ ದ್ವೀಪೇ, ಭರತ ವರ್ಷ ಭರತ ಖಂಡೇ ಎಂದು ಹೇಳುತ್ತೇವೆ. ಅದರಂತೆ ಸಪ್ತ ನದಿಗಳ ಸ್ಮರಣೆಯನ್ನು ದಿನನಿತ್ಯ ಸ್ನಾನ ಮಾಡುವಾಗ "ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ, ನರ್ಮದೆ, ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು" ಎಂದು ಹೇಳಿಕೊಂಡು ಸ್ನಾನ ಮಾಡುವ ಪದ್ಧತಿ ಹಿಂದು ಸಂಪ್ರದಾಯಸ್ಥರ ಕುಟುಂಬಗಳಲ್ಲಿ ಇನ್ನೂ ವಾಡಿಕೆಯಲ್ಲಿದೆ.

ಈ ಸಪ್ತ ಮಹಾನದಿಗಳಲ್ಲಿ ಒಂದಾದ ಕಾವೇರಿ ದಕ್ಷಿಣ ಗಂಗೆ, ಕಲಿ ಕಲ್ಮಷನಾಶಿನಿ ಎಂದು ಪ್ರಸಿದ್ಧಳಾಗಿದ್ದಾಳೆ. ಈಕೆಯ ಚರಿತ್ರೆ ನಮ್ಮನ್ನು ತ್ರೇತಾಯುಗಕ್ಕೆ ಕರೆದೊಯ್ಯುತ್ತದೆ. ಕಾವೇರಿಯ ಚರಿತ್ರೆ 'ಸ್ಕಂದ ಪುರಾಣ' ಮತ್ತು 'ಕಾವೇಲಿ ಪುರಾಣ'ದಲ್ಲಿ ಬರುತ್ತದೆ. ಇದರಲ್ಲಿ ತುಂಬ ಪ್ರಸಿದ್ಧವಾದ ಕಥೆ ಏನೆಂದರೆ ಕವೇರ ಮುನಿ ಮಹಾತಪಸ್ವಿ, ತನಗೊಬ್ಬ ಲೋಕೋತ್ತರಳಾದ ಪುತ್ರಿಯನ್ನು ಬೇಡಿಕೊಳ್ಳುತ್ತಾನೆ. ಬ್ರಹ್ಮನ ವರ ಪ್ರಸಾದದಿಂದ ಕವೇರ ಮುನಿಯ ಪತ್ನಿ ಲೋಪಮುದ್ರಾಳ ಗರ್ಭದಲ್ಲಿ ಜನಿಸಿದವಳೇ ಕಾವೇರಿ.

ಅಗಸ್ತ್ಯರ ಮಹಿಮೆ


ಋಗ್ವೇದ, ರಾಮಾಯಣಗಳಲ್ಲಿ ಈ ಮುನಿಯ ಉಲ್ಲೇಖವಿದೆ. ಒಮ್ಮೆ ದೈವ ಉಪಟಳಗಳಾದ ರಾಕ್ಷಸರ ಗುಂಪೊಂದು ಸಮುದ್ರದಲ್ಲಿ ಅಡಗಿ ಕುಳಿತೇ ದೇವತೆಗಳಿಗೆ ತೊಂದರೆ ಕೊಡುತ್ತಿರುತ್ತಾರೆ. ಆಗ ಅಗಸ್ತ್ಯರ ಆಗಾಧ ಶಕ್ತಿಯನ್ನು ಅರಿತಿದ್ದ ದೇವೇಂದ್ರ ಇತರ ದೇವಗಣ ಸಹಿತ ಅಗಸ್ತ್ಯರಲ್ಲಿಗೆ ಬಂದು, ಸಮುದ್ರವನ್ನು ಆಪೋಶನ ತೆಗೆದುಕೊಂಡಲ್ಲಿ ತಾವು ಅಲ್ಲಿರುವ ರಾಕ್ಷಸರನ್ನು ಸಂಹಾರ ಮಾಡುತ್ತೇವೆ. ದಯಮಾಡಿ ನಮಗೋಸ್ಕರ ಈ ಉಪಕಾರವನ್ನು ಮಾಡಬೇಕೆಂದು ಪ್ರಾರ್ಥಿಸುತ್ತಾನೆ. ಇಂದ್ರನ ವಿನಂತಿಯನ್ನು ಪುರಸ್ಕರಿಸಿದ ಅಗಸ್ತ್ಯರು ಸಪ್ತಸಾಗರಗಳ ನೀರನ್ನು ಅಪೋಶನ ತೆಗೆದುಕೊಂಡು ಬಿಡುತ್ತಾರೆ. ನೀರೆಲ್ಲ ಬರಿದಾಗುತ್ತದೆ. ಹಾಗೂ ಅಲ್ಲಿ ಸಮುದ್ರದಲ್ಲಿ ಅವಿತು ಕುಳಿತಿದ್ದ ರಾಕ್ಷಸರು ಪ್ರಕಟಗೊಳ್ಳುತ್ತಾರೆ. ದೇವೇಂದ್ರ ಇವರನ್ನು ಕೊಂದು ಹಾಕುತ್ತಾನೆ.

ಇನ್ನೊಮ್ಮೆ ತ್ರೇತಾಯುಗದ ಆದಿಯಲ್ಲಿ ಶಿವ ಪಾರ್ವತಿಯರ ಕಲ್ಯಾಣ ಕೈಲಾಸ ಪರ್ವತದಲ್ಲಿ ನಡೆಯುವ ಸಂದರ್ಭದಲ್ಲಿ ಅಗಸ್ತ್ಯರೂ ಅಲ್ಲಿಗೆ ಹೋದಾಗ ಭೂಮಿ ಮತ್ತು ಕೈಲಾಸಗಳ ಸಮತೋಲನದಲ್ಲಿ ಏರುಪೇರು ಉಂಟಾಗುತ್ತದೆ. ಇದಕ್ಕೆ ಅಗಸ್ತ್ಯ ಮುನಿಗಳ ತಪಸ್ಸಿನ ಭಾರವೇ ಕಾರಣವೆಂದು ತನ್ನ ಅಂತರ್ದೃಷ್ಟಿಯಿಂದ ಅರಿತ ಭಗವಾನ್ ಶಂಕರನು ಅವರಿಗೆ ದಕ್ಷಿಣ ದಿಕ್ಕಿನತ್ತ ಪ್ರಯಾಣ ಮಾಡಲು ಹೇಳುತ್ತಾನೆ.

'ಅಗಂ ಪರ್ವತಂ ಸ್ಥಂಭತಿ ಇತಿ ಅಗಸ್ತ್ಯ' ಈ ರೀತಿಯಾಗಿ ದಕ್ಷಿಣಕ್ಕೆ ಹೊರಟ ಮುನಿಗಳಿಗೆ ಅಹಂಕಾರ ಮತ್ತನಾದ ವಿಂಧ್ಯಪರ್ವತ ತಾನು ಸೂರ್ಯನ ಚಲನೆಯನ್ನೇ ಅಡ್ಡಿ ಪಡಿಸುತ್ತೇನೆಂದು ಆಕಾಶದೆತ್ತರ ಬೆಳೆದು ಭೂಲೋಕದಲ್ಲಿ ಗಾಳ ಮಳೆಗಳು ಆಗದಂತೆ ತಡೆದಿರುತ್ತಾನೆ. ಆಗ ವಾಮನನಂತೆ ಕುಳ್ಳು ಮೈಕಟ್ಟು ಹೊಂದಿರುವ ಅಗಸ್ತ್ಯ ಮುನಿಗಳು ತಮ್ಮ ತಮೋಭಾರವನ್ನು ಎಡಗಾಲಿಗೆ ಆವಾಹಿಸಿ ವಿಂಧ್ಯ ಪರ್ವತವನ್ನು ಮೆಟ್ಟಲು, ಅದು ತನ್ನ ಸ್ವಸ್ಥಾನವನ್ನು ತಲುಪಿ ಪ್ರಜೆಗಳಿಗೆ ಒದಗಿದ್ದ ಕಂಟಕ ನಿವಾರಣೆಯಾಗುತ್ತದೆ.

ಮುನಿಗಳು ತಮ್ಮ ದಕ್ಷಿಣ ದಿಕ್ಕಿನ ಪ್ರಯಾಣವನ್ನು ಮುಂದುವರೆಸಿ, ದಕ್ಷಿಣ ಭಾರತದಲ್ಲಿ ಕವೇರ ಮುನಿಯ ಆಶ್ರಮವನ್ನು (ಈಗಿನ ಕೊಡಗು) ತಲುಪುತ್ತಾರೆ. ಕವೇರ ಮುನಿ ಹಾಗೂ ಲೋಪಮುದ್ರಾ ದಂಪತಿಗಳ ಸುಪುತ್ರಿಯಾದ ಕಾವೇರಿಯನ್ನು ತಮಗೆ ಧಾರೆ ಎರೆದು ಕೊಡಬೇಕೆಂದು ಭಿನ್ನವಿಸಿಕೊಳ್ಳುತ್ತಾರೆ. ಆಗ ಕಾವೇರಿಯು ತನ್ನನ್ನು ವಿವಾಹವಾಗಬೇಕಿದ್ದಲ್ಲಿ ಯಾವಾಗಲೂ ತನ್ನನ್ನು ದೀರ್ಘಕಾಲ ಅಗಲಿ ಇರಬಾರದು ಎಂದೂ, ಹಾಗೇನಾದರೂ ತನ್ನನ್ನು ಅಗಲಿ ದೀರ್ಘ ಸಮಯ ಬಿಟ್ಟು ಹೋದರೆ ತಾನು ಅವರ ಸತಿಯಾಗಿ ಮುಂದುವರೆಯುವುದಿಲ್ಲ ಎಂಬ ನಿಬಂಧನೆಯನ್ನು ಹಾಕುತ್ತಾಳೆ. ಇದನ್ನು ಒಪ್ಪಿದ ಅಗಸ್ತ್ಯ ಮುನಿಗಳು ಕಾವೇರಿಯನ್ನು ವಿವಾಹವಾಗಿ ಕವೇರ ಮುನಿಯ ಆಶ್ರಮದಲ್ಲಿ ಸುಖ ಸಂತೋಷಗಳಿಂದ ವಾಸವಿರುತ್ತಾರೆ. ಅವರ ದೈವಿಕ ಅನುಷ್ಠಾನ, ತಪಸ್ಸುಗಳು ಸಾಂಗವಾಗಿ ನೆರವೇರುತ್ತಿರುತ್ತದೆ. ಮುಂದೆ ಇದೇ ಅಗಸ್ತ್ಯ ಋಷಿ ಶ್ರೀರಾಮಚಂದ್ರನಿಗೆ ರಾವಣನ ಸಂಹಾರದ ರಹಸ್ಯವನ್ನು ತಿಳಿಸಿ 'ಆದಿತ್ಯ ಹೃದಯ' ಸ್ತೋತ್ರವನ್ನು ಬೋಧಿಸಿದ್ದು.

ಆದರೆ, ಒಮ್ಮೆ ದೈವ ಸಂಕಲ್ಪದಂತೆ ಆಧ್ಯಾತ್ಮ ಪ್ರವಚನ ಮಾಡಲೋಸುಗ ಅಗಸ್ತ್ಯರಿಗೆ ಕಾವೇರಿಯಿಂದ ದೂರ ಇರಬೇಕಾದ ಪ್ರಸಂಗ ಬರುತ್ತದೆ. ಆಗ ವಿವಾಹ ಪೂರ್ವವಾಗಿದ್ದು ನಿಬಂಧನೆಯಂತೆ ಕಾವೇರಿಯು ವಿವಾಹ ಬಂಧನವನ್ನು ತ್ಯಜಿಸಿ, ತಾನು ಮುಕ್ತಳಾಗಿ



ಅಗಸ್ತ್ಯರು ಪ್ರತಿನಿತ್ಯ ಸ್ನಾನ ಮಾಡುತ್ತಿದ್ದ ನೀರಿನ ಹೊಂಡಕ್ಕೆ ಹಾರಿ ಅಂದಿನಿಂದಲೂ ದಕ್ಷಿಣ ಗಂಗೆಯಾಗಿ ಪ್ರವಹಿಸುತ್ತಿದ್ದಾಳೆ. ಅದೇ ಇಂದು ಕೊಡಗಿನ ತಲಕಾವೇರಿ ಎಂದು ಗುರುತಿಸಲ್ಪಟ್ಟಿರುವ ಬ್ರಹ್ಮಗಿರಿ ಬೆಟ್ಟ, ಈ ಕಾವೇರಿ ನದಿಯು ದಕ್ಷಿಣ ಕರ್ನಾಟಕ ಹಾಗೂ ತಮಿಳುನಾಡು ಜನರ ಜೀವನದಿ, ಭಾಗ್ಯವಿಧಾತೆ ಎನಿಸಿದ್ದಾಳೆ.

ಸಮುದ್ರ ಮಟ್ಟದಿಂದ 5000 ಅಡಿ ಎತ್ತರದಲ್ಲಿ ಉಗಮವಾಗುವ ಕಾವೇರಿ 770 ಕಿ.ಮೀ. ಪಯಣಿಸಿ ತಮಿಳುನಾಡಿನ ಪೂಂಪುಹಾರ್ ಎಂಬಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇಂತಹ ಪವಿತ್ರ ನದಿ ಕಾವೇರಿಗೆ ಸಂಬಂಧಪಟ್ಟಂತೆ ಅನೇಕ ದೈವೀ ಕಥೆಗಳಿವೆ. ಈ ದೀರ್ಘ ಪ್ರಯಾಣದ ಉದ್ದಕ್ಕೂ ಅನೇಕ ಪುಣ್ಯಕ್ಷೇತ್ರಗಳು ಒಳಗೊಂಡಿವೆ. ಅವುಗಳಲ್ಲಿ ಮುಖ್ಯವಾದದ್ದು ಶ್ರೀರಂಗಪಟ್ಟಣದ ಶ್ರೀರಂಗನಾಥ ಸ್ವಾಮಿಯ ಸನ್ನಿಧಿ, ಇದು ಆದಿರಂಗ, ಇಲ್ಲಿ ಶ್ರೀ ಮಹಾವಿಷ್ಣುವು ಸಪ್ತ ಹೆಡೆಗಳುಳ್ಳ ಶೇಷನಾಗನ ಮೇಲೆ ಶೇಷಶಾಯಿಯಾಗಿ ಮಲಗಿದ್ದಾನೆ. ಇದು ಮೊದಲನೆ ದ್ವೀಪ. ಎರಡನೇ ದ್ವೀಪ ಶಿವನಸಮುದ್ರದ ಹತ್ತಿರ ಗಗನಚುಕ್ಕಿ, ಭರಚುಕ್ಕಿ ಎಂಬಲ್ಲಿ ಮತ್ತೆ ಶೇಷಶಾಯಿಯಾಗಿ ಮಧ್ಯರಂಗ ಎಂದು ಕರೆಸಿಕೊಳ್ಳುತ್ತಾನೆ ಮತ್ತೊಂದು ದ್ವೀಪ ತಮಿಳುನಾಡಿನ ಶ್ರೀರಂಗಂ ಎಂಬಲ್ಲಿ ನಿರ್ಮಾಣವಾಗುತ್ತದೆ. ಇಲ್ಲಿಯೂ ಜಗನ್ನಿಯಾಮಕನಾದ, ದಶಾವತಾರಿ ಶ್ರೀವಿಷ್ಣುವು ಶೇಷಶಾಯಿಯಾಗಿ ಶ್ರೀರಂಗನಾಥ ಎಂದು ಯುಗಯುಗಾಂತರಗಳಿಂದ ಪೂಜಿಸಲ್ಪಡುತ್ತಿದ್ದಾನೆ. ಇದು ಅಂತ್ಯರಂಗ, ದಕ್ಷಿಣ ಭಾರತದ ಈ ಮಹಾನ್ ಜೀವದಾಯಿನಿ ನದಿ ಕಾವೇರಿ ಜನ, ಜಾನುವಾರು, ಜಲಚರ, ಅರಣ್ಯ, ಪಕ್ಷಿ ಸಂಕುಲವನ್ನು ಪೊರೆವ ತಾಯಿ ಎನಿಸಿ ಪೂಂಪುಹಾರ ಎಂಬಲ್ಲಿ ಸಮುದ್ರದಲ್ಲಿ ಅನವಾಗುತ್ತಾಳೆ.

ಒಂದು ಪೌರಾಣಿಕ ಗಾಥೆಯ ಅನುಸಾರ ಭಾರತದ ಪರಮೋಚ್ಚ ಪುಣ್ಯಕ್ಷೇತ್ರ ಕಾಶಿ ವಿಶ್ವೇಶ್ವರನ ಪಾದ ಕಮಲವನ್ನು ತೊಳೆಯುವ ಪಾವನ ಗಂಗೆಯು ವರ್ಷಕ್ಕೊಮ್ಮೆ ತುಲಾ ಸಂಕ್ರಮಣದಂದು ಗುಪ್ತಗಾಮಿನಿಯಾಗಿ ಭೂತಳದಲ್ಲೆ ಹರಿದು ತಲಕಾವೇರಿಗೆ ಬಂದು ಕಾವೇರಿಯನ್ನು ಸೇರುತ್ತಾಳೆ ಎಂಬ ಪ್ರತೀತಿ ಇದೆ. ಆಗ ಕಾವೇರಿ ನದಿಯು ಮುಷ್ಕರವೆನಿಸುತ್ತದೆ. ಇದೇ ಸಮಯಕ್ಕೆ ಘಟಿಸುವ 'ಕಾವೇರಿ ಉದ್ಭವ'ವು ಪ್ರಕೃತಿಯ ನಿಗೂಢ ಪವಾಡಕ್ಕೆ ಸಾಕ್ಷಿಯಾಗಿದೆ. ಈ ಅದ್ಭುತ ದೈವಶಕ್ತಿಗೆ ವಿಜ್ಞಾನದಲ್ಲಿ ಯಾವ ಉತ್ತರವೂ ಇಲ್ಲ.

ತುಲಾ ಸಂಕ್ರಮಣದ ಪರ್ವಕಾಲದಲ್ಲಿ ಕಾವೇರಿ ಸ್ನಾನವು ಅನಂತ ಪುಣ್ಯಫಲವನ್ನು ಕೊಡುತ್ತದೆಂಬ ನಂಬಿಕೆ ಇದೆ. ಅನೇಕ ಶ್ರದ್ಧಾಳುಗಳು ಈ ಪರ್ವಕಾಲಕ್ಕಾಗಿ ಕಾದಿದ್ದು ತಲಕಾವೇರಿ, ಭಾಗಮಂಡಲ, ಇದು ಶ್ರೀ ಭಗಂಡ ಮುನಿ ತಪಸ್ಸು ಮಾಡಿದ ಪುಣ್ಯಕ್ಷೇತ್ರ, ಈಗಿನ ಭಾಗಮಂಡಲ. ತಲಕಾವೇರಿಯಲ್ಲಿ ಉದ್ಭವವಾಗುವ ಕಾವೇರಿ ಅದೃಶರೂಪದಿಂದ ಹರಿದು ಬಂದು ಭಗಂಡೇಶ್ವರ ಪುಣ್ಯಕ್ಷೇತ್ರದಲ್ಲಿ ಮತ್ತೆ ಪ್ರಕಟಗೊಳ್ಳುತ್ತಾಳೆ. ಇಲ್ಲಿ ಕರಾವಳಿ ಮಾದರಿಯಲ್ಲಿ ಕಟ್ಟದ ಶ್ರೀಶಿವನ ಅತ್ಯಪೂರ್ವ ದೇವಸ್ಥಾನವಿದೆ.

ಕಲಿ ಕಲ್ಮಷನಾಶಿನಿ ಎಂದು ಕರೆಸಿಕೊಳ್ಳುವ ಕಾವೇರಿ, ಕರ್ನಾಟಕ–ತಮಿಳುನಾಡು ರಾಜ್ಯಗಳಲ್ಲಿ ಪ್ರವಹಿಸುವ ಉದ್ದಕ್ಕೂ ಅನೇಕ ಪುಣ್ಯಕ್ಷೇತ್ರಗಳನ್ನು ದಾಟಿ ಹೋಗುತ್ತದೆ. ಶ್ರೀರಂಗಪಟ್ಟಣ, ನಿಮಿಷಾಂಬ, ಗರ್ಗೇಶ್ವರಿ, ತಿರುಮಕೂಡಲು ನರಸೀಪುರ, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ ಇದೆ. ಶಿವನಸಮುದ್ರ, ತಲಕಾಡು, ಶ್ರೀರಂಗಂ, ಕುಂಭಕೋಣಂ, ತಂಜಾವೂರು, ಭವಾನಿ, ಕಾವೇರಿ ಪುಷ್ಕರಂ ಇತ್ಯಾದಿ ಅನೇಕ ಪುಣ್ಯಕ್ಷೇತ್ರಗಳು ಕಾವೇರಿ ತಟದಲ್ಲವೆ. ಕಾವೇರಿಯ ಉಪನದಿಗಳಾದ ಲಕ್ಷ್ಮಣ ತೀರ್ಥ, ಹೇಮಾವತಿ, ಲೋಕಪಾವನಿ, ಅರ್ಕಾವತಿ, ಶಿಂಷಾ, ಸುವರ್ಣಾವತಿ, ಹೊನ್ನು ಹೊಳೆ, ಭವಾನಿ, ನೊಯ್ಯಲ್ ಮತ್ತು ಅಮರಾವತಿ ನದಿಗಳು ಕಾವೇರಿಯ ಒಡಲನ್ನು ಸೇರುತ್ತವೆ.

1785–1790ರವರೆಗೆ ಆಳಿದ ಟಿಪ್ಪು ಸುಲ್ತಾನನು ಈ ಪ್ರದೇಶವನ್ನು ಅಫೂಲಾಬಾದ್ ಎಂದು ನಾಮಕರಣ ಮಾಡಿದ್ದನು. ಅವನ ಆಡಳಿತದಲ್ಲಿ ಶ್ರೀಭಗಂಡೇಶ್ವರ ದೇವಾಲಯವನ್ನು ಕೆಡವಿ ಹಾಕಿದನೆಂದು ಹೇಳಲಾಗುತ್ತದೆ. ನಂತರ 1790ರಲ್ಲಿ ರಾಜ್ಯಭಾರ ವಹಿಸಿಕೊಂಡ ದೊರೆ ಶ್ರೀ ವೀರ ರಾಜೇಂದ್ರನ ಆಳ್ವಿಕೆಯಲ್ಲಿ ಸ್ವತಂತ್ರ ಕೊಡಗು ಜನ್ಮ ತಾಳಿತು. ಈ ರಾಜನು ಭಗಂಡೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಮಾಡಿದನೆಂದು ಇತಿಹಾಸದಿಂದ ತಿಳಿಯುತ್ತದೆ.

ಇದೇ ಅ.17ರಂದು ತುಲಾ ಸಂಕ್ರಮಣವಿದೆ. ಇದೇ ದಿನ ರವಿಯು ಕನ್ಯಾರಾಶಿಯಿಂದ ತುಲಾ ರಾಶಿಗೆ ಪ್ರವೇಶ ಮಾಡುತ್ತಾನೆ. ಇದರ ಪರಿಣಾಮ ತಮಿಳುನಾಡಿನ ತಿರುನೆಲ್‌ವೇಲಿ ಜಿಲ್ಲೆಯ ಅಂಬುಸಮುದ್ರಂ ತಾಲೂಕಿನ ಪಶ್ಚಿಮಘಟ್ಟದ ಪ್ರದೇಶದಲ್ಲಿ ಹುಟ್ಟುವ ತಾಮ್ರಪರ್ಣಿ ನದಿಯು ಮುಷ್ಕರವೆನಿಸುತ್ತದೆ. ಹಿಂದುಗಳಿಗೆ ಪುಷ್ಕರ ಸ್ನಾನ ಪುಣ್ಯಪ್ರದವೆನಿಸಿದೆ.

ಸಂಕ್ರಮಣದ ದಿನದಿಂದ ಆರಂಭಗೊಂಡು ದಿನ ತಾತ್ರಿಪರ್ಣಿ ನದಿ ಸ್ನಾನವು ಮುಷ್ಕರಸ್ನಾನ ಎನಿಸುತ್ತದೆ ಇದು ಹಿಂದು ಶ್ರದ್ಧಾಳುಗಳಿಗೆ ನದಿಸ್ನಾನ, ಜಪ, ತಪ, ದಾನ, ಅನುಷ್ಠಾನಗಳನ್ನು ಆಚರಿಸಲು ಪವಿತ್ರ ಸಮಯ. ತುಲಾ ಸಂಕ್ರಮಣದಂದು ತಲಕಾವೇರಿ ಆದಿಯಾಗಿ ಕಾವೇರಿ ಪ್ರವಹಿಸುವ ಪರ್ಯಂತ ಸಂಕಲ್ಪ ಪೂರ್ವಕವಾಗಿ ಎಲ್ಲ ಸ್ನಾನ ಮಾಡಿದರೂ ಪುಣ್ಯಪ್ರದವೇ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರೈತರ ಬಗ್ಗೆ ಕೀಳರಿಮೆ ಇರುವ ಕೃಷ್ಣ ಭೈರೇಗೌಡ ಐದು ವರ್ಷ ಕೃಷಿ ಸಚಿವರಾಗಿದ್ದದ್ದು ಈ ರಾಜ್ಯದ ದೌರ್ಭಾಗ್ಯ

ವಿಪಕ್ಷ ನಾಯಕ ಆರ್ ಅಶೋಕ್ ತಿರುಗೇಟು



ಬೆಂಗಳೂರು, ಅ.15– ರೈತರ ಬಗ್ಗೆ ಕೀಳರಿಮೆ ಇರುವ ಕೃಷ್ಣ ಭೈರೇಗೌಡರು ಐದು ವರ್ಷಗಳ ಕಾಲ ಕೃಷಿ ಸಚಿವರಾಗಿದ್ದದ್ದು ಈ ರಾಜ್ಯದ ದೌರ್ಭಾಗ್ಯ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ತಿರುಗೇಟು ನೀಡಿದ್ದಾರೆ.

ತಮ್ಮ ಬಗ್ಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ನೀಡಿದ್ದ ಹೇಳಿಕೆಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ತಿರುಗೇಟು ನೀಡಿರುವ ಅವರು, ನನ್ನನ್ನು ನಿಂದಿಸುವ ಭರದಲ್ಲಿ 'ಕಡಲೆಕಾಯಿ ಬೆಳೆಯುವ ಸಾಮಾನ್ಯ ರೈತನಿಗೆ ಇರುವಷ್ಟು ಕನಿಷ್ಠ ಜ್ಞಾನ' ಎಂದು ರೈತರನ್ನು ಕೃಷ್ಣ ಭೈರೇಗೌಡರು ಹೀಯಾಳಿಸಿದ್ದಾರೆ. ಎಲ್ಲರೂ ಅವರಂತೆ ವಿದೇಶಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಿಕೊಂಡು ಬರುವಷ್ಟು ಅನುಕೂಲ ಇರುವುದಿಲ್ಲ. ರಾಜಕಾರಣದಲ್ಲಿ ಕುಟುಂಬದ ಹಿನ್ನೆಲೆ ಇಲ್ಲದಂತಹ ನಮ್ಮಂತಹ ಸಾಮಾನ್ಯರೂ ಇದ್ದೀವಿ. ರೈತರ ಬಗ್ಗೆ ಇಂತಹ ಕೀಳರಿಮೆ ಇರುವ ತಮ್ಮಂತಹವರು ಐದು ವರ್ಷಗಳ ಕಾಲ ರಾಜ್ಯದ ಕೃಷಿ ಸಚಿವರಾಗಿದ್ದಿರಲ್ಲ, ಅದೇ ನಮ್ಮ ರಾಜ್ಯದ ದೌರ್ಭಾಗ್ಯ ಎಂದು ಅಶೋಕ್ ಹೇಳಿದ್ದಾರೆ.

ಜಿಎಸ್‌ಟಿ ಸಭೆಯಲ್ಲಿ ತೆರಿಗೆ ಹಂಚಿಕೆ ಬಗ್ಗೆ ಅಧಿಕೃತವಾಗಿ ಚರ್ಚೆ ನಡೆಯುವುದಿಲ್ಲ ಎಂಬ ಅರಿವು ನನಗೂ ಇದೆ. ಆದರೆ ಜಿಎಸ್‌ಟಿ ಸಭೆಯಲ್ಲಿ ಕೇಂದ್ರ ಹಣಕಾಸು ಸಚಿವರು, ರಾಜ್ಯಗಳ ಹಣಕಾಸು ಸಚಿವರು ಅಥವಾ ಇನ್ಯಾರಾದರೂ ಪ್ರತಿನಿಧಿ ಸಚಿವರು ಬಂದಿರುತ್ತಾರೆ ಅಲ್ಲವೇ? ಇಂತಹ ವೇದಿಕೆಯಲ್ಲಿ ಅನೌಪಚಾರಿಕವಾಗಿ ತೆರಿಗೆ ಹಂಚಿಕೆ ಬಗ್ಗೆ ಚರ್ಚಿಸಿ ಒಂದು ಒಮ್ಮತ ಸೃಷ್ಟಿಸುವ ಪ್ರಯತ್ನ ಮಾಡಬಹುದಿತ್ತಲ್ಲವೇ? ನನ್ನ ಮಾತಿನ ಅರ್ಥ ಇದಾಗಿತ್ತು ಎಂದು ಅವರು ತಿಳಿಸಿದ್ದಾರೆ.


ಚುನಾವಣೆ ಬಂದರೆ ಸಾಕು, ಸರ್ಕಾರಕ್ಕೆ ಒಂಚೂರು ಮುಜುಗರ ಆದರೆ ಸಾಕು, ಜನರ ಗಮನ ಬೇರೆಡೆ ಸೆಳೆಯಲು 'ನನ್ನ ತೆರಿಗೆ ನನ್ನ ಹಕ್ಕು' ಅಂತ ನಾಟಕ ಶುರು ಮಾಡುತ್ತೀರಲ್ಲ, ಸಾಮಾಜಿಕ ಜಾಲತಾಣಗಳು ತೆರಿಗೆ ಹಂಚಿಕೆ ಬಗ್ಗೆ ಚರ್ಚೆ ಮಾಡಲು ವೇದಿಕೆಯೇ? ಈ ತಂತ್ರಗಾರಿಕೆ, ಟೂಲ್ ಕಿಟ್ ರಾಜಕಾರಣ ಜನ ಸಾಮಾನ್ಯರಿಗೆ ಅರ್ಥ ಆಗೋದಿಲ್ಲ ಅಂತ ಎಣಿಸಿದ್ದೀರಾ? ಎಂದು ಅವರು ಪ್ರಶ್ನಿಸಿದ್ದಾರೆ.

ಬಿಜೆಪಿ ಅವಧಿಯಲ್ಲಿ ಕೋಮು ದ್ವೇಷದ 182 ಪ್ರಕರಣ ಹಿಂದಕ್ಕೆ

ಬೆಂಗಳೂರು ಅ.15 (ಕೆಎಂಶಿ)–ಬಿಜೆಪಿ ಅಧಿಕಾರದ ಅವಧಿಯಲ್ಲಿ ಕೋಮುದ್ವೇಷಕ್ಕೆ ಸೇರಿದ 182 ಪ್ರಕರಣ ಸೇರಿದಂತೆ 385 ಮೊಕದ್ದಮೆಗಳನ್ನು ಹಿಂದಕ್ಕೆ ಪಡೆದಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನೆಲ–ಜಲ ಕನ್ನಡ ಮತ್ತು ರೈತರ ವಿಷಯಗಳಿಗಾಗಿ ಹೋರಾಟ ನಡೆಸಿದವರ ವಿರುದ್ಧ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು ಸಹಜ. ಅದೇ ರೀತಿ ನಮ್ಮ ಸರ್ಕಾರವು ಕಳೆದ ಸಂಪುಟ ಸಭೆಯಲ್ಲಿ ಕೆಲವು ಮೊಕದ್ದಮೆ ಹಿಂತೆಗೆದುಕೊಂಡಿದ್ದೇವೆ ಎಂದು ಸಮರ್ಥಿಸಿಕೊಂಡರು.

ಇತ್ತೀಚೆಗೆ ನಡೆದ ಸಚಿವ ಸಂಪುಟಸಭೆಯಲ್ಲಿ 43 ಕೇಸ್‌ಗಳನ್ನು ಹಿಂಪಡೆಯಲಾಗಿದೆ. ಶಾಶ್ವತ ನೀರಾವರಿಗಾಗಿ ಹೋರಾಟ ಮಾಡಿದವರ ಮೇಲಿನ ಪ್ರಕರಣಗಳನ್ನು ಡಾ.ಎಂ.ಸಿ.ಸುಧಾಕರ್ ಅವರ ಮನವಿ ಮೇರೆಗೆ ಹಿಂಪಡೆಯಲಾಗಿದೆ. ಸಂವಿಧಾನಕ್ಕೆ ಅಪಮಾನ ಮಾಡಿದವರ ವಿರುದ್ಧ ಹೋರಾಟ ಮಾಡಿದ ಎನ್.ಭಾಸ್ಕರ್, ಕರ್ವೆಯ ನಾರಾಯಣಗೌಡ, ಗಣರಾಜ್ಯ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಇಡದೇ ಇರುವ ಕಾರಣಕ್ಕೆ ನಡೆದ ಪ್ರತಿಭಟನೆ, ಪೇಸಿಎಂ ಅಭಿಯಾನದಲ್ಲಿ ಪೋಸ್ಟರ್ ಅಂಟಿಸಿದವರ ವಿರುದ್ಧ ಹೀಗೆ ಒಂದಷ್ಟು ಜನಪರ ಹೋರಾಟಗಳನ್ನು ನಡೆಸುವಾಗ ದಾಖಲಾದ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲಾಗಿದೆ.



ಇದರಲ್ಲಿ ಹಳೇ ಹುಬ್ಬಳ್ಳಿ ಪ್ರಕರಣವೂ ಒಂದು ಇದನ್ನೂ ಸಹ ನಾವು ವಾಪಸ್ ಪಡೆದಿದ್ದೇವೆ. ಬಿಜೆಪಿಯವರು ಸತ್ಯ ಹರಿಶ್ಚಂದ್ರರಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಅವರ ಅಧಿಕಾರವಧಿಯಲ್ಲಿ ಯಾವ, ಯಾವ ಪ್ರಕರಣಗಳನ್ನು ಹಿಂಪಡೆದಿದ್ದರು ಎನ್ನುವ ದೊಡ್ಡ ಪಟ್ಟಿಯೇ ಇದೆ. ಶ್ರೀರಾಮ ಸೇನೆ, ಭಜರಂಗದಳ, ಹಿಂದೂ ಜಾಗರ ವೇದಿಕೆ ಸದಸ್ಯರೇ ಇದರ ಲಾಭ ಪಡೆದಿದ್ದಾರೆ. 2018–20ರ ಸಾಲಿನಲ್ಲಿ 182 ಕೇಸ್‌ಗಳನ್ನು ಬಿಜೆಪಿ ಹಿಂದಕ್ಕೆ ಪಡೆದಿದೆ. ಪಿಎಫ್‌ಐ, ಎಸ್‌ಡಿಪಿಐ ಅವರ ಮೇಲಿದ್ದ ಕೇಸ್‌ಗಳನ್ನೂ ಹಿಂದಕ್ಕೆ ಪಡೆಯಲಾಗಿದೆ. ನಾನು ಗೃಹ ಸಚಿವ ಆಗಿದ್ದಾಗ ನಡೆದ ಪರೇಸ್ ಮೇಸ್ತಾ ಸಾವಿನ ಪ್ರಕರಣದಲ್ಲಿ ಬಿಜೆಪಿಯವರು ರಾಜಕೀಯ ಲಾಭಕ್ಕಾಗಿ ಏನೇನೋ ಮಾಡಿದರು. ನಂತರ ಎನ್‌ಐಎ ತನಿಖಾ ತಂಡ ಆತನ ಸಾವನ್ನು ಆಕಸ್ಮಿಕ ಎಂದು ಹೇಳಿತು. ಬಿಜೆಪಿಯವರು ಹೆಣ ಬಿದ್ದರೆ ಸಾಕು ರಣಹದ್ದುಗಳಂತೆ ಕಾಯುತ್ತಿರುತ್ತಾರೆ. ಬಿಜೆಪಿಯವರ ಹೆಣದ ಮೇಲಿನ ರಾಜಕೀಯದ ಬಗ್ಗೆ ಪುಸ್ತಕವಿದ್ದು ಅದನ್ನು ಮತ್ತೊಮ್ಮೆ ಮುದ್ರಿಸಲಾಗುವುದು. ಕ್ರಿಮಿನಲ್ ಪ್ರಕ್ರಿಯೆ ಸಂಹಿತೆ ಕಲಂ 321ರ ಅಡಿ ರಾಜ್ಯದ ಯಾವುದೇ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದರೂ ವಾಪಸ್ ಪಡೆಯುವ ಅಧಿಕಾರ ದೇಶದ ಎಲ್ಲಾ ರಾಜ್ಯ ಸರ್ಕಾರಗಳಿಗಿದೆ. ಗೃಹ ಇಲಾಖೆಗೆ ಕೇಸಿಗೆ ಸಂಬಂಧ ಪಟ್ಟವರು ವಾಪಸ್ ಪಡೆಯಬೇಕು ಎಂದು ಮನವಿ ಸಲ್ಲಿಸಿರುತ್ತಾರೆ. ಇದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅನೇಕ ಬಾರಿ ದುರುದ್ದೇಶಪೂರಿತವಾಗಿ ಕೇಸ್ ದಾಖಲಿಸಲಾಗಿರುತ್ತದೆ. ರೈತರ ಪರ, ಭಾಷೆ, ಜಲವಿವಾದ ಸೇರಿದಂತೆ ಅನೇಕ ಸಂಘಟನೆಗಳು ಹೋರಾಟ ನಡೆಸಿರುತ್ತವೆ. ಬಿಜೆಪಿಯಲ್ಲಿ ಸುಳ್ಳು ಹೇಳುವವರನ್ನೇ ವಕ್ತಾರನ್ನಾಗಿ ಮಾಡಿಕೊಂಡಿದ್ದಾರೆ. ಬಿಜೆಪಿಯವರ ಸುಳ್ಳುಗಳನ್ನೇ ಜನರು ನಂಬಬಾರದು ಎಂದು ಸತ್ಯವನ್ನು ತಿಳಿಸುವ ಕೆಲಸ ನಾವು ಮಾಡುತ್ತಿದ್ದೇವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಜಾತಿ ಪ್ರಮಾಣಪತ್ರ ಗೊಂದಲ ನಿವಾರಿಸಿ

ಸಿಎಂ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಅ.15ಕೆಎಂಶಿ)–ಜಾತಿ



ಪ್ರಮಾಣ ಪತ್ರದ ಬಗ್ಗೆ ಇರುವ ಗೊಂದಲವನ್ನು ನಿವಾರಿಸಿ, ಸೂಕ್ತ ಸುತ್ತೋಲೆ ಹೊರಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳಿಗೆ ಇಂದಿಲ್ಲಿ ಆದೇಶ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಪಂಗಡದ ಸಮುದಾಯಗಳ ಸಭೆ ನಡೆಸಲಾಗಿದ್ದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಅವ್ಯವಹಾರದ ಹಿನ್ನಲೆಯಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಅನುದಾನದ ಕೊರತೆಯಾಗಬಾರದೆಂದು ಕೋರುತ್ತಾ, ಕೆಲವರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆಯುತ್ತಿರುವುದರ ಬಗ್ಗೆಯೂ ಸಭೆಯ ಗಮನವನ್ನು ಸೆಳೆದಿರುವುದಾಗಿ ತಿಳಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಈ ವರ್ಷದಲ್ಲಿ ನಿಗದಿಪಡಿಸಲಾಗಿರುವ ಅನುದಾನವನ್ನು ಸಂಪೂರ್ಣವಾಗಿ ಒದಗಿಸಲಾಗುವುದು. ನಿಗಮದಲ್ಲಿ ಸುಮಾರು 89.63 ಕೋಟಿ ರೂ.ಗಳ ಮೊತ್ತ ಅವ್ಯವಹಾರವಾಗಿದ್ದು, ಇದರಲ್ಲಿ 5 ಕೋಟಿ ರೂ.ಗಳನ್ನು ವಾಪಸ್ಸು ಪಡೆಯಲಾಗಿದೆ. ಉಳಿದ 84.63 ಕೋಟಿ ರೂ.ಗಳಲ್ಲಿ 71.54 ಕೋಟಿ ರೂ.ಗಳನ್ನು ವಸೂಲು ಮಾಡಲಾಗಿದೆ. ಇನ್ನುಳಿದ ಸುಮಾರು 13 ಕೋಟಿಗಳ ಮೊತ್ತವನ್ನು ವಸೂಲು ಮಾಡಿಕೊಡುವುದಾಗಿ ಎಸ್‌ಐಟಿ ತಿಳಿಸಿದೆ. ಈ ರೀತಿ ಒಟ್ಟು ಅವ್ಯವಹಾರವಾಗಿದ್ದ ಪೂರ್ಣ ಮೊತ್ತವನ್ನೂ ಮರುಪಡೆಯಲಾಗುತ್ತಿದೆ. ಈ ಮಧ್ಯೆ, ಪ್ರಕರಣ ನ್ಯಾಯಾಲಯದಲ್ಲಿ, ಮುಂಬರುವ ತೀರ್ಪಿನಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ನಡೆಯುವ ಉಪಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ಪಕ್ಷ ಸಿದ್ಧವಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಚುನಾವಣೆಯನ್ನು ಸಮರ್ಥವಾಗಿ ಎದುರಿಸಲಿದ್ದೇವೆ ಎಂದರು.

ಸ್ನೇಹಮಯಿ ಕೃಷ್ಣ ವಿರುದ್ಧ ಇಂದು ಲೋಕಾಯುಕ್ತಕ್ಕೆ ಕಾಂಗ್ರೆಸ್ ದೂರು



ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಮೈಸೂರು, ಅ.15(ಬಿಎಲ್‌ಯು)– ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ನಾಳೆ ಲೋಕಾಯುಕ್ತರಿಗೆ ದೂರು ಸಲ್ಲಿಸುತ್ತೇವೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ತಿಳಿಸಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ದಿನ ಲೋಕಾಯುಕ್ತ ಕಚೇರಿಗೆ ಭೇಟಿ ನೀಡುತ್ತಿರುವ ಸ್ನೇಹಮಯಿ ಕೃಷ್ಣ ತನಿಖಾಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿದಿನ ಸ್ನೇಹಮಯಿ ಕೃಷ್ಣನಿಂದ ದೂರ ಸ್ವೀಕರಿಸುವ ಲೋಕಾಯುಕ್ತ ಅಧಿಕಾರಿಗಳೇನಾದರೂ ಬ್ಲ್ಯಾಕ್‌ಮೇಲ್‌ಗೆ ಒಳಗಾಗಿದ್ದಾರೆಯೇ ಎಂದು ಪ್ರಶ್ನಿಸಿದ ಲಕ್ಷ್ಮಣ, ಇದಿಷ್ಟೇ ಅಲ್ಲದೆ ಹಲವು ದಾಖಲಾತಿಗಳನ್ನು ಮುಡಾ ಕಚೇರಿಗೆ ತೆಗೆದುಕೊಂಡು ಹೋಗಿ ಸೇರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಹುಬ್ಬಳ್ಳಿ ಗಲಭೆ ಪ್ರಕರಣವನ್ನು ವಾಪಸ್ ಪಡೆದ ಸರ್ಕಾರದ ಕ್ರಮ ಸಮರ್ಥಿಸಿಕೊಂಡ ಲಕ್ಷ್ಮಣ, ಕಾಂಗ್ರೆಸ್ ಸರ್ಕಾರದ ಅವಧಿಗೆ 9 ಪ್ರಕರಣ ಹಿಂತೆಗೆದುಕೊಂಡಿದ್ದು, ಉಳಿದ 34 ಪ್ರಕರಣ ಬಿಜೆಪಿ ಸರ್ಕಾರದ ಅವಧಿಯ ಪ್ರಕರಣಗಳಾಗಿವೆ. ಆರ್.ಅಶೋಕ್, ಸಿ.ಟಿ.ರವಿ, ಸೋಮಣ್ಣ ಸೇರಿದಂತೆ ಇತರರು ಶಿಫಾರಸು ಮಾಡಿದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ. ಸರ್ಕಾರ ಈ ಸಂಬಂಧ ಏನೇ ತೀರ್ಮಾನ ಮಾಡಿದರೂ ಅಂತಿಮವಾಗಿ ನ್ಯಾಯಾಲಯ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದರು.

ಹುಬ್ಬಳ್ಳಿ ಗಲಭೆ ಪ್ರಕರಣ ವಾಪಾಸ್ ತೆಗೆದುಕೊಂಡಿರುವವರಲ್ಲಿ ಮುಸ್ಲಿಂರ ಹೆಸರು ಇರುವ ಕಾರಣ ಬಿಜೆಪಿಯವರು ಇದನ್ನು ದೊಡ್ಡ ವಿವಾದವಾಗಿ ಮಾಡುತ್ತಿದ್ದಾರೆ. ಹಾಗಾದರೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ 86 ಪ್ರಕರಣ ವಾಪಸ್ ಪಡೆದಿದ್ದು, ಯಾವ ಆಧಾರದ ಮೇಲೆ ಹಿಂತೆಗೆದುಕೊಂಡರು ಎಂದು ಎಂ.ಲಕ್ಷ್ಮಣ್ ಪ್ರಶ್ನಿಸಿದರು.

ಮಹಾರಾಜರ ದತ್ತು ಪುತ್ರ ಯದುವೀರ್ ಅವರನ್ನು ಮೈಸೂರು ಹಾಗೂ ಕೊಡಗಿನ ಜನರು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸಿದ್ದರು. ಆದರೆ ಯದುವೀರ್ ಈ ತನಕ ಯಾವುದೇ ಅಧಿಕಾರಿಗಳ ಸಭೆ ನಡೆಸಿಲ್ಲ, ಕೆಡಿಪಿ ಸಭೆಗೆ ಕೂಡ ಗೈರು ಹಾಜರಾಗಿದ್ದರು. ಪುಸ್ತಕ ಬಿಡುಗಡೆ ಸೇರಿದಂತೆ ಇತರೆ ಸಭೆ ಸಮಾರಂಭಗಳಿಗೆ ಮಾತ್ರ ಯದುವೀರ್ ಸೀಮಿತರಾಗಿದ್ದಾರೆಯೇ ಹೊರತು ಯಾವುದೇ ಜನಪರ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಲ್ಲ ಎಂದು ಲಕ್ಷ್ಮಣ ಆರೋಪಿಸಿದರು.

ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಭಾಸ್ಕರ್, ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಲಯ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) 2024–2025ನೇ ಸಾಲಿನ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ.ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು https://shp.karnataka.gov.in/bcwd ವೆಬ್‌ಸೈಟ್ ಮೂಲಕ ಅ.30ರೊಳಗೆ ಅರ್ಜಿ ಸಲ್ಲಿಸಬಹುದು. ವಿವರಗಳಿಗಾಗಿ https://www.bcwd.karnataka.gov.in/ ನೋಡಬಹುದು. ಮಾಹಿತಿಗೆ ಸಹಾಯವಾಣಿ: 8050770004, 8050770005 ಅನ್ನು ಸಂಪರ್ಕಿಸಬಹುದು

ರೈತರಿಗೆ ಮೂರು ದಿನಗಳ ತರಬೇತಿ

ಮೈಸೂರು: ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಅ.23 ರಿಂದ 25ರವರೆಗೆ "ನೈಸರ್ಗಿಕ/ಸಾವಯವ ಕೃಷಿಯಲ್ಲಿ ಸಮಗ್ರ ಕೃಷಿ ಪದ್ಧತಿ" ಎಂಬ ವಿಷಯದ ಬಗ್ಗೆ ರೈತ/ ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ/ರೈತಮಹಿಳೆಯರಿಗೆ ಊಟ, ವಸತಿ ವ್ಯವಸ್ಥೆ ಒದಗಿಸಲಾಗುವುದು. ಆಸಕ್ತ ರೈತ/ರೈತಮಹಿಳೆಯರು ತಮ್ಮ ಹೆಸರನ್ನು ಈ ತರಬೇತಿ ಕೇಂದ್ರದ ಕೃಷಿ ಅಧಿಕಾರಿಯವರ ದೂ:ಸಂ: 8277933136ಗೆ ಕರೆಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸತಕ್ಕದ್ದು. ರೈತರು ತರಬೇತಿಗೆ ಬರುವಾಗ ಫ್ರೂಟ್ ಐಡಿ ನಂಬರ್, ರೇಷನ್ ಕಾರ್ಡ್, ಆಧಾರ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರುವುದು. ಮೈಸೂರು ಜಿಲ್ಲೆಯ 45 ರೈತ/ ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿ ಕೃಷಿ ತರಬೇತಿ ಕೇಂದ್ರದ ಕೃಷಿ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಸ್ಯಹಾರ ಬಳಸಿ, ಮಾಂಸಹಾರ ತ್ಯಜಿಸಿ



ವಿಶ್ವ ಆಹಾರ ದಿನದ ಅಂಗವಾಗಿ ಪುರಭವನದ ಮುಂಭಾಗ ಪೇಟಾ ಸಂಸ್ಥೆ ವತಿಯಿಂದ ಪ್ರದರ್ಶನದ ಮೂಲಕ ಅರಿವು ಮೂಡಿಸಿದರು.

ಮೈಸೂರು, ಅ.15(ಜಿಎ)– ಪೇಟಾ ಇಂಡಿಯಾವು ವಿಶ್ವ ಆಹಾರ ದಿನದ ಪೂರ್ವಭಾವಿಯಾಗಿ ಸಸ್ಯಹಾರಿ ಆಹಾರ ಸೇವನೆ ಕುರಿತು ಮಂಗಳವಾರ ಪುರಭವನದ ಮುಂಭಾಗ ಹಮ್ಮಿಕೊಂಡಿದ್ದ ಪ್ರದರ್ಶನವು ಜನರನ್ನು ಸೆಳೆಯಿತು. ಪೇಟಾದ ಭಿನ್ನ ಪ್ರಯತ್ನವು ಮೆಚ್ಚುಗೆಯೊಂದಿಗೆ ಅರಿವು ಮೂಡಿಸಿತು.

ರಕ್ತದ ಮಡುವಿನಲ್ಲಿದ್ದ ಯುವತಿಯೊಬ್ಬಳು ಅನ್ನದ ತಟ್ಟೆಯಲ್ಲಿ ಬಿದ್ದಿದ್ದಳು, ಅದರ ಸುತ್ತಲೂ ತರಕಾರಿ ಹಣ್ಣು, ಹಂಪಲು ಕಾಣಿಸುತ್ತಿತ್ತು. 'ಏನಾಗಿದೆಯಪ್ಪಾ' ಎಂದು ಸಾರ್ವಜನಿಕರು ಗುಂಪಾಗಿ ಬಂದು ಕುತೂಹಲದಿಂದ ಗಮನಿಸುತ್ತಿದ್ದರು. ಫುಟ್‌ಪಾತ್‌ನಲ್ಲೇ ಪ್ರದರ್ಶನ ಮಾಡಿದ್ದರಿಂದ ಅನೇಕರು ಓಡೋಡಿ ಬಂದರು.

ಜನರ ಗಮನ ಸೆಳೆದ ಸಸ್ಯಹಾರ ಪ್ರದರ್ಶನ

ಪೇಟಾ ಇಂಡಿಯಾದ ಸಂಯೋಜಕ ಅಥರ್ವ ದೇಶಮುಖ್ ಮಾತನಾಡಿ, ಸಸ್ಯ ಆಧಾರಿತ ಜೀವನ ಶೈಲಿಯನ್ನು ನಡೆಸಿ, ಮಾಂಸಾಹಾರವನ್ನು ತ್ಯಜಿಸಿ. ಚಿತ್ರ ಹಿಂಸೆಗೆ ಒಳಗಾದ ಮತ್ತು ಸಾಯಲು ಬಯಸದ ಪ್ರಾಣಿಯ ಶವವನ್ನು ತಿನ್ನುವುದೇ ಮಾಂಸಾಹಾರ. ಪ್ರಾಣಿಗಳನ್ನು ದುಃಖಕರ ಜೀವನ ಮತ್ತು ಭಯಾನಕ ಸಾವಿನಿಂದ ರಕ್ಷಿಸಲು ಆರೋಗ್ಯಕರ ಹಾಗೂ ರುಚಿಕರ ಸಸ್ಯಾಹಾರಿ ಆಹಾರ ಸೇವಿಸಿ ಎಂದರು.

2019ರಿಂದ 2021ರವರೆಗೆ ನಡೆಸಿದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ಕರ್ನಾಟಕದಲ್ಲಿ 15ರಿಂದ 49 ವರ್ಷ ವಯಸ್ಸಿನ ಶೇ.81ರಷ್ಟು ಜನರು ಮಾಂಸ ಸೇವಿಸುತ್ತಾರೆ ಎಂದು ತಿಳಿದು ಬಂದಿದೆ. ಸಸ್ಯಾಹಾರಿಗಳಾಗಿ ಬದಲಾಗುವ ಪ್ರತೀ ವ್ಯಕ್ತಿಯೂ ವರ್ಷಕ್ಕೆ ಸುಮಾರು 200 ಪ್ರಾಣಿಗಳ ಸಾವನ್ನು ಉಳಿಸುತ್ತಾನೆ. ಈ ಬಗೆಯ ಜಾಗತಿಕ ಬದಲಾವಣೆ ಅಗತ್ಯ ಎಂದು ವಿಶ್ವಸಂಸ್ಥೆಯೂ ತೀರ್ಮಾನಿಸಿದೆ ಎಂದು ತಿಳಿಸಿದರು.

ಅ.20, ಮೂರು ಕೃತಿಗಳ ಲೋಕಾರ್ಪಣೆ

ಮೈಸೂರು,ಅ.15–ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಮತ್ತು ವೈದ್ಯ ವಾರ್ತಾ ಪ್ರಕಾಶನ ಸಂಯುಕ್ತ ಆಶ್ರಯದಲ್ಲಿ ಅ.20ರಂದು ಬೆಳಗ್ಗೆ 10.45ಕ್ಕೆ ಮೈಸೂರಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಡಾ.ಅರಕಲಗೂಡು ನೀಲಕಂಠಮೂರ್ತಿ ಅವರ 'ಸಮಯದ ನೀರು ಮತ್ತೆ ಹರಿವ ಹೊತ್ತು', 'ಹೆಣ್ಣೊಬ್ಬಳು ಗರ್ಭಕೋಶಗಳೆರಡು' ಮತ್ತು 'ಮುಖದಿಂದೆದ್ದು ಎತ್ತಲೋ ನಡೆದ ಕಣ್ಣು' ಕೃತಿಗಳ ಲೋಕಾರ್ಪಣೆ ಸಮಾರಂಭವನ್ನು ಏರ್ಪಡಿಸಲಾಗಿದೆ.

ಎಂಎಲ್‌ಸಿ ಡಾ.ಡಿ.ತಿಮ್ಮಯ ಕಾರ್ಯಕ್ರಮ ಉದ್ಘಾಟಿಸುವರು. ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್ ಕೃತಿಗಳನ್ನು ಲೋಕಾರ್ಪಣೆ ಮಾಡುವರು. ಕೃತಿಗಳ ಕುರಿತು ಮೈಸೂರು ಮೆಡಿಕಲ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ.ಜೆ.ಪ್ರಸನ್ನಕುಮಾರ್ ಮತ್ತು ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಮಾತನಾಡುವರು.

ವೈದ್ಯವಾರ್ತಾ ಪ್ರಕಾಶನದ ನಿರ್ದೇಶಕ ಲಿಂಗರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲೇಖಕ ಡಾ.ಅರಕಲಗೂಡು ನೀಲಕಂಠಮೂರ್ತಿ ಪಾಲ್ಗೊಳ್ಳುವರು.

ಅ.20ರಂದು ವಧು–ವರರ ಸಮಾವೇಶ

ಮೈಸೂರು,ಅ.15–ಜೆಎಸ್‌ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಅ.20ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಸಮಾವೇಶವನ್ನು ಏರ್ಪಡಿಸಲಾಗಿದೆ. ಜೆಎಸ್‌ಎಸ್ ವಿವಾಹ ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶವಿರುತ್ತದೆ. ಈವರೆಗೆ ನೋಂದಾಯಿಸಿಕೊಂಡಿಲ್ಲದವರು ವಧು–ವರರ ಸಮಾವೇಶದ ದಿನದಂದು ಕೂಡ ನೋಂದಾಯಿಸಿಕೊಳ್ಳಬಹುದು. ಆಸಕ್ತರು ಸಮಾವೇಶದಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿರುವ ವಿವಾಹ ವೇದಿಕೆಯ ಕಚೇರಿಯಲ್ಲಿ ಅಥವಾ ದೂರವಾಣಿ ಸಂಖ್ಯೆ ದೂ. 0821–2430322, ಮೊ. 8310121328 ಸಂಪರ್ಕಿಸಬಹುದು.

ಕೆ.ಕೃಷ್ಣವೇಣಿಗೆ ತ.ನಾಡು ವಿವಿಯಿಂದ ಪಿಹೆಚ್‌ಡಿ



ತಮಿಳುನಾಡು ರಾಜ್ಯಪಾಲರಿಂದ ಕೆ.ಕೃಷ್ಣವೇಣಿ ಪಿಹೆಚ್‌ಡಿ ಪದವಿ ಪ್ರಮಾಣ ಪತ್ರ ಸ್ವೀಕರಿಸುತ್ತಿರುವುದು.

ಮೈಸೂರು,ಅ.15(ಪಿಎಂ)– ಸ್ಪೋರ್ಟ್ಸ್ ಸೈಕಾಲಜಿ ಕುರಿತು ಮೈಸೂರಿನ ಕೆಆರ್ ಮೊಹಲ್ಲಾದ ದೇವಾಂಬ ಅಗ್ರಹಾರ ನಿವಾಸಿ ಕೆ.ಕೃಷ್ಣವೇಣಿ ಅವರು ಮಂಡಿಸಿದ ಪ್ರಬಂಧಕ್ಕೆ ತಮಿಳುನಾಡಿನ ಚೆನ್ನೈನಲ್ಲಿರುವ ತಮಿಳುನಾಡು ಫಿಸಿಕಲ್ ಎಜುಕೇಷನ್ ಅಂಡ್ ಸ್ಪೋರ್ಟ್ಸ್ ಯೂನಿವರ್ಸಿಟಿ, ಪಿಹೆಚ್‌ಡಿ ಪದವಿ ನೀಡಿದೆ.

ಕೆ.ಕೃಷ್ಣವೇಣಿ ಅವರು ಸ್ವಾತಂತ್ರ್ಯ ಹೋರಾಟಗಾರ ಎಂ.ಕೆ.ಗೋಪಾಲ ಅಯ್ಯಂಗಾರ್ ಅವರ ಪುತ್ರಿ. ಸದರಿ ವಿಶ್ವವಿದ್ಯಾನಿಲಯದ ಕ್ರೀಡಾ ಮನೋವಿಜ್ಞಾನ ವಿಭಾಗದ ಡಾ.ಶಾಹೀನ್ ಅಹಮ್ಮದ್ ಅವರ ಮಾರ್ಗದರ್ಶನದಲ್ಲಿ 'ಐಸೋಲೇಟೆಡ್ ಅಂಡ್ ಕಂಬೈನ್ಡ್ ಎಫೆಕ್ಟ್ಸ್ ಆಫ್ ಟ್ರಾಡಿಷನಲ್ ಗೇಮ್ಸ್ ಅಂಡ್ ಸೋಶಿಯಲ್ ಸ್ಕಿಲ್ಸ್ ಟ್ರೇನಿಂಗ್ ಆನ್ ಸೆಲ್ಫ್ ಡೆವಲಪ್‌ಮೆಂಟ್ ಅಮೋಂಗ್ ಅಂಡರ್‌ಪ್ರಿವಿಲೈಜ್ಡ್ ಸ್ಕೂಲ್ ಗರ್ಲ್ ಸ್ಟೂಡೆಂಟ್ಸ್ ಇನ್ ಚೆನ್ನೈ' ಕುರಿತು ಕೃಷ್ಣವೇಣಿ ಪ್ರಬಂಧ ಮಂಡಿಸಿದ್ದರು.

ಇತ್ತೀಚೆಗೆ ಸದರಿ ವಿವಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಕೆ.ಕೃಷ್ಣವೇಣಿ ಅವರಿಗೆ ತಮಿಳುನಾಡಿನ ಉಪಮುಖ್ಯಮಂತ್ರಿ ಉದಯ ನಿಧಿ ಸ್ಟಾಲಿನ್ ಅವರ ಉಪಸ್ಥಿತಿಯಲ್ಲಿ ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅವರು ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ದಸರಾ ವಸ್ತುಪ್ರದರ್ಶನದಲ್ಲಿ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ, ಬಟ್ಟೆ ಬ್ಯಾಗ್ ವಿತರಣೆ

ಮೈಸೂರು, ಅ.15(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಬಟ್ಟೆ ಬ್ಯಾಗ್ ವಿತರಿಸಿ, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ಅರಿವು ಮೂಡಿಸಲಾಯಿತು.

'ಮೈಸೂರು ಮಿತ್ರ'ನ ಅ.14ರ ಸಂಚಿಕೆಯಲ್ಲಿ 'ದಸರಾ ವಸ್ತುಪ್ರದರ್ಶನದಲ್ಲೂ ಜನಸ್ತೋಮ' ಶೀರ್ಷಿಕೆಯಡಿ ಪ್ರಕಟವಾದ ಸುದ್ದಿಯಲ್ಲಿ ದಸರಾ ವಸ್ತುಪ್ರದರ್ಶನದಲ್ಲಿ ಪ್ಲಾಸ್ಟಿಕ್ ಬಳಕೆ ಕುರಿತು ಸವಿವರವಾಗಿ ಪ್ರಕಟಿಸಿದ ಹಿನ್ನಲೆಯಲ್ಲಿ ಎಚ್ಚೆತ್ತ ವಸ್ತುಪ್ರದರ್ಶನ ಪ್ರಾಧಿಕಾರದ ಅಧಿಕಾರಿಗಳು, ಸ್ವಯಂಸೇವಕರ ಸಹಕಾರದೊಂದಿಗೆ ಬಟ್ಟೆ ಬ್ಯಾಗ್‌ಗಳನ್ನು ವಿತರಿಸಿ, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ತಿಳಿ ಹೇಳಿದರು.



ದಸರಾ ವಸ್ತುಪ್ರದರ್ಶನದಲ್ಲಿ ಪ್ರವಾಸಿಗರಿಗೆ ಬಟ್ಟೆ ಬ್ಯಾಗ್ ವಿತರಿಸಿ, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ಅರಿವು ಮೂಡಿಸಲಾಯಿತು.

ವಸ್ತುಪ್ರದರ್ಶನ ಆವರಣದ ಮುಖ್ಯ ಗೇಟ್ ಸೇರಿದಂತೆ ಪ್ರಮುಖ ನಾಲ್ಕೈದು ಸ್ಥಳಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳನ್ನು ಹಿಡಿದಿರುವ ಪ್ರವಾಸಿಗರಿಂದ ಪ್ಲಾಸ್ಟಿಕ್ ಕವರ್‌ಗಳನ್ನು ವಶ ಪಡೆದು, ಅವರಿಗೆ ಬಟ್ಟೆ ಬ್ಯಾಗ್ ವಿತರಿಸಲಾಯಿತು.

ಪ್ರವಾಸಿಗರ ದಂಡು...

ದಸರಾ ವಸ್ತುಪ್ರದರ್ಶನಕ್ಕೆ ಪ್ರವಾಸಿಗರ ಸಾಗರೋಪಾದಿಯಲ್ಲಿ ಬರುತ್ತಿದ್ದು, ಇಂದು ಕೂಡ ವಸ್ತುಪ್ರದರ್ಶನ ಜನಜಂಗುಳಿಯಿಂದ ತುಂಬಿತ್ತು. ವ್ಯಾಪಾರ–ವಹಿವಾಟು ಭರ್ಜರಿಯಾಗಿತ್ತು. ಪಾರ್ಕಿಂಗ್ ಸ್ಥಳವೂ ಭರ್ತಿಯಾಗಿತ್ತು. ವಿಶಿಷ್ಟ ವಿದ್ಯುತ್ ದೀಪಾಲಂಕಾರ, ಸೆಲ್ಫಿಸ್ಪಾಟ್‌ಗಳು ನೆಚ್ಚಿನ ಆಕರ್ಷಣೆಯಾಗಿದ್ದವು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಈ ಬಾರಿ ಪ್ಲಾಸ್ಟಿಕ್ ಮುಕ್ತ ದಸರಾ ವಸ್ತು ಪ್ರದರ್ಶನವೆಂದು ಘೋಷಣೆ ಮಾಡಲಾಗಿದೆ. ಪ್ರವಾಸಿಗರು ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸಬೇಡಿ. ಬಟ್ಟೆ ಬ್ಯಾಗ್ ಖರೀದಿಸಿ. ಬ್ಯಾಗ್ ಅಗತ್ಯವಿದ್ದರೆ ನಮ್ಮ ಸ್ವಯಂ ಸೇವಕರು ಬಳಿ ಪಡೆದುಕೊಳ್ಳಿ ಎಂದರು. ಹಾಗೆಯೇ ಮೈಕ್ ಮೂಲಕವೂ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ಹೇಳುವ ಮೂಲಕ ಮಳಿಗೆದಾರರನ್ನು ಎಚ್ಚರಿಸಲಾಯಿತು. ಹಾಗೆಯೇ ಸರ್ಕಾರಿ ಮಳಿಗೆಗಳಲ್ಲಿ ಮಾಹಿತಿ ನೀಡಲು ಆಯಾ ಇಲಾಖೆ ಸಿಬ್ಬಂದಿಗಳನ್ನು ನೇಮಿಸುವಂತೆ ಸೂಚಿಸಲಾಯಿತು. ವಸ್ತು ಪ್ರದರ್ಶನ ಪ್ರಾಧಿಕಾರದ ವ್ಯವಸ್ಥಾಪಕ ವೆಂಕಟೇಶ್, ಲಿಯೋ ಕ್ಲಬ್ ಆಫ್ ಮೈಸೂರ್‌ನ ಸ್ವಯಂ ಸೇವಕರಾದ ನಿಧಾ, ಪ್ರೀತಂ, ತೇಜಸ್, ರಾಹುಲ್ ಮತ್ತಿತರರಿದ್ದರು.

ದೇಶ - ವಿದೇಶ

ಇಸ್ರೇಲ್‌ನ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆ ಭೇದಿಸಿದ ಹೆಜ್ಬೊಲಾ

ಬೈರೂತ್ (ಲೆಬನಾನ್): ಹೆಜ್ಬೊಲ್ಲಾ ಉಗ್ರ ಸಂಘಟನೆಯ



ಪ್ರಮುಖ ನಾಯಕರನ್ನೇ ಇಸ್ರೇಲ್ ಸೇನೆ ಹೊಡೆದುರುಳಿಸಿದೆ. ಲೆಬನಾನ್ ದೇಶದಾದ್ಯಂತ ಇಸ್ರೇಲ್ ವಾಯುಪಡೆ ನಿರಂತರ ಏರ್ ಸ್ಟ್ರೈಕ್ ನಡೆಸುತ್ತಿದೆ. ಇದರ ನಡುವೆಯೂ ಇಸ್ರೇಲ್ ವಿರುದ್ಧ ಪ್ರತಿ ದಾಳಿ ನಡೆಸುವಲ್ಲಿ ಹೆಜ್ಬೊಲ್ಲಾ ಉಗ್ರರು ಸಫಲರಾಗಿದ್ದಾರೆ. ಇಸ್ರೇಲ್ ಸೇನಾ ನೆಲೆಗಳನ್ನೇ ಗುರಿಯಾಗಿಸಿ ದಾಳಿ ನಡೆಸಿದ ಹೆಜ್ಬೊಲ್ಲಾ ಉಗ್ರ ಸಂಘಟನೆ, ಇಸ್ರೇಲ್ ಸೇನೆಯ ನಾಲ್ವರು ಯೋಧರನ್ನು ಹತ್ಯೆ ಮಾಡಿದ್ದಷ್ಟೇ ಅಲ್ಲದೇ 60ಕ್ಕೂ ಹೆಚ್ಚು ಮಂದಿ ಗಾಯಗೊಳ್ಳುವಂತೆ ಮಾಡಿದ್ದಾರೆ.

ಹೆಜ್ಬೊಲ್ಲಾ ಉಗ್ರರ ಬಳಿ ಶಸ್ತ್ರ ಸಜ್ಜಿತ ದಾಳಿ ಸಾಮರ್ಥ್ಯ ಹೊಂದಿರುವ ಡ್ರೋನ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಜೊತೆಯಲ್ಲೇ ರಾಕೆಟ್‌ಗಳೂ ಈ ಉಗ್ರರ ಬಳಿ ಇವೆ. ರಾಕೆಟ್ ಹಾಗೂ ಡ್ರೋನ್ ಎರಡನ್ನೂ ಏಕಕಾಲಕ್ಕೆ ಬಳಸಿಕೊಂಡ ಹಿನ್ನೆಲೆಯಲ್ಲಿ ಇಸ್ರೇಲ್ ಸೇನೆಯ ನೆಲೆಗಳ ಮೇಲೇ ನೇರವಾಗಿ ದಾಳಿ ನಡೆಸಲು ಸಾಧ್ಯವಾಯ್ತು ಎಂದು ತಿಳಿದು ಬಂದಿದೆ. ಇಸ್ರೇಲ್‌ನ ಉತ್ತರ ಭಾಗದ ಹೈಫಾ ಹಾಗೂ ಟೆಲ್ ಅವೀವ್ ನಗರಗಳ ನಡುವೆ ಇಸ್ರೇಲ್ ಭದ್ರತಾ ಪಡೆಗಳ ಗೋಲಾನಿ ಬ್ರಿಗೇಡ್ ತರಬೇತಿ ಶಿಬಿರ ಇದೆ.

ಭಾರತಕ್ಕೆ ಬರಲಿವೆ 31 ಪ್ರಿಡೇಟರ್ ಡ್ರೋನ್; ಅಮೆರಿಕದೊಂದಿಗೆ ಒಪ್ಪಂದಕ್ಕೆ ಸಹಿ

ನವದೆಹಲಿ: ಭಾರತ ಮತ್ತು ಅಮೆರಿಕ 31 ಪ್ರಿಡೇಟರ್



ಡ್ರೋನ್‌ಗಳಿಗಾಗಿ 32,000 ಕೋಟಿ ರೂ.ಗಳ ಒಪ್ಪಂದವನ್ನು ಅಂತಿಮಗೊಳಿಸಿದವು. ಇದು ಭಾರತೀಯ ಸೇನೆಯ ಕಣ್ಗಾವಲು ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಭದ್ರತಾ ಕ್ಯಾಬಿನೆಟ್ ಸಮಿತಿ ಇಂದು ಇದನ್ನು ಸ್ವಾಧೀನಪಡಿಸಿಕೊಳ್ಳಲು ಅನುಮೋದನೆ ನೀಡಿತು. ನೌಕಾಪಡೆಗೆ 15 ಡ್ರೋನ್‌ಗಳನ್ನು ಪೂರೈಸಲಾಗುತ್ತದೆ. ಉಳಿದವುಗಳನ್ನು ಭಾರತೀಯ ಸೇನೆ ಮತ್ತು ವಾಯುಪಡೆಯ ನಡುವೆ ಸಮಾನವಾಗಿ ಹಂಚಲಾಗುತ್ತದೆ. ಭಾರತದಲ್ಲಿ ನಿರ್ವಹಣೆ, ದುರಸ್ತಿ ಮತ್ತು ಕೂಲಂಕುಷ ಪರೀಕ್ಷೆ ಸೌಲಭ್ಯಕ್ಕಾಗಿ ವಿದೇಶಿ ಮಿಲಿಟರಿ ಮಾರಾಟ ಒಪ್ಪಂದಕ್ಕೆ ಇಂದು ಸಹಿ ಹಾಕಲಾಯಿತು. ಒಪ್ಪಂದವನ್ನು ಅಧಿಕೃತಗೊಳಿಸಲು ಅಮೆರಿಕ ಮಿಲಿಟರಿ ಮತ್ತು ಕಾರ್ಪೊರೇಟ್ ಪ್ರತಿನಿಧಿಗಳು ಈಗಾಗಲೇ ಭಾರತದಲ್ಲಿದ್ದಾರೆ. ಸಮಾರಂಭದಲ್ಲಿ ನೌಕಾ ವ್ಯವಸ್ಥೆಗಳ ಜಂಟಿ ಕಾರ್ಯದರ್ಶಿ ಮತ್ತು ಸ್ವಾಧೀನ ವ್ಯವಸ್ಥಾಪಕರು ಸೇರಿದಂತೆ ಉನ್ನತ ಭಾರತೀಯ ರಕ್ಷಣಾ ಅಧಿಕಾರಿಗಳು ಉಪಸ್ಥಿತರಿದ್ದರು. ದೀರ್ಘಾವಧಿಯ ಒಪ್ಪಂದವು ಕೆಲವು ವಾರಗಳ ಹಿಂದೆ ರಕ್ಷಣಾ ಸ್ವಾಧೀನ ಮಂಡಳಿಯ ಸಭೆಯಲ್ಲಿ ಚರ್ಚೆಗೊಳಗಾಯಿತು.

ಏಕಾಏಕಿ ಬ್ಯಾಂಕ್ ಅಕೌಂಟ್‌ಗೆ ಬಂತು 16 ಲಕ್ಷ; ಸಿಕ್ಕಿದ್ದೆ ಸೀರುಂಡೆ ಎಂದು ಖರ್ಚು ಮಾಡಿಕೊಂಡವನಿಗೆ ಜೈಲು

ಸಿಂಗಾಪುರ: ತಪ್ಪಾಗಿ ತನ್ನ ಬ್ಯಾಂಕ್ ಖಾತೆಗೆ ಬಂದ ಎಸ್‌ಜಿಡಿ 25,000 (ಅಂದಾಜು 16 ಲಕ್ಷ ರೂ) ಹಣವನ್ನು ಹಿಂದಿರುಗಿಸದ ಕಾರಣ 47 ವರ್ಷದ ಭಾರತೀಯ ಪ್ರಜೆಗೆ ಸಿಂಗಾಪುರ ನ್ಯಾಯಾಲಯ ಒಂಬತ್ತು ವಾರಗಳ ಜೈಲು ಶಿಕ್ಷೆ ವಿಧಿಸಿದೆ. ಅ.14ರಂದು, ಪೆರಿಯಸಾಮಿ ಮಥಿಯಾಳಗನ್ ಅವರು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ತಪ್ಪೊಪ್ಪಿಕೊಂಡರು.

ತಮ್ಮ ಸಾಲವನ್ನು ತೀರಿಸಲು ಹಣವನ್ನು ಬಳಸಿಕೊಂಡಿದ್ದೇನೆ ಮತ್ತು ಅದರಲ್ಲಿ ಸ್ವಲ್ಪವನ್ನು ಭಾರತದಲ್ಲಿನ ನನ್ನ ಕುಟುಂಬಕ್ಕೆ ರವಾನಿಸಿದ್ದೇನೆ ಎಂದು ಪೆರಿಯಸಾಮಿ ನ್ಯಾಯಾಲಯಕ್ಕೆ ತಿಳಿಸಿದರು ಎಂದು ವರದಿಯಾಗಿದೆ.

ಪೆರಿಯಸಾಮಿ ಪ್ಲಂಬಿಂಗ್ ಮತ್ತು ಎಂಜಿನಿಯರಿಂಗ್ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರು. ಸಂಸ್ಥೆಯ ನಿರ್ವಾಹಕರು ಕಂಪನಿ ಖಾತೆ ಎಂದು ಭಾವಿಸಿದ್ದ ಅಂದಾಜು 16 ಲಕ್ಷ ರೂಗಳನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಿದರು. ಬ್ಯಾಂಕ್, ಪೆರಿಯಸಾಮಿಗೆ ಪತ್ರ ಕಳುಹಿಸಿ ಹಣವನ್ನು ಹಿಂದಿರುಗಿಸುವಂತೆ ವಿನಂತಿಸಿದೆ. ಆದರೆ ಬ್ಯಾಂಕ್‌ನ ದಾಖಲೆಗಳಲ್ಲಿ ಪೆರಿಯಸಾಮಿ ಅವರ ಕೊನೆಯ ವಿಳಾಸ ಆತ ಈ ಹಿಂದೆ ಕೆಲಸ ಮಾಡುತ್ತಿದ್ದ ಕಂಪನಿಯದ್ದಾಗಿತ್ತು. ಹೀಗಾಗಿ ಪತ್ರವನ್ನು ಕಂಪನಿಗೆ ಕಳುಹಿಸಲಾಗಿದೆ.

ಕೋಟಾ–ಇಟಾವಾ ಎಕ್ಸ್‌ಪ್ರೆಸ್ ರೈಲಿನಿಂದ ಯುವತಿ ಅಪಹರಿಸಿ ಸಾಮೂಹಿಕ ಅತ್ಯಾಚಾರ

ಕೋಟಾ: ಕೋಟಾ–ಇಟಾವಾ ಎಕ್ಸ್‌ಪ್ರೆಸ್ ರೈಲಿನಿಂದ 22 ವರ್ಷದ ಯುವತಿಯನ್ನು ಅಪಹರಿಸಿ, 5 ಗಂಟೆಗಳ ಕಾಲ ಒತ್ತೆಯಾಳಾಗಿ ಇಟ್ಟುಕೊಂಡಿದ್ದ ಮೂವರು ವ್ಯಕ್ತಿಗಳು ಆಕೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಯುವತಿಯ ತಂದೆ ನೀಡಿದ ದೂರಿನ ಆಧಾರದ ಮೇಲೆ ಕೇಸ್ ದಾಖಲಿಸಿಕೊಳ್ಳಲಾಗಿದ್ದು, ಯುವತಿ ಮಧ್ಯಪ್ರದೇಶದ ಭಿಂಡ್‌ನಲ್ಲಿರುವ ತನ್ನ ಚಿಕ್ಕಪ್ಪನ ಮನೆಯಿಂದ ಹಿಂದಿರುಗುತ್ತಿದ್ದಾಗ ಈ ಘಟನೆ ನಡೆದಿದೆ. ತನ್ನ ಮಗಳಿಗೆ ನಿದ್ರೆ ಮಾತ್ರೆ ನೀಡಿ, ಪ್ರಜ್ಞೆ ತಪ್ಪಿಸಿ, ಅ.12ರಂದು ರೈಲಿನಿಂದ ಅಪಹರಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಯುವತಿ ಉತ್ತರಪ್ರದೇಶದ ಇಟಾವಾಗೆ ತೆರಳಲು ಭಿಂಡ್‌ನ ಸೋನಿ ರೈಲು ನಿಲ್ದಾಣದಲ್ಲಿ ಕೋಟಾ–ಇಟಾವಾ ಎಕ್ಸ್‌ಪ್ರೆಸ್ ಅನ್ನು ಹತ್ತಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಸತ್ಯಪಾಲ್ ಸಿಂಗ್ ಹೇಳಿದ್ದಾರೆ. ಅಪರಿಚಿತ ವ್ಯಕ್ತಿಯೊಬ್ಬ ರೈಲಿನಲ್ಲಿ ಯುವತಿ ವಿಡಿಯೋವನ್ನು ರೆಕಾರ್ಡ್ ಮಾಡಲು ಪ್ರಾರಂಭಿಸಿದನು. ಅದಕ್ಕೆ ಯುವತಿ ವಿರೋಧಿಸಿದ್ದಾಳೆ. ಆ ವ್ಯಕ್ತಿ ಅನುಮಾನಾಸ್ಪದವಾಗಿ ಕಾಣುತ್ತಿದ್ದರಿಂದ ಯುವತಿ ಆತನ ಫೋಟೋ ಕ್ಲಿಕ್ಕಿಸಿದ್ದಾಳೆ. ಆದರೆ, ಆ ವ್ಯಕ್ತಿ ಆಕೆಯನ್ನು ಹಿಂಬಾಲಿಸಿ, ಪ್ರಜ್ಞಾಹೀನಗೊಳಿಸಿ ಅಪಹರಿಸಿದ್ದಾನೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಭೂಮಿಯಾಳದ 700 ಕಿ.ಮೀ. ಆಳದಲ್ಲಿ ಜಗತ್ತಿನ 6ನೇ ಮಹಾಸಾಗರ ಪತ್ತೆ

ವಾಷಿಂಗ್ಟನ್: ಜಗತ್ತಿಗೆ ಈವರೆಗೂ ತಿಳಿದಿರುವ ಪ್ರಕಾರ ಭೂಮಿಯಲ್ಲಿರುವುದು 5 ಸಾಗರ. ಅವುಗಳೆಂದರೆ ಪೆಸಿಫಿಕ್, ಅಟ್ಲಾಂಟಿಕ್, ಹಿಂದೂ ಮಹಾಸಾಗರ, ಅರ್ಕ್‌ಟಿಕ್,



ಅಂಟಾರ್ಟಿಕಾ ಮಹಾಸಾಗರಗಳು. ಆದರೆ, ವಿಜ್ಞಾನಿಗಳ ತಂಡವೊಂದು ಇದೀಗ 6ನೇ ಮಹಾಸಾಗರ ಪತ್ತೆಯಾಗಿದೆ ಎಂದು ಘೋಷಿಸಿದೆ. ಭೂಮಿಯ ಮೇಲ್ಮನಿಂದ 700 ಕಿ.ಮೀ ಆಳದಲ್ಲಿರುವ ಈ ಸಾಗರವು ಹಾಲಿ 3 ಸಮುದ್ರಗಳ ಒಟ್ಟು ವಿಸ್ತೀರ್ಣದಷ್ಟು ಬೃಹತ್ ಗಾತ್ರ ಹೊಂದಿದೆ. ನಾರ್ತ್‌ವೆಸ್ಟರ್ನ್ ವಿವಿಯ ವಿಜ್ಞಾನಿಗಳ ತಂಡ ಭೂಮಿಯ ಕಂಪನ ಅಳೆಯಲು ಬಳಸುವ ಸಿಸ್ಮೋಗ್ರಾಫ್‌ಗಳನ್ನು ಅಮೆರಿಕದಾದ್ಯಂತ 2000 ಸ್ಥಳಗಳಲ್ಲಿ ಅಳವಡಿಸಿದ್ದಾರೆ. ಇವುಗಳಿಂದ ಸಂಗ್ರಹಿಸಿದ 500 ಭೂಕಂಪನಗಳ ಕುರಿತು ಅಧ್ಯಯನ ಮಾಡಿದ್ದಾರೆ. ಈ ವೇಳೆ ಕೆಲ ಕಡೆಗಳಲ್ಲಿ ಅಲೆಯ ತೀವ್ರತೆ ಕಡಿಮೆಯಾಗಿದ್ದನ್ನು ಕಂಡಿದ್ದಾರೆ. ಇದು ಅಲ್ಲಿ ನೀರಿನ ಇರುವಿಕೆಯನ್ನು ಸೂಚಿಸುತ್ತಿದೆ. ರಿಂಗ್‌ವುಡೈಟ್ ಎಂಬ ಮೆತ್ತಗಿನ ನೀಲಿ ಕಲ್ಲುಗಳ ಮಧ್ಯೆ ಈ ನೀರು ಬಂಧಿಯಾಗಿರಬಹುದು. ರಿಂಗ್‌ವುಡೈಟ್ ಭೂಮಿಯಾಳದಿಂದ ಒಸರಿದ ನೀರಿನಿಂದ ಸೃಷ್ಟಿಯಾಗಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಇಂದು ಸಿಎಂಗೆ ಕಪ್ಪು ಬಾವುಟ ಪ್ರದರ್ಶನ

ಮಂಡ್ಯ,ಅ.15– ಹಲಗೂರು ಗ್ರಾಮ ಪಂಚಾಯಿತಿ ಪಿಡಿಓ ಸಿ.ರುದ್ರಯ್ಯ ಅವರು ಹಲವು ಅಕ್ರಮಗಳಲ್ಲಿ ತೊಡಗಿರುವ ಆರೋಪವಿದ್ದು, ಅವರ ಅಮಾನತಿಗೆ ಕ್ರಮ ವಹಿಸದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಧೋರಣೆ ವಿರೋಧಿಸಿ ಅ.16ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಪ್ಪು ಪಟ್ಟಿ ಪ್ರದರ್ಶನ ಮಾಡಲಾಗುವುದು ಎಂದು ಸದರಿ ಗ್ರಾ.ಪಂ ಸದಸ್ಯ ಸುರೇಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಡಿಓ ಸಿ.ರುದ್ರಯ್ಯ ವಿರುದ್ಧ ಹಲವು ಅಕ್ರಮಗಳ ಬಗ್ಗೆ ದೂರು ದಾಖಲಿಸಿದ್ದು, ಅಕ್ರಮಗಳು ಸಾಬೀತಾದರೂ ಕ್ಷೇತ್ರ ಶಾಸಕರಾಗಲಿ, ಸರ್ಕಾರವಾಗಲಿ ಮುಂದಾಗದ ಕಾರಣ ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿ(ಟಿ.ಕೆ.ಹಳ್ಳಿ)ಯಲ್ಲಿ ಕಾರ್ಯಕ್ರಮ ಉದ್ಘಾಟನೆಗೆ ಆಗಮಿಸುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳಿಗೆ ಕಪ್ಪುಪಟ್ಟಿ ಪ್ರದರ್ಶನ ಮಾಡಲು ನಿರ್ಧರಿಸಿದ್ದೇವೆ ಎಂದರು.

ಸದರಿ ವ್ಯಕ್ತಿಯ ವಿರುದ್ಧ ಇನ್ನಷ್ಟು ಅಕ್ರಮ ಪ್ರಕರಣಗಳಿದ್ದು, ಈ ಪ್ರಕರಣಗಳ ಸಾಕ್ಷ್ಯ ನಾಶ ಮಾಡುವ ಸಾಧ್ಯತೆಗಳಿವೆ. ಆದರೂ ಈ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳದೇ ಅದೇ ಪಂಚಾಯಿತಿಯಲ್ಲಿ ಮುಂದುವರೆಯಲು ಅವಕಾಶ ಮಾಡಿಕೊಟ್ಟಿರುವುದು ಸಾಕ್ಷ್ಯ ನಾಶದ ಹುನ್ನಾರವಾಗಿದೆ. ಇವರ ವಿರುದ್ಧ ದೂರುಗಳು ಹೆಚ್ಚಾದ ಹಿನ್ನಲೆ ಜಿಲ್ಲಾಧಿಕಾರಿಗಳು ಬೇರೆಡೆಗೆ ವರ್ಗ ಮಾಡಿದ್ದರೂ, ಸ್ಥಳೀಯ ಸಂಸ್ಥೆಗಳ ಒತ್ತಡದ ಮೇರೆಗೆ ಪಿಡಿಓ ಸಿ.ರುದ್ರಯ್ಯ ಅದೇ ಗ್ರಾಪಂಗೆ ಬಂದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಎಂದು ದೂರಿದರು.

ಹೈಕೋರ್ಟಿನಲ್ಲೂ ಈ ಸಂಬಂಧ ತನಿಖೆ ಮಾಡುವಂತೆ ಜಿ.ಪಂ ಸಿಇಓಗೆ ಆದೇಶ ನೀಡಿದ್ದರೂ ತನಿಖೆ ಮಾಡಲಾಗುತ್ತಿಲ್ಲ, ಈತನಿಗೆ ಜಿ.ಪಂ ಸಿಇಓ ಅವರೇ ಬೆನ್ನೆಲುಬಾಗಿದ್ದಾರೆ. ಸಿಇಓ ಅವರು ಕ್ರಮ ತೆಗೆದುಕೊಳ್ಳಲು ಅಕ್ಟೋಬರ್ 31ರವರೆಗೆ ಕಾಲಾವಕಾಶವಿದೆ. ಪಿಡಿಓ ಅಕ್ರಮಗಳಿಗೆ ಶಾಸಕರ ಸಹಮತವೂ ಇದೆ ಎಂದು ಗಂಭೀರ ಆರೋಪ ಮಾಡಿದರು. ಗೋಷ್ಠಿಯಲ್ಲಿ ಜೆಡಿಎಸ್ ಎಸ್ಸಿ–ಎಸ್ಟಿ ಅಧ್ಯಕ್ಷ ಕುಮಾರಸ್ವಾಮಿ, ದಲಿತ ಮುಖಂಡರಾದ ನಾಗರಾಜಯ್ಯ, ನಾಗೇಂದ್ರ ಸಾಗ್ಯ, ರವೀಂದ್ರ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ,ಅ.15–ಮಂಡ್ಯ ತೋಟಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಾದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ತಾಳೆಬೆಳೆ ಯೋಜನೆಗಳಿಗೆ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಂಡ್ಯ ಜಿಲ್ಲೆಯ ತಾಲೂಕುಗಳಾದ ಕೆ.ಆರ್.ಪೇಟೆ ದೂ.ಸಂ: 08237–262540, ಮದ್ದೂರು– 08232–233450, ಮಳವಳ್ಳಿ–08230–242301, ಮಂಡ್ಯ– 08232–225735, ನಾಗಮಂಗಲ–08234–286160, ಪಾಂಡವಪುರ–08236–255055, ಶ್ರೀರಂಗಪಟ್ಟಣ–08236–253205 ಅನ್ನು ಸಂಪರ್ಕಿಸಬಹುದು

ಪಾಂಡವಪುರ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೋಟ್ಯಾಂತರ ರೂ. ಹಣ, ಚಿನ್ನಾಭರಣ ದುರ್ಬಳಕೆ

ಲಾಕರ್‌ನಿಂದ ಚಿನ್ನಾಭರಣ ತೆಗೆದು ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಹೆಚ್ಚಿನ ಬೆಲೆಗೆ ಗಿರವಿ

● ಪಿಗ್ಮಿ, ಡೆಪಾಸಿಟ್ ಹಣ ಸೇರಿದಂತೆ 4 ಕೋಟಿಗೂ ಅಧಿಕ ಹಣ ದುರುಪಯೋಗ ● ದುರುಪಯೋಗಪಡಿಸಿಕೊಂಡ ಹಣ ವಸೂಲಾತಿಗೆ ಕ್ರಮ ● ಹಣ ವಸೂಲಿಯಾದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ


ಪಾಂಡವಪುರ ಪಟ್ಟಣದ ಕಸಬಾ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಪಾಂಡವಪುರ,ಅ.15–ಪಟ್ಟಣದ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೋಟ್ಯಾಂತರ ರೂ. ಹಣ ಹಾಗೂ ಚಿನ್ನಾಭರಣ ದುರ್ಬಳಕೆಯಾಗಿದ್ದು, ರೈತರು, ಷೇರುದಾರರು ಆತಂಕಕ್ಕೆ ಒಳಗಾಗಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತರು ಮತ್ತು ಷೇರುದಾರರು ಆತಂಕಕ್ಕೊಳಗಾಗುವುದು ಬೇಡ. ಹಣ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಸಬಾ ಸೊಸೈಟಿಯಲ್ಲಿ ಷೇರುದಾರರು ಅಡವಿಟ್ಟಿದ್ದ ಚಿನ್ನಾಭರಣ, ಫಿಗ್ಮಿ ಮತ್ತು ಷೇರುದಾರರ ಡೆಪಾಸಿಟ್ ಹಣ ಸೇರಿದಂತೆ ಇತ್ಯಾದಿ ಹಣ ದುರ್ಬಳಕೆಯಾಗಿದೆ ಎಂಬ ದೂರುಗಳು ಕೇಳಿ ಬಂದ ತಕ್ಷಣವೇ ಪರಿಶೀಲನೆ ನಡೆಸಿದ್ದು. ಆ ಸಂದರ್ಭದಲ್ಲಿ ಸಂಘದಲ್ಲಿ ಸುಮಾರು 4 ಕೋಟಿಗೂ ಅಧಿಕ ಹಣ ದುರ್ಬಳಕೆಯಾಗಿರುವುದು ಕಂಡುಬಂದ ತಕ್ಷಣವೇ ಹಣ ವಸೂಲಾತಿಗೆ ಕ್ರಮವಹಿಸಲಾಗಿದೆ ಎಂದರು.

ಸಹಕಾರ ಇಲಾಖೆಯ ಸಹಾಯಕ ನಿಬಂಧಕರಿಂದಲೂ ಈ ಬಗ್ಗೆ ಮಾಹಿತಿ ಕೇಳಲಾಗಿದೆ. ಪಟ್ಟಣದ ಡಿಸಿಸಿ ಬ್ಯಾಂಕ್ ಲಾಕರ್‌ನಲ್ಲಿ ಷೇರುದಾರರು ಅಡವಿಟ್ಟಿದ್ದ ಚಿನ್ನಾಭರಣಗಳನ್ನು ಲಾಕರ್‌ನಿಂದ ತೆಗೆದು ಖಾಸಗಿ ಹಣಕಾಸು ಸಂಸ್ಥೆಯಲ್ಲಿ ಗಿರವಿ ಇಡಲಾಗಿದೆ ಎಂದು ತಿಳಿದು ಬಂದಿದೆ. ಖಾಸಗಿ ಸಂಸ್ಥೆಗಳು ಸಹಕಾರ ಸಂಘಗಳಿಗಿಂತ ಚಿನ್ನಕ್ಕೆ ಹೆಚ್ಚಿನ ಹಣ ನೀಡುತ್ತವೆ ಎಂಬ ಕಾರಣಕ್ಕೆ ಲಾಕರ್‌ನಲ್ಲಿದ್ದ ಚಿನ್ನವನ್ನು ಬೇರೆಡೆಗೆ ವರ್ಗಾಯಿಸಿ ಅದರಿಂದ ಬಂದ ಹೆಚ್ಚುವರಿ ಹಣವನ್ನು ಕೂಡ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಕೃಷಿ ಪತ್ತಿನ ಸಹಕಾರ ಸಂಘ ಮಾತ್ರವಲ್ಲ ಹಲವಾರು ಸಂಘ ಸಂಸ್ಥೆಗಳಲ್ಲಿ ಹಣ ದುರ್ಬಳಕೆಯಾಗುತ್ತಿದೆ. ಹೀಗಾಗಿ ತಾಲೂಕಿನ ಎಲ್ಲಾ ಸಹಕಾರ ಸಂಘಗಳ ಹಣಕಾಸು ವಹಿವಾಟನ್ನು ತನಿಖೆ ಮಾಡಿ ವರದಿ ನೀಡುವಂತೆ ಡಿಆರ್ ಮತ್ತು ಎಆರ್ ಅವರಿಗೆ ಸೂಚಿಸಲಾಗಿದೆ. ಆಡಳಿತ ಮಂಡಳಿ ನಿರ್ದೇಶಕರು ಮತ್ತು ನೌಕರರ ವರ್ಗ ಸಾರ್ವಜನಿಕರ ಹಣವನ್ನು ತಮ್ಮ ಮನೆಯ ಹಣದಂತೆ ಬಳಸಿಕೊಳ್ಳುವುದನ್ನು ಬಿಡಬೇಕು. ಸಹಕಾರ ಕ್ಷೇತ್ರ ಉಳಿದರೆ ಮಾತ್ರ ಜನರಿಗೆ ಆರ್ಥಿಕ ಬಲ ತುಂಬಲು ಸಾಧ್ಯವಾಗುತ್ತದೆ. ರಾಜಕೀಯವನ್ನು ಬದಿಗಿಟ್ಟು ಸಹಕಾರಿ ಸಂಸ್ಥೆಗಳನ್ನು ಉಳಿಸುವ ಕೆಲಸ ಮಾಡಬೇಕಿದೆ. ಕಸಬಾ ಸೊಸೈಟಿಯಲ್ಲಿ ದುರ್ಬಳಕೆಯಾಗಿರುವ ಹಣ ವಸೂಲಾತಿ ಬಳಿಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು, ತಪ್ಪು ಮಾಡಿದವರನ್ನು ಎಂದಿಗೂ ಕ್ಷಮಿಸಲಾಗುವುದಿಲ್ಲ ಎಂದು ಎಚ್ಚರಿಸಿದರು.

ತಾಲೂಕಿನಾದ್ಯಂತ ಕೆರೆ, ಕಟ್ಟೆ ಮತ್ತು ಹಳ್ಳಗಳನ್ನು ಒತ್ತುವರಿ ಮಾಡಿಕೊಂಡಿರುವವರು ತಾವಾಗಿಯೇ ಒತ್ತುವರಿ ತೆರವುಗೊಳಿಸಬೇಕು. ನಿಮಗಾಗಿ, ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಅಂತರ್ಜಲ ಕಾಪಾಡಬೇಕಿದೆ. ಹೀಗಾಗಿ ಒತ್ತುವರಿ ತೆರವುಗೊಳಿಸಿ ಕೆರೆ ಕಟ್ಟೆ ಉಳಿಸಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತಸಂಘ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ತಾಲೂಕು ಅಧ್ಯಕ್ಷ ನಾಗರಾಜು, ಸರ್ವೋದಯ ಕರ್ನಾಟಕ ಪಕ್ಷದ ಕೆ.ಎಸ್.ದಯಾನಂದ, ಮುಖಂಡರಾದ ಚಿಕ್ಕಾಡೆ ಹರೀಶ್, ಸಿ.ಎನ್.ವಿಜೇಂದ್ರ, ಉಮಾಶಂಕರ್ ಇದ್ದರು.

ನಿವೇಶನಗಳ ಕಬಳಿಕೆ ವಿರುದ್ಧ ಸಿಒಡಿ ತನಿಖೆ

ಪುರಸಭೆ ವ್ಯಾಪ್ತಿಯಲ್ಲಿ ಹಂಚಿಕೆಯಾಗಿರುವ ನಿವೇಶನಗಳ ಅಕ್ರಮ ಕಬಳಿಕೆ ಮತ್ತು ಅವ್ಯವಹಾರಗಳನ್ನು ಸರ್ಕಾರ ಸಿಒಡಿ ತನಿಖೆಗೆ ಆದೇಶಿಸಿದ್ದು, ಅದರಂತೆ ಪೊಲೀಸರು ಅಕ್ರಮಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿ ಕಲೆ ಹಾಕುತ್ತಿದ್ದಾರೆ. ಪಾಂಡವಪುರ ಪಟ್ಟಣ ವ್ಯಾಪ್ತಿಯಲ್ಲಿ 1976 ರಿಂದ ಇಲ್ಲಿಯವರೆಗೆ ಬಡವರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ಪುರಸಭೆ ಆಡಳಿತ ಮಂಡಳಿ ಮತ್ತು ಆಶ್ರಯ ಸಮಿತಿ ಮೂಲಕ ಸುಮಾರು 2500ಕ್ಕೂ ಹೆಚ್ಚು ನಿವೇಶನಗಳನ್ನು ವಿತರಿಸಲಾಗಿದೆ. ಆದರೆ ಇದರಲ್ಲಿ ಬಹುತೇಕ ನಿವೇಶನಗಳನ್ನು ಪ್ರಭಾವಿಗಳು ಅಕ್ರಮವಾಗಿ ಕಬಳಿಸಿದ್ದಾರೆ ಮತ್ತು ಒಂದೇ ನಿವೇಶನಕ್ಕೆ ಎರಡ್ಮೂರು ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಮೂಲ ಫಲಾನುಭವಿಗಳನ್ನು ವಂಚಿಸಲಾಗಿದೆ ಇದರಿಂದ ಸಾಕಷ್ಟು ಜನರು ಸಮಸ್ಯೆ ಎದುರಿಸುತ್ತಿದ್ದು, ಇಡೀ ಪ್ರಕರಣವನ್ನು ತನಿಖೆ ನಡೆಸುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗಿದೆ ಎಂದರು.

ಪಟ್ಟಣದಲ್ಲಿ ನಿವೇಶನ ಖರೀದಿಸುವ ಜನರು ದಾಖಲೆಗಳನ್ನು ಪರಿಶೀಲಿಸಿ ಎಚ್ಚರಿಕೆಯಿಂದ ಖರೀದಿಸಬೇಕು. ಜನರಿಗೆ ಅನ್ಯಾಯವಾಗಬಾರದು ಎಂಬ ದೃಷ್ಟಿಯಿಂದ ನಿವೇಶನ ನೋಂದಣಿಗೂ ಮುನ್ನ ಪುರಸಭೆಯಿಂದ ಎನ್‌ಒಸಿ ಪಡೆದುಕೊಳ್ಳುವಂತೆ ಸಬ್‌ರಿಜಿಸ್ಟ್ರಾರ್ ಅವರಿಗೆ ಸೂಚಿಸಲಾಗಿದೆ. ನಿವೇಶನಗಳ ಅರ್ಹ ಫಲಾನುಭವಿಗಳು ನಿವೇಶನ ಕಳೆದುಕೊಂಡಿದ್ದರೆ ಅವರಿಗೆ ನಿವೇಶನವನ್ನು ಹಿಂದಿರುಗಿಸಲು ಕ್ರಮ ವಹಿಸಲಾಗುವುದು. ಸಿಒಡಿ ತನಿಖೆ ಬಳಿಕ ಇಡೀ ಪಟ್ಟಣವನ್ನು ಸರ್ವೆ ಮಾಡಿಸಿ ಮುಂದೆ ಅಕ್ರಮ ನಡೆಯದಂತೆ ತಡೆಗಟ್ಟಲಾಗುವುದು. ಅಕ್ರಮದಲ್ಲಿ ಭಾಗಿಯಾಗಿರುವ ತಪ್ಪಿತಸ್ಥರಿಗೆ ಕಾನೂನು ಕ್ರಮ ಖಚಿತ ಎಂದರು.


ಅಲಂಬಾಡಿಕಾವಲು ಗ್ರಾಪಂಗೆ ಜಿ.ಜೆ.ವೆಂಕಟೇಶ್ ಅಧ್ಯಕ್ಷ


ಅಲಂಬಾಡಿಕಾವಲು ಗ್ರಾಪಂ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಗುಡುಗನಹಳ್ಳಿ ಜಿ.ಜೆ.ವೆಂಕಟೇಶ್ ಅವರನ್ನು ಅಭಿಮಾನಿಗಳು ಅಭಿನಂದಿಸಿದರು.

ಕೆ.ಆರ್.ಪೇಟೆ,ಅ.15– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಅಲಂಬಾಡಿಕಾವಲು ಗ್ರಾಮ ಪಂಚಾಯತ್ ನೂತನ ಅಧ್ಯಕ್ಷರಾಗಿ ಗುಡುಗನಹಳ್ಳಿ ಜಿ.ಜೆ.ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಂಚಾಯಿತಿಯ ಹಿಂದಿನ ಅಧ್ಯಕ್ಷರಾಗಿದ್ದ ಎ.ಟಿ.ಕರಿಶೆಟ್ಟಿ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗುಡುಗನಹಳ್ಳಿ ಜಿ.ಜೆ.ವೆಂಕಟೇಶ್ ಹಾಗೂ ರವಿ ಎ.ಎನ್ ನಾಮಪತ್ರ ಸಲ್ಲಿಸಿದರು. ಕೊನೆ ಕ್ಷಣದಲ್ಲಿ ರವಿ ನಾಮಪತ್ರ ವಾಪಸ್ ಪಡೆದ ಕಾರಣ, ಕಣದಲ್ಲಿದ್ದ ಗುಡುಗನಹಳ್ಳಿ ಜಿ.ಜೆ.ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎ.ಎಸ್.ದೇವರಾಜು ಘೋಷಿಸಿದರು. ಸಹ ಚುನಾವಣಾಧಿಕಾರಿಗಳಾಗಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಎಂ.ಶಿವಕುಮಾರ್, ಕಾರ್ಯದರ್ಶಿ ಇಮ್ರಾನ್ ಷರೀಫ್ ಕರ್ತವ್ಯ ನಿರ್ವಹಿಸಿದರು.

ಕಾವೇರಿ ತೀರ್ಥೋದ್ಭವ: ಕಾವೇರಿ ಮಾತೆಗೆ ಪೂಜೆ



ಮಂಡ್ಯ,ಅ.15– ಕಾವೇರಿ ಮಾತೆಯ ಉಗಮಸ್ಥಾನ ತಲಕಾವೇರಿಯಲ್ಲಿ ಅಕ್ಟೋಬರ್ 17ರಂದು ಪವಿತ್ರ ತೀರ್ಥೋದ್ಭವ ನಡೆಯುವ ಹಿನ್ನೆಲೆ, ಮಂಡ್ಯ ನಗರದ ಕಾವೇರಿ ವನ ಉದ್ಯಾನದಲ್ಲಿನ ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ ಮಾಜಿ ಅಧ್ಯಕ್ಷ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಟ್ರಸ್ಟ್‌ನ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಪಿ.ರವಿಕುಮಾರ್‌ಗೌಡ ಅವರು ವಹಿಸಲಿದ್ದು, ಶ್ರೀರಂಗಪಟ್ಟಣ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸುವರು, ಮುಖ್ಯ ಅತಿಥಿಗಳಾಗಿ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ನಗರಸಭಾ ಅಧ್ಯಕ್ಷ ಪ್ರಕಾಶ್. ಎಂ.ವಿ, ಮೂಡಾಧ್ಯಕ್ಷ ನಹೀಮ್, ನಗರಸಭೆ ಉಪಾಧ್ಯಕ್ಷ ಅರುಣ್‌ಕುಮಾರ್, ಟ್ರಸ್ಟ್‌ನ ಪ್ರಧಾನ ಪೋಷಕ ಎಚ್.ಎನ್. ಯೋಗೇಶ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಎಡಿಸಿ ಎಚ್.ಎಲ್.ನಾಗರಾಜು, ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ಗಂಗಾಧರಸ್ವಾಮಿ, ಕಾ.ನೀ. ನಿಗಮದ ಕಾರ್ಯಪಾಲಕ ಅಭಿಯಂತರ ನಂಜುಂಡೇಗೌಡ, ತೋಟಗಾರಿಕೆ ಉಪ ನಿರ್ದೇಶಕಿ ರೂಪಶ್ರೀ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು, ಸಾರ್ವಜನಿಕರು ಭಾಗವಹಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಜಗದೀಶ್, ಚಂದ್ರಶೇಖರ್, ಟಿ.ಡಿ.ನಾಗರಾಜು, ದೇವೇಗೌಡ, ಕುಮಾರ್‌ಗೌಡ, ಅರ್ಜುನ್ ಇದ್ದರು.

ಪಾಂಡವಪುರದಲ್ಲಿ ಅನಧಿಕೃತ ಕ್ಲಿನಿಕ್‌ಗಳಿಗೆ ಬೀಗ

ಪಾಂಡವಪುರ,ಅ.15– ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಆರೋಗ್ಯ ಇಲಾಖೆಯಿಂದ ಅನುಮತಿ ಪಡೆಯದೆ ನಡೆಯುತ್ತಿರುವ ಅನಧಿಕೃತ ಕ್ಲಿನಿಕ್‌ಗಳ ಬಾಗಿಲು ಮುಚ್ಚಿಸುವಂತೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಅವರಿಗೆ ಸೂಚಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ(ಕೆಡಿಪಿ) ಸಭೆಯ ಅಧ್ಯಕ್ಷತೆ ವಹಿಸಿ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಆಡಳಿತ ಪಾಠ ಹೇಳಿದರು. ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಎಷ್ಟು ಕ್ಲಿನಿಕ್‌ಗಳಿವೆ? ಇದರಲ್ಲಿ ಎಷ್ಟು ಕ್ಲಿನಿಕ್‌ಗಳು ಆರೋಗ್ಯ ಇಲಾಖೆಯಿಂದ ಅನುಮತಿ ಪಡೆದಿವೆ. ಅನಧಿಕೃತ ಕ್ಲಿನಿಕ್‌ಗಳು ಎಷ್ಟಿವೆ? ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಾ.ಸಿ.ಎ.ಅರವಿಂದ್ ಅವರು, ತಾಲೂಕಿನಲ್ಲಿ ಒಟ್ಟು 46 ಕ್ಲಿನಿಕ್‌ಗಳಿದ್ದು ಇದರಲ್ಲಿ 26 ಕ್ಲಿನಿಕ್ ಅನುಮತಿ ಪಡೆದಿವೆ, 10 ಕ್ಲಿನಿಕ್ ಅನುಮತಿಗೆ ಅರ್ಜಿ ಸಲ್ಲಿಸಿವೆ, 10 ಕ್ಲಿನಿಕ್ ಯಾವುದೇ ಅನುಮತಿ ಪಡೆಯದೆ ನಡೆಯುತ್ತಿವೆ ಎಂದು ವಿವರಿಸಿದರು. ಅನುಮತಿ ಪಡೆಯದೆ ನಡೆಸುತ್ತಿರುವ ಅಕ್ರಮ ಕ್ಲಿನಿಕ್‌ಗಳನ್ನು ಮುಲಾಜಿಲ್ಲದೆ ಬಾಗಿಲು ಮುಚ್ಚಿಸಿ, ಯಾವುದೇ ಒತ್ತಡಕ್ಕೂ ಮಣಿಯಬೇಡಿ ಎಂದು ಸೂಚಿಸಿದರು.

ಸಭೆಯಲ್ಲಿ ತಾಪಂ ಆಡಳಿತಾಧಿಕಾರಿಯೂ ಆದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ತಾಪಂ ಇಓ ಲೋಕೇಶ್‌ಮೂರ್ತಿ, ಸುರೇಂದ್ರ ಹಾಜರಿದ್ದರು.

ಒಂದನೇ ಪುಟದಿಂದ

ಕೆ.ಮರೀಗೌಡ ರಾಜೀನಾಮೆ?

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ಮರೀಗೌಡರು ಮುಂದಾಗಿದ್ದಾರೆ ಎಂಬ ಸುದ್ದಿಗಳು ಇಂದು ಬಿತ್ತರವಾದವು.

ಆದರೆ ಮರೀಗೌಡರು ಇಂದು ಪ್ರಾಧಿಕಾರದ ಕಚೇರಿಗೆ ಆಗಮಿಸದೇ, ತಾವು ಪ್ರಕರಣವೊಂದರ ಕುರಿತು ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ಎಂದು ಮಾಹಿತಿ ನೀಡಿ ಯಾರನ್ನೂ ಭೇಟಿಯಾಗದೇ ತಮ್ಮ ನಿವಾಸದಲ್ಲೇ ರಾತ್ರಿವರೆಗೂ ಕಾಲ ಕಳೆದರು ಎಂದು ಆಪ್ತ ವಲಯ ತಿಳಿಸಿದೆ. ನಿವೇಶನ ಹಂಚಿಕೆ ಹಗರಣ ಬಯಲಾಗುತ್ತಿದ್ದಂತೆಯೇ ಸಿಎಂ ಸಿದ್ದರಾಮಯ್ಯ ಅವರು ಮರೀಗೌಡರನ್ನು ಕರೆಸಿಕೊಂಡು ಅಸಮಾಧಾನದಿಂದ ಏರು ಧನಿಯಲ್ಲಿ ಗದರಿಸಿ, ಮುಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡು ಎಂದಿದ್ದರು. ನಂತರ ಅದು ನನ್ನ ಅವಧಿಯಲ್ಲಿ ಆಗಿಲ್ಲ. ಕಳೆದ ಬಿಜೆಪಿ ಸರ್ಕಾರದಲ್ಲಿ ಹಂಚಿಕೆಯಾಗಿವೆ ಎಂದು ಹೇಳಿದ ನಂತರ ಸಮಾಧಾನಗೊಂಡ ಮುಖ್ಯಮಂತ್ರಿಗಳು, 'ಸರಿ, ಹೋಗು', ಮುಂದೆ ಚೆನ್ನಾಗಿ ಕೆಲಸ ಮಾಡು ಎಂದು ಸೂಚಿಸಿದ್ದರು ಎಂದು ಮರೀಗೌಡ ತಮ್ಮ ಸ್ನೇಹಿತರ ಬಳಿ ಹೇಳಿಕೊಂಡಿದ್ದಾರೆ.

ನಂತರದ ವಿದ್ಯಮಾನಗಳಲ್ಲಿ 14 ನಿವೇಶನಗಳ ಸಂಬಂಧ ಸಿದ್ದರಾಮಯ್ಯ, ಪತ್ನಿ ಎಂ.ಬಿ.ಪಾರ್ವತಿ ವಿರುದ್ಧವೇ ತನಿಖೆಗೆ ಹೈಕೋರ್ಟ್ ಮತ್ತು ಜನಪ್ರತಿನಿಧಿಗಳ ನ್ಯಾಯಾಲಯವು ಅನುಮತಿ ನೀಡಿ ಲೋಕಾಯುಕ್ತ ಮೈಸೂರು ಎಸ್ಪಿ ಎಫ್‌ಐಆರ್ ದಾಖಲಿಸಿದ ಬಳಿಕ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳಿಗೆ ರಾಜೀನಾಮೆ ಪತ್ರ ನೀಡಿ, 'ನೀವು ಯಾವಾಗ ಬೇಕಿದ್ದರೂ ಪಡೆದುಕೊಳ್ಳಿ' ಎಂದು ಹೇಳಿ ಬಂದಿದ್ದೇನೆ ಎಂದು ಮರೀಗೌಡರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ನಾನು ನಂಬಿದ್ದುದು, ನಂಬಿರುವುದು ಹಾಗೂ ಮುಂದೆ ನಂಬುವುದೂ ಸಿದ್ದರಾಮಯ್ಯರನ್ನು ಮಾತ್ರ, ಅವರೇ ಮುಡಾ ವಿಷಯದಲ್ಲಿ ನನ್ನ ಕಾರ್ಯವೈಖರಿ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಮೇಲೆ ನನಗೆ ಆ ಹುದ್ದೆಯೇ ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದೇನೆ ಎಂದು ಮರೀಗೌಡರು ತಮ್ಮ ಮನದಾಳದ ನೋವನ್ನು ತೋಡಿಕೊಂಡಿದ್ದಾರೆ. ನನ್ನ ಪತ್ನಿ ಮನೆಯ ಆಸ್ತಿ, ನನ್ನ ತಂದೆ ಮಾಡಿದ ಆಸ್ತಿಯೇ ಇರುವಾಗ ಮುಡಾದಲ್ಲಿ ಹಣ ಮಾಡುವ ಅಗತ್ಯ ನನಗಿಲ್ಲ. ಪಕ್ಷದಲ್ಲಿ ಸಾಹೇಬರೊಂದಿಗೆ ಹಲವು ವರ್ಷಗಳಿಂದ ರಾಜಕೀಯದಲ್ಲಿದ್ದ ಕಾರಣ ಒಂದು ಹುದ್ದೆ ಬಯಸಿ, ಅದಕ್ಕೆ ನ್ಯಾಯ ಒದಗಿಸಬೇಕೆಂಬ ಬಯಕೆ ನನ್ನದಾಗಿತ್ತು. ಈ ಸ್ಥಾನದಿಂದ ಸಿದ್ದರಾಮಯ್ಯ ಸರ್ಕಾರಕ್ಕೆ ಮುಜುಗರವಾಗುವುದಾದರೆ, ನಾನು ಮುಡಾ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲಾರೆ ಎಂದು ಮರೀಗೌಡರು ತಮ್ಮ ಗೆಳೆಯರ ಬಳಿ ಹೇಳಿಕೊಂಡಿದ್ದಾರೆ.

ಮುಡಾ ಆಯುಕ್ತರು ಸಭೆ ಗಮನಕ್ಕೂ ತಾರದೇ ಶೇ.50:50ರ ಅನುಪಾತದಡಿ ಮನಸೋ ಇಚ್ಛೆ ನಿವೇಶನಗಳನ್ನು ಮಂಜೂರು ಮಾಡುತ್ತಿದ್ದರಿಂದ ಪ್ರಾಧಿಕಾರದ ನಷ್ಟ ತಡೆಯಲು ಅಧ್ಯಕ್ಷನಾಗಿ ನಾನು ಟಿಪ್ಪಣಿ ಬರೆದದ್ದೇ ನನಗೆ ಮುಳುವಾಯಿತು. ಟಿಪ್ಪಣಿ ಬರೆಯದೇ ಅಡ್ಜಸ್ಟ್ ಮಾಡಿಕೊಂಡಿದ್ದರೆ, ಈ ಹಗರಣವೂ ಹೊರಗೆ ಬರುತ್ತಿರಲಿಲ್ಲ, ಹಣವೂ ಬರುತ್ತಿತ್ತು. ಮುಡಾ ಆಸ್ತಿ ರಕ್ಷಿಸಲು ಮುಂದಾಗಿದ್ದಕ್ಕೆ ನನಗೆ ಈ ಬಹುಮಾನ ಬಂದಿದೆ ಎಂದು ಅವರು ನೋವು ತೋಡಿಕೊಂಡಿದ್ದಾರೆ ಎನ್ನಲಾಗಿದೆ. ನಮ್ಮ ಪಕ್ಷದ ಕೆಲವರೂ ಸಹ ವಿಮಾನ ನಿಲ್ದಾಣದಲ್ಲಿ ಸಿಎಂ ಎದುರು ಆರೋಪ ಮಾಡಿ ರಾಜೀನಾಮೆಗೆ ಒತ್ತಾಯಿಸಿದ್ದು, ನನ್ನ ಮನಸ್ಸಿಗೆ ತೀವ್ರ ನೋವಾಗಿದೆ. ನನಗೆ ದೊರೆತ ಅಲ್ಪ ಅವಧಿಯಲ್ಲಿ ಮನ ಸಾಕ್ಷಿಗನುಗುಣವಾಗಿ ಕೆಲಸ ಮಾಡಿದ್ದೇನೆ ಎಂಬ ತೃಪ್ತಿ ಇದೆ ಎಂದು ಮರೀಗೌಡರು ನೊಂದು ನುಡಿದಿದ್ದಾರೆ. ಈ ಸಂಬಂಧ ಪ್ರತಿಕ್ರಿಯೆಗಾಗಿ ಮರೀಗೌಡರನ್ನು 'ಮೈಸೂರು ಮಿತ್ರ' ಸಂಪರ್ಕಿಸಲು ಪ್ರಯತ್ನಿಸಿದ್ದು, ಅವರು ಸಂಪರ್ಕಕ್ಕೆ ಸಿಗಲಿಲ್ಲ

ಕಾನೂನು ತಿದ್ದುಪಡಿಗೆ ಚಿಂತನೆ

ಸೇವನೆ ಹಾಗೂ ಮಾದಕವಸ್ತುಗಳ ವ್ಯಸನಕ್ಕೆ ಒಳಗಾಗಬಾರದು ಎಂದರು. ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಧಾರವಾಡಗಳಲ್ಲಿ ಡ್ರಗ್ಸ್ ಹಾವಳಿ ಹೆಚ್ಚಿದ್ದು, ಇದನ್ನು ನಿಗ್ರಹಿಸಲು ಸರ್ಕಾರ ಅನೇಕ ಕಾನೂನುಗಳನ್ನು ರಚಿಸಿದೆ. ಯುವಕ ಯುವತಿಯರು ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿದ್ದಲ್ಲಿ, ಕೂಡಲೇ ದುಶ್ಚಟಗಳನ್ನು ನಿಲ್ಲಿಸಬೇಕೆಂದು ಕರೆ ನೀಡಿದರು. ರಾಜ್ಯದ ಎಲ್ಲ ಯುವ ಸಮುದಾಯಗಳು ದುಶ್ಚಟಗಳಿಂದ ದೂರವಾಗುವಂತೆ ಮುಖ್ಯಮಂತ್ರಿಗಳು ಮನವಿ ಮಾಡಿದರು. ರಾಜ್ಯದಲ್ಲಿ ಉತ್ತಮ ಮಳೆ ಬೆಳೆಯಾಗಿದ್ದು, ರೈತರ ಮೊಗದಲ್ಲಿ ಸಂತಸ ಮೂಡಿದಂತೆ, ದುಶ್ಚಟಗಳಿಗೆ ಬಲಿಯಾಗದೇ ಆರೋಗ್ಯಕರ ಜೀವನ ನಡೆಸಿ ಯುವ ಸಮುದಾಯದವರಲ್ಲೂ ಸಂತಸ ಮೂಡುವಂತಾಗಲಿ ಎಂದು ಹಾರೈಸಿದರು.

ನ.13ಕ್ಕೆ ಉಪ ಚುನಾವಣೆ

ಹಣವನ್ನು ಹರಿಸಿದ್ದಲ್ಲದೆ, ಬೃಹತ್ ಸಮಾವೇಶಗಳನ್ನು ನಡೆಸಿದೆ. ಚನ್ನಪಟ್ಟಣದಿಂದ ವಿಧಾನಸಭೆಗೆ ಆಯ್ಕೆಗೊಂಡಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಈ ಕ್ಷೇತ್ರ ಪ್ರತಿಷ್ಠೆಯಾಗಿದೆ. ಈ ಕ್ಷೇತ್ರ ತಮಗೂ ಬೇಕೆಂದು ಬಿಜೆಪಿ ಒಂದು ವರ್ಗದ ನಾಯಕರು ಪಟ್ಟು ಹಿಡಿದಿದ್ದಾರೆ. ಆದರೆ ಎನ್‌ಡಿಎ ಮೈತ್ರಿ ಕೂಟದ ಪಾಲುದಾರಿಕೆ ಜೆಡಿಎಸ್‌ಗೆ ಚನ್ನಪಟ್ಟಣ ಕ್ಷೇತ್ರ ಬಿಟ್ಟು ಕೊಟ್ಟಿದ್ದಾರೆ. ಉಳಿದ ಶಿಗ್ಗಾಂವಿ ಮತ್ತು ಸಂಡೂರು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿ ಕಣಕ್ಕಿಳಿಯಲಿದ್ದಾರೆ. ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ.

ಪೊಲೀಸರಿಂದ ಸಾಕ್ಷ್ಯ, ದಾಖಲೆ ನಾಶ

ಬೆಂಗಳೂರಿನ ಲೋಕಾಯುಕ್ತ ಪ್ರಧಾನ ಕಚೇರಿಗೆ ಸಲ್ಲಿಸಿತ್ತು. ಆದರೆ ಲೋಕಾಯುಕ್ತರು ಉದ್ದೇಶ ಪೂರ್ವಕವಾಗಿ 28 ದಿನ ವಿಳಂಬವಾಗಿ ಸರ್ಚ್ ವಾರೆಂಟ್ ನೀಡಲಾಯಿತು. ಇದೇ ವೇಳೆ ಈ ವಿಚಾರವು ಲೋಕಾಯುಕ್ತ ಅಧಿಕಾರಿಗಳಿಂದಲೇ ಸರ್ಕಾರಕ್ಕೆ ಮಾಹಿತಿ ಸೋರಿಕೆಯಾಯಿತು ಎಂದು ಗಂಗರಾಜು ಆರೋಪಿಸಿದ್ದಾರೆ.

ಈ ವಿಚಾರ ತಿಳಿದೊಡನೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ಅಧಿಕಾರಿಗಳ ತಂಡವೊಂದನ್ನು ಮೈಸೂರಿಗೆ ಕಳುಹಿಸಿ ಮುಡಾದಲ್ಲಿದ್ದ 140ಕ್ಕೂ ಹೆಚ್ಚು ಕಡತಗಳನ್ನು ಬೆಂಗಳೂರಿಗೆ ತರಿಸಿಕೊಂಡರು.

ಅಷ್ಟೇ ಅಲ್ಲದೆ ಸ್ವತಃ ತಾವೇ ಮೈಸೂರಿಗೆ ಬಂದಿದ್ದ ಭೈರತಿ ಸುರೇಶ್ ಕೂಡ ಕೆಲವು ಕಡತವನ್ನು ಹೆಲಿಕಾಪ್ಟರ್‌ನಲ್ಲಿ ಬೆಂಗಳೂರಿಗೆ ಕೊಂಡೊಯ್ದರು ಎಂದು ಗಂಗರಾಜು ದೂರಿದ್ದಾರೆ.

ಈ ಘಟನೆಯ ನಂತರ ಲೋಕಾಯುಕ್ತ ಎಸ್ಪಿ ಸುಜಿತ್ ವರ್ಗಾವಣೆಯಾದರು. ತರುವಾಯ ಲೋಕಾಯುಕ್ತ ಸರ್ಚ್ ವಾರೆಂಟ್ ಹಿಂಪಡೆದಿದೆ. ಇದರಿಂದ ಸರ್ಚ್ ವಾರೆಂಟ್ ಮೂಲ ಕಾರ್ಯಾನುಷ್ಠಾನಗೊಳ್ಳಲೇ ಇಲ್ಲ. ಕಾನೂನು ಬಾಹಿರ ಕ್ರಮಗಳನ್ನು ಮುಚ್ಚಿ ಹಾಕಲು ಔಪಚಾರಿಕವಾಗಿ ಮಾತ್ರ ಸರ್ಚ್ ವಾರೆಂಟ್‌ನ್ನು ಬಳಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಈ ಮೂಲಕ ಅಕ್ರಮ ಎಸಗುವರಿಗೆ ಲೋಕಾಯುಕ್ತ ಪೊಲೀಸರೇ ಸಾಕ್ಷ್ಯ ನಾಶ ಮಾಡಲು, ದಾಖಲೆ ಹಾಳು ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ಅಕ್ರಮದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಕಾನೂನು ಕ್ರಮ ಜರುಗಿಸುವುದನ್ನು ತಡೆಯಲು ಇವರೆ ಸಹಕಾರಿಯಾಗಿದ್ದಾರೆ ಎಂದು ಗಂಗರಾಜು ಆರೋಪ ಮಾಡಿದ್ದಾರೆ.

ಈ ಹಿನ್ನೆಲೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಸಚಿವರ ವಿಶೇಷಾಧಿಕಾರಿ ಮಾರುತಿ ಬಗಲಿ, ಮುಡಾದ ಅಂದಿನ ಆಯುಕ್ತರಾದ ಡಾ.ಡಿ.ಬಿ.ನಟೇಶ್, ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯಪಾಲರಲ್ಲಿ ಮನವಿ ಮಾಡಿದ್ದಾರೆ. ಲೋಕಾಯುಕ್ತ ಅಧಿಕಾರಿಗಳೆ ಈ ಹಗರಣದಲ್ಲಿ ಭಾಗಿಯಾಗಿರುವ ಕಾರಣ ಸಿಬಿಐನಂತಹ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಗಂಗರಾಜು ಆಗ್ರಹಿಸಿದ್ದಾರೆ.

ಪೌರಕಾರ್ಮಿಕ ಬಂಧುಗಳಿಗೆ ಸಿಹಿ, ವಸ್ತ್ರ ವಿತರಣೆ


ಆಯುಧ ಪೂಜೆ ಹಾಗೂ ವಿಜಯದಶಮಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆ ವಾರ್ಡ್ 2ರ ಮಾಜಿ ಸದಸ್ಯೆ ಪ್ರೇಮ ಶಂಕರೇಗೌಡ ಅವರು ಪೌರಕಾರ್ಮಿಕ ಬಂಧುಗಳಿಗೆ ಸಿಹಿ ಹಾಗೂ ವಸ್ತ್ರ ವಿತರಣೆ ಮಾಡಿದರು.

ಒಳಮೀಸಲು ಜಾರಿಗಾಗಿ ಇಂದು ಬೈಕ್ ರ್‍ಯಾಲಿ

ಮೈಸೂರು,ಅ.15(ಪಿಎಂ)–ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ವತಿಯಿಂದ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಅ.16ರಂದು ಮಧ್ಯಾಹ್ನ 12ಕ್ಕೆ ಮೈಸೂರಿನ ಪುರಭವನದ ಆವರಣದಲ್ಲಿ ಪ್ರತಿಭಟನೆ ಸಭೆ ನಡೆಸಿ, ನಂತರ ಇಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮತ್ತು ಬೈಕ್ ರ್‍ಯಾಲಿ ನಡೆಸಲಾಗುವುದು. ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೆಜ್ಜೇನು ದಾಳಿಗೆ ವ್ಯಕ್ತಿ ಸಾವು


ಪೂಣಚ್ಚ

ಗೋಣಿಕೊಪ್ಪ, ಅ.15–ಹೆಜ್ಜೇನು ದಾಳಿಗೆ ವ್ಯಕ್ತಿ ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ನಿಟ್ಟೂರು ಗ್ರಾಮದಲ್ಲಿ ಮಂಗಳವಾರ ನಡೆದಿದೆ. ನಿಟ್ಟೂರು ಕಾರ್ಮಾಡು ಗ್ರಾಮದದ ಕೊಟ್ಟಂಗಡ ಪೂಣಚ್ಚ ಮೃತಪಟ್ಟಿದ್ದು, ಈತ ಸಂಜೆ ಕಾಲಭೈರವ ದೇವಸ್ಥಾನ ರಸ್ತೆಯಲ್ಲಿ ಬಸ್ ಇಳಿದು ನಡೆದುಕೊಂಡು ಹೋಗುತ್ತಿದ್ದಾಗ ಹೆಜ್ಜೇನು ದಾಳಿ ನಡೆಸಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಪೂಣಚ್ಚ ಅವರನ್ನು ಸ್ಥಳೀಯರು ತಕ್ಷಣ ಗೋಣಿಕೊಪ್ಪಲು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಸತ್ಸಂಗದಿಂದ ಉನ್ನತಿ: ಮಂತ್ರಾಲಯದ ಶ್ರೀಗಳು



ಸುತ್ತೂರು, ಅ. 15– ಸತ್ಸಂಗದಿಂದ ಮಾನವನ ಉನ್ನತಿ ಸಾಧ್ಯವಾದರೆ ದುಸ್ಸಂಗದಿಂದ ಅವನತಿಯಾಗುತ್ತದೆ ಎಂದು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಸತ್ಸಂಗದಲ್ಲಿ ಆಶೀರ್ವಚನ ನೀಡುತ್ತಾ ತಿಳಿಸಿದರು.

ಎಲ್ಲೋ ಹುಟ್ಟುವ ನದಿಗಳು ಹರಿಯುವ ಪ್ರದೇಶವನ್ನೆಲ್ಲ ಹಸಿರುಗೊಳಿಸಿ ನಾಡನ್ನೆಲ್ಲಾ ಸಮೃದ್ಧಗೊಳಿಸಿ ಸಾಗರ ಸೇರುತ್ತವೆ. ನದಿಗಳ ನೀರು ಜೀವಸಂಕುಲಕ್ಕೆಲ್ಲಾ ಯಾವುದೇ ಭೇದ ಭಾವವಿಲ್ಲದೆ ಉಪಯೋಗವಾಗುವಂತೆ ಮಠಗಳು ಜನಕಲ್ಯಾಣಕ್ಕೆ ಉಪಯೋಗವಾಗುತ್ತಿವೆ. ಮಠಗಳು ನದಿಗಳಂತೆಯೇ ಎಲ್ಲವನ್ನೂ ಪವಿತ್ರಗೊಳಿಸುತ್ತವೆ. ಎಲ್ಲಾ ಜನರ ಬದುಕನ್ನು ಹಸನುಗೊಳಿಸುವುದೇ ಮಠಗಳ ಗುರಿಯಾಗಿದೆ.

ಮಠಗಳೆಂದರೆ ದೊಡ್ಡ ದೊಡ್ಡ ಕಟ್ಟಡಗಳಷ್ಟೇ ಅಲ್ಲ. ಕಾಲಕಾಲಕ್ಕೆ ತಕ್ಕಂತೆ ಅನ್ನ, ಅಕ್ಷರ, ಆಧ್ಯಾತ್ಮವನ್ನು ಧಾರೆ ಎರೆಯುತ್ತ ಎಲ್ಲರಿಗೂ ಜ್ಞಾನವನ್ನು ನೀಡುತ್ತವೆ. ಈ ಭಾಗದಲ್ಲಿ ಹರಿಯುವ ಕಾವೇರಿ ಮತ್ತು ಕಪಿಲಾ ನದಿಗಳಂತೆ ಶ್ರೀ ಸುತ್ತೂರು ಮಠ ಹಾಗೂ ಶ್ರೀ ರಾಘವೇಂದ್ರ ಸ್ವಾಮಿ ಮಠಗಳು ಸಮೃದ್ಧ ನಾಡನ್ನು ಕಟ್ಟಿ ಬೆಳೆಸುವಲ್ಲಿ ಪರಸ್ಪರ ಒಂದಾಗಿ ಸಾಗುತ್ತಿವೆ ಎಂದು ನುಡಿದರು.


ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಮಂತ್ರಾಲಯದ ಮೂಲ ಬೇರು ನಂಜನಗೂಡಿನಲ್ಲಿದೆ. ಜನರ ಮನಸ್ಸಿನಲ್ಲಿ ಸ್ಥಿರ ಹಾಗೂ ವಿಶೇಷ ವಾದ ಪ್ರಭಾವ ಬೀರಿದಂತವರು ಶ್ರೀ ರಾಘವೇಂದ್ರ ಸ್ವಾಮಿಗಳು. ಧಾರ್ಮಿಕವಾಗಿ ತನ್ನ ಬದುಕನ್ನ ಸುಧಾರಿಸಿಕೊಳ್ಳಲು ಮನುಷ್ಯ ಪ್ರಯತ್ನಶೀಲನಾಗಬೇಕೆನ್ನುವುದಕ್ಕೆ ಶ್ರೀಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಮಠ ದೊಡ್ಡದಿದ್ದರೂ, ಮಾನವೀಯ ಸಂಬಂಧಗಳನ್ನು ರೂಢಿಸಿಕೊಂಡು ಅತ್ಯಂತ ಸರಳ–ಸಜ್ಜನಿಕೆಯ ರೂಪದಂತಿದ್ದಾರೆ ಎಂದು ನುಡಿದರು.

ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಮಾತನಾಡಿ, ಮರಗಳು ಹೇಗೆ ಬಯಸಿ ಬಂದವರಿಗೆ ನೆರಳು, ಆಶ್ರಯ ನೀಡುತ್ತವೆಯೋ ಹಾಗೆಯೇ ಮಠಗಳು ಸಹ ಯಾವುದೇ ಭೇದ–ಭಾವ ಎಣಿಸದೆ ಎಲ್ಲರನ್ನು ಸಮಾನ ದೃಷ್ಟಿಯಲ್ಲಿ ನೋಡುತ್ತವೆ. ಸುತ್ತೂರು ಮತ್ತು ಮಂತ್ರಾಲಯ ಮಠಗಳು ಜಾತ್ಯಾತೀತವಾಗಿ ಎಲ್ಲರಿಗೂ ಆಶ್ರಯ ನೀಡುತ್ತಿವೆ. ಮರ ಎಂಬ ಪದದಲ್ಲಿ ರ ಅಕ್ಷರದ ಒಳಗೆ ಒಂದು ಚುಕ್ಕೆ ಹಾಕಿದರೆ, ಮಠ ಎಂದಾಗುತ್ತದೆ. ಮಠಕ್ಕೆ ನಾಯಕತ್ವ ಕೊಡುವಂಥದ್ದು ಗುರುತರ ಜವಾಬ್ದಾರಿ. ಮಠಗಳಿಗೆ ಘನತೆ ಗೌರವ, ಸಂಪ್ರದಾಯವನ್ನು ಎತ್ತರಿಸಿದಂತವರು ಈ ಪೀಠದ್ವಯರು. ಸುತ್ತೂರಿಗೆ ಬಂದರೆ ನನಗೆ ತವರಿಗೆ ಬಂದಂಥಾಗುತ್ತದೆ. ಮಾನವೀಯ ಮೌಲ್ಯಗಳನ್ನು ಮೆರೆಯುವ ಈ ಮಠಗಳು ಉದಾತ್ತತೆಯನ್ನು ಅನುಸರಿಸುತ್ತಿವೆ. ಸಮಾಜದ ಕಣ್ತೆರೆಸುವ ಮಹತ್ತರ ಕಾರ್ಯ ಇಲ್ಲಿ ನಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಸುತ್ತೂರಿನ ಉಚಿತ ವಸತಿ ಶಾಲೆಯಲ್ಲಿ ವಿವಿಧ ವಿಷಯಗಳಲ್ಲಿ ವಿಶೇಷ ಸಾಧನೆ ಮಾಡಿದ 56 ವಿದ್ಯಾರ್ಥಿಗಳಿಗೆ ಮಠದ ಹಳೇ ವಿದ್ಯಾರ್ಥಿಗಳೂ ಆದ ಡಾ.ಹೆಚ್.ಎಸ್. ರಾಘವೇಂದ್ರರಾವ್ ಅವರು ನೀಡಿದ ಪ್ರತಿಭಾ ಪುರಸ್ಕಾರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಂತ್ರಾಲಯ, ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಆಡಳಿತ ವರ್ಗ, ಅಧಿಕಾರಿಗಳು, ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ನಿವೃತ್ತ ಪ್ರಾಂಶುಪಾಲರು ಹಾಗೂ ಖ್ಯಾತ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಮ.ಗು. ಬಸವಣ್ಣ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪಟ್ಟಿ ಮಂಡಿಸಿದರು. ಜಿ.ಎಲ್.ತ್ರಿಪುರಾಂತಕ ಕಾರ್ಯಕ್ರಮ ನಿರೂಪಿಸಿ, ವಂದನೆ ಸಲ್ಲಿಸಿದರು.

ಹುಟ್ಟುಹಬ್ಬ ಆಚರಣೆ...


ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀಕಂಠಯ್ಯ ಅವರು ತಮ್ಮ ತಾಯಿ, ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯ ಅವರ ಸಮ್ಮುಖದಲ್ಲಿ ಕೇಕ್‌ಕತ್ತರಿಸಿ ತಿನ್ನಿಸುವ ಮೂಲಕ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು. ಈ ವೇಳೆ ಪತ್ನಿ ಗೀತಾ ರವೀಂದ್ರ, ಮಾಜಿ ಜಿ.ಪಂ ಸದಸ್ಯ ಮರಿಗೌಡ, ಜೆಡಿಎಸ್ ತಾಲೂಕು ಯುವ ಘಟಕದ ಅಧ್ಯಕ್ಷ ಕಡತನಾಳು ಸಂಜಯ್, ಅರಕೆರೆ ಕಿಶೋರ್, ಗೌತಮ್ ಮರಿಗೌಡ, ಮಜ್ಜಿಗೆಪುರ ಭರತ್, ಕೆಆರ್‌ಎಸ್ ವಿಜಯ್ ಕುಮಾರ್, ಮಾಜಿ ಗ್ರಾಪಂ ಅಧ್ಯಕ್ಷ ಬಿ.ವಿ.ಲೋಕೇಶ್, ಜೆಡಿಎಸ್ ತಾಲೂಕು ಅಧ್ಯಕ್ಷ ದಶರಥ ಸೇರಿದಂತೆ ನೂರಾರು ಅಭಿಮಾನಿಗಳು ಉಪಸ್ಥಿತರಿದ್ದರು.

ನಾಳೆ ತಲಕಾವೇರಿಯಲ್ಲಿ ತೀರ್ಥೋದ್ಭವ



ಬೆಳಗ್ಗೆ 7.40ಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ತೀರ್ಥ ಕುಂಡಿಕೆಯಿಂದ ಕಾವೇರಿ ಸ್ವರೂಪಿಣಿ ದರ್ಶನ

ಮಳೆ ಸಾಧ್ಯತೆ

ಜಿಲ್ಲೆಯಲ್ಲಿ ಈಗಾಗಲೇ ದಟ್ಟವಾದ ಕಾರ್ಮೋಡ ಕವಿದ ವಾತಾವರಣವಿದ್ದು, ಕೆಲ ಕಡೆಗಳಲ್ಲಿ ಚದುರಿದಂತೆ ಮಳೆಯಾಗಿದೆ. ಮಡಿಕೇರಿ, ಭಾಗಮಂಡಲ, ತಲಕಾವೇರಿ ವ್ಯಾಪ್ತಿಯಲ್ಲೂ ಮಂಗಳವಾರ ತುಂತುರು ಮಳೆಯಾಗಿದೆ. ತಲಕಾವೇರಿಯಲ್ಲಿ ದಟ್ಟವಾಗಿ ಮಂಜು ಕವಿದ ವಾತಾವರಣವಿದ್ದು, ತೀರ್ಥೋದ್ಭವ ವೇಳೆ ಮಳೆಯಾಗುವ ಲಕ್ಷಣ ಕಂಡು ಬರುತ್ತಿವೆ.

ತಲಕಾವೇರಿ ಕ್ಷೇತ್ರದಲ್ಲಿ ಮಳೆಯಾಗುವ ಲಕ್ಷಣ ಹಿನ್ನೆಲೆಯಲ್ಲಿ ಶಾಮಿಯಾನ ಅಳವಡಿಸಿರುವುದು.

3 ಕಡೆ ವಾಹನ ನಿಲುಗಡೆ

ಈ ಬಾರಿಯ ಪವಿತ್ರ ಕಾವೇರಿ ತೀರ್ಥೋದ್ಭವಕ್ಕೆ ಜಿಲ್ಲಾಡಳಿತ ವತಿಯಿಂದ ಸರ್ಕಾರದ ನಿರ್ದೇಶನದಂತೆ ಎಲ್ಲಾ ತಯಾರಿ ಮಾಡಲಾಗುತ್ತಿದೆ. 1 ತಿಂಗಳ ಕಾಲ ಜಾತ್ರೆ ವಾತಾವರಣ ಇರುವ ಕಾರಣ 80 ರಿಂದ 1 ಲಕ್ಷ ಭಕ್ತರು ಕ್ಷೇತ್ರಕ್ಕೆ ಆಗಮಿಸುವ ನಿರೀಕ್ಷೆ ಹೊಂದಲಾಗಿದೆ. ಭಕ್ತರ ಅನುಕೂಲಕ್ಕಾಗಿ 15 ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಒದಗಿಸಲು ನಿಗಮಕ್ಕೆ ಮನವಿ ಮಾಡಲಾಗಿದ್ದು, ಭಾಗಮಂಡಲದಿಂದ ತಲಕಾವೇರಿಗೆ ಸಂಚಾರ ಸೇವೆ ಒದಗಿಸಲಿವೆ. ಕ್ಷೇತ್ರಕ್ಕೆ ಆಗಮಿಸುವ ಭಕ್ತರ ವಾಹನಗಳ ನಿಲುಗಡೆಗೆ 3 ಕಡೆ ವ್ಯವಸ್ಥೆ ಮಾಡಲಾಗಿದೆ.

-ಆರ್.ಐಶ್ವರ್ಯ, ಅಪರ ಜಿಲ್ಲಾಧಿಕಾರಿ



ತಲಕಾವೇರಿ ಕ್ಷೇತ್ರದ ತೀರ್ಥ ಕುಂಡಿಕೆಗೆ ಬೆಳ್ಳಿ ಆಭರಣ ಹಾಗೂ ಹೂವಿನ ಅಲಂಕಾರ ಮಾಡಿರುವುದು.

ಅ.18ರಂದು ಮೈಸೂರಿನಲ್ಲಿ ತೀರ್ಥ ವಿತರಣೆ

ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಕೊಡಗು ಗೌಡ ಸಮಾಜದಲ್ಲಿ ಅ.18 ಬೆಳಗ್ಗೆ 10 ಗಂಟೆಗೆ ಕಾವೇರಿ ಮಾತೆ ಪೂಜಾ ಕಾರ್ಯಕ್ರಮ ಹಾಗೂ ಕಾವೇರಿ ತೀರ್ಥ ಪ್ರಸಾದ ವಿತರಿಸಲಾಗುವುದು. ಪೂಜಾ ಕಾರ್ಯಕ್ರಮದಲ್ಲಿ ಸಮಾಜದರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತೀರ್ಥ ಪ್ರಸಾದ ಸ್ವೀಕರಿಸಬೇಕು ಎಂದು ಮೈಸೂರಿನ ಕೊಡಗುಗೌಡ ಸಮಾಜದ ಕಾರ್ಯದರ್ಶಿ ಪೊನ್ನೇಟಿ ನಂದ ಮನವಿ ಮಾಡಿದ್ದಾರೆ.

ಮಡಿಕೇರಿ, ಅ.15–ಪೌರಾಣಿಕ ಹಿನ್ನೆಲೆಯ ತಲಕಾವೇರಿ ಕ್ಷೇತ್ರದ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವಕ್ಕೆ ಪುಣ್ಯ ಕ್ಷೇತ್ರ ಸಿದ್ಧಗೊಂಡಿದ್ದು, ಅ.17ರ ಬೆಳಗ್ಗೆ 7.40ಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಪವಿತ್ರ ತೀರ್ಥ ಕುಂಡಿಕೆಯಿಂದ ಕಾವೇರಿ ಮಾತೆ ತೀರ್ಥ ಸ್ವರೂಪಿಣಿಯಾಗಿ ಆವಿರ್ಭವಿಸುವ ಮೂಲಕ ಭಕ್ತರಿಗೆ ದರ್ಶನ ನೀಡಲಿದ್ದಾಳೆ.

ಈ ಹಿನ್ನೆಲೆಯಲ್ಲಿ ಪವಿತ್ರ ತೀರ್ಥ ಕುಂಡಿಕೆಗೆ ಬೆಳ್ಳಿ ಆಭರಣ ಅಲಂಕಾರ ಮಾಡಲಾಗಿದ್ದು, ಜೊತೆಗೆ ಬಣ್ಣ ಬಣ್ಣದ ಹೂವಿನ ಶೃಂಗಾರ ಮಾಡಲಾಗಿದೆ. ಮಳೆ ಮೋಡ ಹಿನ್ನೆಲೆಯಲ್ಲಿ ದೇವಾಲಯ ಆವರಣದಲ್ಲಿ ಭಕ್ತರ ಅನುಕೂಲಕ್ಕಾಗಿ ಪೆಂಡಾಲ್‌ಗಳನ್ನು ಅಳವಡಿಸಲಾಗಿದೆ. ತೀರ್ಥೋದ್ಭವವನ್ನು ಎಲ್ಲರಿಗೂ ವೀಕ್ಷಿಸಲು ಅನುಕೂಲ ಮಾಡಿ ಕೊಡುವ ನಿಟ್ಟಿನಲ್ಲಿ ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗುತ್ತಿದೆ. ಭಾಗಮಂಡಲ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ, ಪಿಂಡ ಪ್ರದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಕಾವೇರಿ ಜಾತ್ರೆ ಅಂಗವಾಗಿ ಭಾಗಮಂಡಲದ ಭಗಂಡೇಶ್ವರ ದೇವಾಲಯ ಮತ್ತು ತಲಕಾವೇರಿ ಕ್ಷೇತ್ರಕ್ಕೆ ವಿದ್ಯುತ್ ಅಲಂಕಾರ ಮಾಡಲಾಗಿದೆ.

ಗುರುವಾರ ಬೆಳಗ್ಗೆ ತೀರ್ಥೋದ್ಭವ ಘಟಿಸುವ ಹಿನ್ನೆಲೆಯಲ್ಲಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರತಿವರ್ಷದಂತೆ ಈ ಬಾರಿಯೂ ಕುಂಡಿಕೆ ಮತ್ತು ಕೊಳದ ಸುತ್ತ ಭಕ್ತರ ನೂಕುನುಗ್ಗಲು ನಿಯಂತ್ರಣಕ್ಕೆ ಬ್ಯಾರಿಕೇಡ್ ಅಳವಡಿಸಲಾಗುತ್ತಿದೆ. ಈ ಬಾರಿ ಬೆಳಗ್ಗಿನ ವೇಳೆ ತೀರ್ಥೋದ್ಭವ ಆಗುತ್ತಿರುವ ಕಾರಣ ಹೆಚ್ಚಿನ ಭಕ್ತರು ಕ್ಷೇತ್ರಕ್ಕೆ ಆಗಮಿಸುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ದೇವಾಲಯ ಪ್ರವೇಶ ದ್ವಾರದಿಂದಲೇ ಭಕ್ತರನ್ನು ನಿಯಂತ್ರಿಸಲು ಬ್ಯಾರಿಕೇಡ್ ಅಳವಡಿಸಿ, ಪ್ರತ್ಯೇಕವಾಗಿ ಆಗಮನ ಮತ್ತು ನಿರ್ಗಮನದ ಮಾರ್ಗ ಮಾಡಲಾಗಿದೆ.

ಭಾಗಮಂಡಲದಿಂದ ತಲಕಾವೇರಿವರೆಗಿನ ರಸ್ತೆ ದುರಸ್ತಿ ಕಾರ್ಯ ನಡೆಸಲಾಗಿದ್ದು, ವಿದ್ಯುತ್ ವ್ಯವಸ್ಥೆ ಹಾಗೂ ವಾಹನಗಳಿಗೆ ತಲಕಾವೇರಿ ಕೆಳಭಾಗದಲ್ಲಿ ಪಾರ್ಕಿಂಗ್ ಕಲ್ಪಿಸಲಾಗಿದೆ. ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಸಂಚಾರ ಪೊಲೀಸರ ಸಹಿತ ಕಾನೂನು ಸುವ್ಯವಸ್ಥೆ ಕಾಪಾಡಲು ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ ತಲಕಾವೇರಿಯಲ್ಲಿ ಕೊಡಗು ಏಕೀಕರಣ ರಂಗದ ಪ್ರಮುಖರು ಅನ್ನದಾನ ವ್ಯವಸ್ಥೆ ಕಲ್ಪಿಸಿದ್ದು, ಭಕ್ತರಿಗೆ ಬೆಳಗ್ಗಿನ ಉಪಹಾರ ಹಾಗೂ ಮಧ್ಯಾಹ್ನದ ಅನ್ನದಾನ ವ್ಯವಸ್ಥೆ ಮಾಡಲಾಗಿದೆ.

ವೆಸ್ಟ್ ನೆಮ್ಮೆಲೆಯಲ್ಲಿ ಹುಲಿ ಸೆರೆ ಕಾರ್ಯಾಚರಣೆ ಸ್ಥಗಿತ

ಮಡಿಕೇರಿ, ಅ.15– ಶ್ರೀಮಂಗಲ ಹೋಬಳಿಯ ವೆಸ್ಟ್ ನೆಮ್ಮಲೆ ಗ್ರಾಮದಲ್ಲಿ ಜಾನುವಾರುಗಳ ಮೇಲೆ ದಾಳಿ ನಡೆಸಿರುವ ಹುಲಿ ಸೆರೆ ಕಾರ್ಯಾಚರಣೆಯನ್ನು ಅರಣ್ಯ ಇಲಾಖೆ ಮಂಗಳವಾರ ಸ್ಥಗಿತಗೊಳಿಸಿದೆ.

ಜಾನುವಾರುಗಳ ಮೇಲೆ ದಾಳಿ ನಡೆಸಿದ ಸ್ಥಳ ಹಾಗೂ ಬೀರುಗ ಗ್ರಾಮದ ಪಾಚಿಬೇಲ್ ಮೂಲಕ ಬ್ರಹ್ಮಗಿರಿ ಅಭಯಾರಣ್ಯಕ್ಕೆ ಹುಲಿ ತೆರಳಿರುವ ಸ್ಥಳದಲ್ಲಿ ಪತ್ತೆಯಾಗಿರುವ ಹೆಜ್ಜೆ ಗುರುತು ವೈಜ್ಞಾನಿಕವಾಗಿ ಪರಸ್ಪರ ಹೊಂದಾಣಿಕೆಯಾಗಿದ್ದು, ಹುಲಿ ಕಾಡಿಗೆ ಮರಳಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಸಾಕಾನೆಗಳು, ಕ್ಷಿಪ್ರ ಕಾರ್ಯಪಡೆ, ಕಾಡಾನೆ ಟಾಸ್ಕ್‌ಫೋರ್ಸ್ ತಂಡದಿಂದ ಹುಲಿ ಸೆರೆಗೆ 3 ದಿನಗಳಿಂದ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಆದರೆ, ಹುಲಿ ಕಾಡಿಗೆ ಮರಳಿರುವುದರಿಂದ ಮಂಗಳವಾರ ಕಾರ್ಯಾಚರಣೆ ಸ್ಥಗಿತಗೊಳಿಸಿದೆ.

ಶ್ರೀಮಂಗಲ ವನ್ಯಜೀವಿ ವಿಭಾಗದ ವಲಯ ಅರಣ್ಯಾಧಿಕಾರಿ ಅರವಿಂದ್ ನೇತೃತ್ವದ ತಂಡ ಹುಲಿ ಚಲನವಲನದ ಮೇಲೆ ನಿಗಾ ಇಡಲಿದೆ. ಕಳೆದ 2 ತಿಂಗಳಲ್ಲಿ ಶ್ರೀಮಂಗಲ ಹೋಬಳಿ ವ್ಯಾಪ್ತಿಯಲ್ಲಿ 16 ಹಸುಗಳನ್ನು ಹುಲಿ ಕೊಂದುಹಾಕಿದ್ದು, ಹುಲಿ ಸೆರೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ಹುಲಿ ತನ್ನ ಆವಾಸ ಸ್ಥಾನಕ್ಕೆ ಹಿಂತಿರುಗಿರುವುದು ಸಂತಸ ತಂದಿದೆ. ಈ ಮೂಲಕ ಆತಂಕಗೊಂಡಿದ್ದ ಜನರಲ್ಲಿ ಸಮಾಧಾನವಾಗಿದ್ದು, ಮತ್ತೆ ಹುಲಿ ಸಂಚಾರ ಅಥವಾ ಜಾನುವಾರುಗಳ ಮೇಲೆ ದಾಳಿ ಪ್ರಕರಣ ಕಂಡು ಬಂದರೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹುಲಿ ಸೆರೆ ಕಾರ್ಯಾಚರಣೆ ಉಸ್ತುವಾರಿ ವಹಿಸಿದ್ದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ತಿಳಿಸಿದ್ದಾರೆ.



ಹುಲಿ ಸೆರೆ ಕಾರ್ಯಾಚರಣೆಗೆ ಬಳಸಿಕೊಂಡಿದ್ದ ಸಾಕಾನೆ.

ರುದ್ರಭೂಮಿ ನಿರ್ಮಾಣ ವಿರೋಧಿಸಿ ಮನವಿ ಸಲ್ಲಿಕೆ...



ಸತ್ಯನಾರಾಯಣ ದೇವಸ್ಥಾನ ಜಾಗದಲ್ಲಿ ಹಿಂದೂ ರುದ್ರಭೂಮಿ ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಿ ದೇವಸ್ಥಾನ ಆಡಳಿತ ಮಂಡಳಿ ಪ್ರಮುಖರು ಹಾಗೂ ಸ್ಥಳೀಯರು ಪಾದಯಾತ್ರೆ ಮೂಲಕ ಪ್ರತಿಭಟನೆ ನಡೆಸಿ, ನೆಲ್ಯಹುದಿಕೇರಿ ಗ್ರಾಮ ಪಿಡಿಓಗೆ ಮನವಿ ಸಲ್ಲಿಸಿದರು. ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಟಿ.ಜಿ.ಚಂದ್ರಶೇಖರ್, ಉಪಾಧ್ಯಕ್ಷ ಎನ್.ಎಸ್.ವಿಜಯಕುಮಾರ್, ಕಾರ್ಯದರ್ಶಿ ಟಿ.ಜಿ.ವಿನೋದ್, ಸತ್ಯಜಿತ್, ಖಜಾಂಜಿ ಕೆ.ಜಿ.ಸುಪ್ರೀತ್, ದೇವತಕ್ಕ ಟಿ.ಪಿ.ನಂಜಪ್ಪ, ಮುಖ್ಯಸ್ಥ ಟಿ.ಬಿ.ಗಣೇಶ್, ಗ್ರಾಪಂ ಸದಸ್ಯೆ ಸುಜಾತ, ಮಾಜಿ ಸದಸ್ಯ ಯೋಗೇಶ್, ಪ್ರಮುಖರಾದ ಎಚ್.ಎನ್.ಮಾದಪ್ಪ, ಶಿವದಾಸ್, ಶರತ್ ಕುಮಾರ್, ಕೆ.ಸಿ.ಮಾನಸ್, ಜಯಕುಮಾರ್, ನಂದೀಶ, ರಮೇಶ, ಬೋಪಯ್ಯ, ಭಾನುಪ್ರಕಾಶ್ ಇದ್ದರು.

ಕೌಟುಂಬಿಕ ಕಲಹ: ಗೃಹಿಣಿ ಆತ್ಮಹತ್ಯೆ

ಕುಶಾಲನಗರ, ಅ.15–ಕೌಟುಂಬಿಕ ಕಲಹದಿಂದ ಬೇಸತ್ತು ಗೃಹಿಣಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಡ್ಡೆಹೊಸೂರು ಬಳಿಯ ರಸೂಲ್‌ಪುರ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಆಮೆಮನೆ ಪುತ್ರ ರಾಜೇಶ್ ಅವರ ಪತ್ನಿ ತೇಜಸ್ವಿನಿ (30) ಆತ್ಮಹತ್ಯೆ ಮಾಡಿಕೊಂಡಿದ್ದು, ಈಕೆ ನಾಲ್ಕು ದಿನಗಳ ಹಿಂದೆ ಗ್ರಾಮದ ಸ್ವಗೃಹದಲ್ಲಿ ಕೌಟುಂಬಿಕ ಸಂಘರ್ಷದಿಂದ ಬೇಸತ್ತು ವಿಷ ಸೇವಿಸಿದ್ದರು. ಕೂಡಲೇ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಮೃತಪಟ್ಟಿದ್ದಾರೆ. ಈಕೆಗೆ ಪುತ್ರ ಹಾಗೂ ಪುತ್ರಿ ಇದ್ದು, ಪತಿ ರಾಜೇಶ್, ಅತ್ತೆ ಮತ್ತು ಮಾವನ ವಿರುದ್ಧ ವರದಕ್ಷಿಣೆ ಹಾಗೂ ಮಾನಸಿಕ ಕಿರುಕುಳ ಆರೋಪದಡಿ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಅರ್ಥಪೂರ್ಣ ರಾಜ್ಯೋತ್ಸವ ಆಚರಣೆಗೆ ನಿರ್ಧಾರ

ವಿರಾಜಪೇಟೆ, ಅ.15–ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಇಲ್ಲಿನ ತಾಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ರಾಮಚಂದ್ರ ಮಾತನಾಡಿ, ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ರಾಜ್ಯೋತ್ಸವ ಆಚರಣೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಶಾಲಾ ವಿದ್ಯಾರ್ಥಿಗಳಿಗೆ ಕನ್ನಡ ಪೂರಕವಾದ ಸ್ಪರ್ಧಾ ಕಾರ್ಯಕ್ರಮಗಳನ್ನು ರೂಪಿಸಬೇಕು ಹಾಗೂ ಕನ್ನಡಕ್ಕೆ ಹೆಚ್ಚು ಒತ್ತು ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್‌ಗೆ ಸೂಚಿಸಿದರು. ಪೂರ್ವಭಾವಿ ಸಭೆಗೆ ಗೈರಾಗಿದ್ದ ಕಂದಾಯ ಇಲಾಖೆಯ ಎಡಿಎಲ್‌ಆರ್ ಸೇರಿದಂತೆ ಕೆಲ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ ತಹಸೀಲ್ದಾರ್, ಕನ್ನಡ ರಾಜ್ಯೋತ್ಸವದ ಬಗ್ಗೆ ಮೊದಲು ತಿಳಿದುಕೊಳ್ಳಬೇಕು. ಪುರಸಭೆ ವತಿಯಿಂದ ಎಲ್ಲಾ ಮನೆಗಳಲ್ಲಿ ರಾಜ್ಯೋತ್ಸವ ದಿನ ಕನ್ನಡ ಬಾವುಟ ಹಾರಿಸುವಂತೆ ತಿಳಿಸಬೇಕು. ಎಲ್ಲಾ ಅಂಗಡಿ ಮುಂಗ್ಗಟ್ಟುಗಳಲ್ಲಿ ಕನ್ನಡ ನಾಮಫಲಕ ಅಳವಡಿಸಬೇಕು ಎಂದು ತಿಳಿಸಿದರು. ಡಿವೈಎಸ್‌ಪಿ ಮೋಹನ್ ಕುಮಾರ್ ಮಾತನಾಡಿ, ಈ ಬಾರಿ ಕನ್ನಡ ಪುಸ್ತಕ ಮಳಿಗೆಯನ್ನು ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತೆರೆಯುವಂತೆ ಸಭೆಯಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಮನವಿ ಮಾಡಿದರು. ಕನ್ನಡ ವಿಷಯದಲ್ಲಿ 100ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಕನ್ನಡ ಸಾಧಕರನ್ನು ಸನ್ಮಾನಿಸಲು ಅರ್ಹರನ್ನು ಗುರುತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಜೇಶ್ ಪದ್ಮನಾಭ, ಸರ್ಕಾರಿ ಅಭಿಯೋಜಕ ನರೇಂದ್ರ ಕಾಮತ್, ತಾಲೂಕಿನ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ವಿರಾಜಪೇಟೆ ತಾಲೂಕು ಕಚೇರಿ ಸಭಾಂಗಣದಲ್ಲಿ ತಹಸೀಲ್ದಾರ್ ರಾಮಚಂದ್ರ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಪೂರ್ವಭಾವಿ ಸಭೆ ನಡೆಯಿತು.

ಕಾಡಾನೆ ದಾಳಿಗೆ ವ್ಯಕ್ತಿ ಬಲಿ

ಮಡಿಕೇರಿ, ಅ.15–ಕಾಡಾನೆ ದಾಳಿಗೆ ವ್ಯಕ್ತಿ ಬಲಿಯಾಗಿರುವ ಘಟನೆ ಭಾಗಮಂಡಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ. ಚೇರಂಗಾಲ ನಿವಾಸಿ ಮತ್ತಾರಿ ಮನೆ ಕರುಣಾಕರ (34) ಮೃತಪಟ್ಟಿದ್ದು, ಮತ್ತಿಬ್ಬರು ಕಾಡಾನೆಯಿಂದ ತಪ್ಪಿಸಿಕೊಂಡರೆ. ಕರುಣಾಕರ ಮತ್ತು ಮತ್ತಿಬ್ಬರು ಚೇರಂಗಾಲದಿಂದ 1.5 ಕಿಮೀ ದೂರದಲ್ಲಿರುವ ತಲಕಾವೇರಿ ವನ್ಯಧಾಮ ಕಡೆಗೆ ತೆರಳಿದ್ದರು. ಈ ವೇಳೆ ಕಾಡಾನೆ ಏಕಾಏಕಿ ಎದುರಾಗಿದ್ದು, ಕರುಣಾಕರ ಅವರನ್ನು ತುಳಿದು ಸಾಯಿಸಿದೆ. ಮತ್ತಿಬ್ಬರು ತಪ್ಪಿಸಿಕೊಂಡು ಓಡಿ ಹೋಗಿದ್ದಾರೆ.



ಅರಣ್ಯಾಧಿಕಾರಿಗಳು ಹಾಗೂ ಭಾಗಮಂಡಲ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಳಮೀಸಲಾತಿ ಜಾರಿಗಾಗಿ ಬೃಹತ್ ಪಾದಯಾತ್ರೆ

ಚಾಮರಾಜನಗರ, ಅ.15– ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ಮಂಗಳವಾರ ಬೃಹತ್ ಪಾದಯಾತ್ರೆ ನಡೆಸಲಾಯಿತು.

ತಾಲೂಕಿನ ಮಾದಾಪುರದಿಂದ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ ನೇತೃತ್ವದಲ್ಲಿ ಆರಂಭವಾದ ಪಾದಯಾತ್ರೆ ಮಸಗಾಪುರ, ದೊಡ್ಡರಾಯಪೇಟೆ ಕ್ರಾಸ್, ಜಾಲಹಳ್ಳಿ ಹುಂಡಿ, ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಜೋಡಿರಸ್ತೆ ಮಾರ್ಗವಾಗಿ ಜಿಲ್ಲಾಡಳಿತ ಭವನದವರೆಗೆ ನಡೆಯಿತು. ಬಳಿಕ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಲಾಯಿತು. ನಂತರ ಜಿಲ್ಲಾಡಳಿತ ಭವನದ ಮುಂಭಾಗ ಕೆಲಕಾಲ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಎಂ.ಶಿವಮೂರ್ತಿ ಮಾತನಾಡಿ, ಒಳಮೀಸಲಾತಿಗಾಗಿ ಸಮುದಾಯದಿಂದ 30 ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ಮುಖ್ಯಮಂತ್ರಿಗಳು ಮುಂದಿನ ಸಚಿವ ಸಂಪುಟದಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿಗೊಳಿಸಬೇಕು. ರಾಜ್ಯದಲ್ಲಿ ಶತಮಾನಗಳಿಂದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ ಹಾಗೂ ರಾಜಕೀಯವಾಗಿ ತೀರ ಹಿಂದುಳಿದಿದ್ದು, ಇದಕ್ಕಾಗಿ ಕಳೆದ ಮೂರು ದಶಕಗಳಿಂದ ನಿರಂತರ ಹೋರಾಟ, ಚಳವಳಿ, ಉಪವಾಸ ಸತ್ಯಾಗ್ರಹ ಮಾಡಿದ್ದೇವೆ. ಆದರೂ ಸಮಾಜಕ್ಕೆ ನ್ಯಾಯ ಸಿಕ್ಕಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಬಂದ್ ಎಚ್ಚರಿಕೆ: ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಶಿಷ್ಟ 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ಜಾರಿಗೊಳಿಸಿ ಸಮುದಾಯಕ್ಕೆ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೆ ಜಿಲ್ಲೆ ಬಂದ್ ಮಾಡುವುದಾಗಿ ಎಚ್ಚರಿಸಿದರು.

ಪಾದಯಾತ್ರೆಯಲ್ಲಿ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಗೌರವಾಧ್ಯಕ್ಷ ಪಾಳ್ಯ ರಾಚಪ್ಪ, ಜಿಲ್ಲಾ ಮಾದಿಗ ಒಕ್ಕೂಟದ ಮುಖಂಡರಾದ ಕೆಸ್ತೂರು ಮರಪ್ಪ ಸಂತೇಮರಹಳ್ಳಿ ರಾಜು, ಎಸ್.ಬಸವರಾಜು, ಗುರುಲಿಂಗಯ್ಯ, ಎಂ.ಶಿವಕುಮಾರ್, ಕೆ.ಜಗದೀಶ್, ಬಸವರಾಜು, ಕೃಷ್ಣ, ರಾಜೇಶ್, ಸಿದ್ದರಾಜು, ಕುಮಾರ್, ಸಿದ್ದಯ್ಯ, ಚಾಮರಾಜು, ಮಹದೇವ ಇತರರು ಇದ್ದರು.



ಚಾಮರಾಜನಗರದಲ್ಲಿ ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಜಿಲ್ಲಾ ಮಾದಿಗ ಸಂಘಟನೆಗಳ ಒಕ್ಕೂಟದಿಂದ ಪಾದಯಾತ್ರೆ ನಡೆಸಲಾಯಿತು.

ಕಾಲಮಿತಿಯಲ್ಲಿ ಅಭಿವೃದ್ಧಿ ಕಾರ್ಯ ಅನುಷ್ಠಾನಗೊಳಿಸಿ

● ಅಧಿಕಾರಿಗಳಿಗೆ ಜಿಪಂ ಸಿಇಓ ಮೋನಾ ರೋತ್ ಸೂಚನೆ ● ಪ.ಜಾತಿ, ಪಂಗಡ ಉಪಯೋಜನೆ ಪ್ರಗತಿ ಪರಿಶೀಲನಾ ಸಭೆ

ಚಾಮರಾಜನಗರ, ಅ.15– ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆಗಳಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಯೋಜನೆಯಡಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಪರಿಶಿಷ್ಟ ಮತ್ತು ಪಂಗಡಗಳ ಶ್ರೇಯೋಭಿವೃದ್ಧಿಗಾಗಿ ವಿವಿಧ ಇಲಾಖೆ, ನಿಗಮಗಳು ಉಪಯೋಜನೆ ಹಾಗೂ ಗಿರಿಜನ ಕಲ್ಯಾಣ ಕಾರ್ಯಕ್ರಮಗಳಡಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಯೋಜನೆಗಳನ್ನು ಸಕಾಲದಲ್ಲಿ ಅವರಿಗೆ ತಲುಪಿಸಲು ಸಂಬಂಧಪಟ್ಟ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಮುಂದಾಗಬೇಕು. ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶಿಸಿದರು.

ವಿವಿಧ ಇಲಾಖೆಗಳು ಪ.ಜಾತಿ ಮತ್ತು ಪಂಗಡಗಳ ಉಪಯೋಜನೆಗಳಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯ ಅನುದಾನದ ನಿರೀಕ್ಷೆಯಲ್ಲಿವೆ. ಹಲವು ಇಲಾಖೆಗಳಿಗೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಈಗಾಗಲೇ ಅನುದಾನ ಬಿಡುಗಡೆಯಾಗಿದೆ. ರಾಜ್ಯ ಹಾಗೂ ಜಿಲ್ಲಾ ವಲಯವಾರು ಅನುದಾನ ಬಿಡುಗಡೆಯಾಗಿರುವ ಇಲಾಖೆಗಳು ಸಮರ್ಪಕವಾಗಿ ಜನರಿಗೆ ತಲುಪಿಸಿ ನಿಗದಿತ ಗುರಿ ಸಾಧಿಸಬೇಕು. ಯೋಜನೆ ಅನುಷ್ಠಾನದಲ್ಲಿ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಖುದ್ದು ಗಮನ ಹರಿಸಬೇಕು ಎಂದರು.

ಗಂಗಾ ಕಲ್ಯಾಣ ಯೋಜನೆಯನ್ನು ವಿವಿಧ ನಿಗಮಗಳು ಹಾಗೂ ಸಣ್ಣ ನೀರಾವರಿ ಇಲಾಖೆ ಅನುಷ್ಠಾನಗೊಳಿಸುತ್ತಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಶಾಸಕರ ಸಮ್ಮುಖದಲ್ಲಿ ನಡೆಯಲಿದೆ. ಈ ಸಂಬಂಧ ಫಲಾನುಭವಿಗಳ ಆಯ್ಕೆಯಲ್ಲಿ ಗೊಂದಲವಾಗಬಾರದು. ದಾಖಲಾತಿಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಪರಿಶೀಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ಜಂಟಿ ಕೃಷಿ ನಿರ್ದೇಶಕ ಅಬೀದ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಯೋಗಾನಂದ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಯೋಜನೆಯಡಿ ಪ್ರಗತಿ ಪರಿಶೀಲನಾ ಸಭೆ ಜಿಪಂ ಸಿಇಓ ಮೋನಾ ರೋತ್ ಅಧ್ಯಕ್ಷತೆಯಲ್ಲಿ ನಡೆಯಿತು.

> ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಯೋಜನೆಗಳಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಪ್ರಗತಿ ವರದಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು. ಜೊತೆಗೆ ಪ್ರತಿ ತಿಂಗಳು ಮಾಹಿತಿ ಅಪ್‌ಡೇಟ್ ಆಗಬೇಕು.
>
> -ಮುನಿರಾಜು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ

ವಿದ್ಯುತ್ ಸ್ಪರ್ಶ: ದನಗಾಹಿ ಸಾವು

ಚಾಮರಾಜನಗರ, ಅ.15–ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ದನಗಾಹಿ ಮೃತಪಟ್ಟ ಘಟನೆ ತಾಲೂಕಿನ ಬಸವನಪುರ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಗ್ರಾಮದ ಮಾದಪ್ಪ (70) ಮೃತಪಟ್ಟಿದ್ದು, ಈತ ದನಗಳನ್ನು ಮೇಯಿಸಲು ಹೋಗಿದ್ದಾಗ ಮಳೆ ಬಂದಿದೆ. ರಕ್ಷಣೆಗಾಗಿ ಸಮೀಪದಲ್ಲಿದ್ದ ಗ್ರಾಮಕ್ಕೆ ನೀರು ಸರಬರಾಜು ಮಾಡುವ ಪಂಪ್‌ಹೌಸ್ ಬಳಿ ತೆರಳಿದ್ದಾರೆ. ಈ ವೇಳೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪೂರ್ವ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಳೆಗೆ ಮನೆ ಸಂಪೂರ್ಣ ಕುಸಿತ

ಬೇಗೂರು, ಅ.15– ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಸೋಮವಾರ ರಾತ್ರಿ ಸುರಿದ ಜೋರು ಮಳೆಗೆ ರತ್ನಮ್ಮ ಅವರ ಮನೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ರತ್ನಮ್ಮ ಕಡುಬಡವರಾಗಿದ್ದು, ವಾಸಿಸಲು ಮನೆ ಇಲ್ಲದಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ, ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.



ನಕ್ಷತ್ರ ಆಮೆ ಸಾಗಿಸುತ್ತಿದ್ದ ಇಬ್ಬರ ಬಂಧನ

ಕೊಳ್ಳೇಗಾಲ, ಅ.15– ಬೈಕ್‌ನಲ್ಲಿ ನಕ್ಷತ್ರ ಆಮೆ ಸಾಗಿಸುತ್ತಿದ್ದ ಇಬ್ಬರನ್ನು ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕೋಡಿವೂರು ಗ್ರಾಮದ ಕಾಳಪ್ಪ ರಾಮಪ್ಪ ಮತ್ತು ತಮಿಳುನಾಡಿನ ಮಲ್ಲಿಗೆ ಬಾವಿದೊಡ್ಡಿ (ಬೆಂಗಳೂರಿನ ಎಇಸಿಎಸ್ ಬಡಾವಣೆಯಲ್ಲಿ ವಾಸ)ಯ ಮುತ್ತರಾಜು ಬಂಧಿತ ಆರೋಪಿಗಳು. ಈ ಇಬ್ಬರು ಬ್ಯಾಗ್‌ನಲ್ಲಿ ಆಮೆಯನ್ನು ಸಾಗಿಸುತ್ತಿದ್ದರು. ಈ ವೇಳೆ ಶಿವಕಹಳ್ಳಿ ಬಳಿ ಪಿಎಸ್ಐ ವಿಜಯರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ, ಬಸವರಾಜು, ಸ್ವಾಮಿ, ಲತಾ, ಚಾಲಕ ಪ್ರಭಾಕರ್ ದಾಳಿ ನಡೆಸಿದ್ದಾರೆ. ನಂತರ ಆಮೆಯನ್ನು ವಶಕ್ಕೆ ಪಡೆದು, ಇಬ್ಬರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.



ವಶಪಡಿಸಿಕೊಂಡ ಆಮೆ.

ಸಮುದಾಯದಿಂದಲೇ ವಾಲ್ಮೀಕಿ ಪುತ್ಥಳಿಗೆ ಚಾಲನೆ



ಗೋಷ್ಠಿಯಲ್ಲಿ ನಾಯಕರ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಮಾತನಾಡಿದರು.

ಚಾಮರಾಜನಗರ, ಅ.15–ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಜಿಲ್ಲಾಡಳಿತ ನಿರ್ಲಕ್ಷ್ಯವಹಿಸಿರುವ ಕಾರಣದಿಂದ ಜಿಲ್ಲಾಡಳಿತ ಕಾರ್ಯಕ್ರಮವನ್ನು ಬಹಿಷ್ಕರಿಸಿ ಅ.17ರಂದು ಸಮುದಾಯದಿಂದಲೇ ಅದ್ಧೂರಿ ವಾಲ್ಮೀಕಿ ಜಯಂತಿ ಆಚರಣೆ ಹಾಗೂ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗುವುದು ಎಂದು ನಾಯಕರ ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು. ಶ್ರೀನಿವಾಸ ನಾಯಕ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಗರದ ನಾಯಕರ ಸಾರ್ವಜನಿಕ ವಿದ್ಯಾರ್ಥಿನಿಲಯ ಆವರಣದಲ್ಲಿ ಜಿಲ್ಲಾ ಮಟ್ಟದ ನಾಯಕ ಸಮುದಾಯದ ಮುಖಂಡರು ಸಭೆ ಸೇರಿ ಒಕ್ಕೊರಲಿನಿಂದ ನಿರ್ಣಯ ಕೈಗೊಳ್ಳಲಾಗಿದೆ. ಸರ್ಕಾರ, ಜಿಲ್ಲಾಡಳಿತ ನಮ್ಮ ಬೇಡಿಕೆ ಈಡೇರಿಸದ ಕಾರಣ ಸರ್ಕಾರದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಬಹಿಷ್ಕರಿಸಿ, ಜಿಲ್ಲಾ ಕೇಂದ್ರದಲ್ಲಿ ಸಮುದಾಯದಿಂದಲೇ ಅದ್ಧೂರಿಯಾಗಿ ವಾಲ್ಮೀಕಿ ಜಯಂತಿ ಹಾಗೂ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಹದೇವ ನಾಯಕ, ನಗರಸಭಾ ಮಾಜಿ ಸದಸ್ಯ ರಾಜೇಶ ನಾಯಕ, ಜಯಸುಂದರ್, ವಿರಾಟ್ ಶಿವು, ವೆಂಕಟರಮಣ ನಾಯಕ ಹಾಜರಿದ್ದರು.

ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಸಿಎಂ ಒಪ್ಪಿಗೆ



ಸುದ್ದಿಗೋಷ್ಠಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಮಾತನಾಡಿದರು.

ಚಾಮರಾಜನಗರ, ಅ.15–ಜಿಲ್ಲಾ ಕೇಂದ್ರದಲ್ಲಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದು, ತಾವೇ ಆಗಮಿಸಿ ಶಿಲಾನ್ಯಾಸ ನೆರವೇರಿಸುವ ಮೂಲಕ ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ. ಹೀಗಾಗಿ ಸಮುದಾಯದವರು ಅ.17ರಂದು ಜಿಲ್ಲಾಡಳಿತದಿಂದ ಆಯೋಜಿಸಿರುವ ವಾಲ್ಮೀಕಿ ಜಯಂತಿಯಲ್ಲಿ ಭಾಗವಹಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ, ಸಮಾಜ ಕಲ್ಯಾಣ ಸಚಿವರು, ಸಂಸದರು, ಮೂವರು ಶಾಸಕರು ಹಾಗೂ ಮಾಜಿ ಶಾಸಕರ ಪ್ರಯತ್ನದಿಂದ ಜಿಲ್ಲೆಗೆ ಮುಖ್ಯಮಂತ್ರಿಗಳೇ ಆಗಮಿಸಿ ಪುತ್ಥಳಿ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಬಗ್ಗೆ ದಿನಾಂಕವನ್ನು ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಘೋಷಿಸಲಾಗುವುದು ಎಂದರು.

ಈ ಸಂಬಂಧ ವಿಜಯದಶಮಿ ದಿನದಂದು ಮೈಸೂರಿನಲ್ಲಿ ಸಚಿವರಾದ ಕೆ.ವೆಂಕಟೇಶ್, ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶಪ್ರಸಾದ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಒಪ್ಪಿಗೆ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ರಮೇಶ್, ತಾಪಂ ಮಾಜಿ ಉಪಾಧ್ಯಕ್ಷ ಬಂಗಾರನಾಯಕ, ಯಳಂದೂರು ಪಪಂ ಸದಸ್ಯ ಮಹೇಶ್, ಕನ್ನಡ ಜನಪದ ಪರಿಷತ್ ಅಧ್ಯಕ್ಷ ಜ.ಸುರೇಶ್ ನಾಗ್, ಯಳಂದೂರು ಯಜಮಾನ ಕೆ.ರಂಗನಾಥ್, ಮುಖಂಡರಾದ ಅಂಬಳೆ ಸಿದ್ದನಾಯಕ, ಬಂಗಾರನಾಯಕ, ರಾಜಣ್ಣ ಇದ್ದರು.

ಬೀದಿ ನಾಯಿ ಹಿಡಿಯಲು, ವಾಹನಗಳ ವಿಮೆಗೆ ತಲಾ 40 ಲಕ್ಷ ವೆಚ್ಚ

ನಗರಸಭೆ ಆಡಳಿತಾಧಿಕಾರಿ ಅವಧಿಯ ಭ್ರಷ್ಟಾಚಾರ ತನಿಖೆ

ಸಾಮಾನ್ಯ ಸಭೆಯಲ್ಲಿ ಶಾಸಕ ದರ್ಶನ್ ಘೋಷಣೆ



ನಂಜನಗೂಡಿನಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಅ.15– ನಗರಸಭೆ ಆಡಳಿತಾಧಿಕಾರಿ ಅವಧಿಯಲ್ಲಿ ಬೀದಿ ನಾಯಿ ಹಿಡಿಯಲು ಹಾಗೂ ನಗರಸಭೆ ವಾಹನಗಳ ವಿಮೆ ಮಾಡಿಸಲು ತಲಾ 40 ಲಕ್ಷ ರೂ. ವೆಚ್ಚ ಮಾಡಲಾಗಿದ್ದು, ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಈ ಸಂಬಂಧ ತನಿಖೆ ನಡೆಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಗರಸಭೆ ಸಭಾಂಗಣದಲ್ಲಿ ಮಂಗಳವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸದಸ್ಯ ಕಪಿಲೇಶ್ ಮಾತನಾಡಿ, ನಗರ ವ್ಯಾಪ್ತಿಯಲ್ಲಿ ಮನೆ ಹಾಗೂ ಸರಗಳ್ಳತನ ಹೆಚ್ಚುತ್ತಿವೆ. ಹೀಗಾಗಿ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಕ್ರಮ ವಹಿಸಬೇಕು. ಚಾಮರಾಜನಗರ ಸೇರಿದಂತೆ ಇತರ ನಗರಸಭೆ ನಗರ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿದ್ದಾರೆ. ಜನರ ಹಿತದೃಷ್ಟಿಯಿಂದ ಅಳವಡಿಸಲು ಕ್ರಮ ವಹಿಸಬೇಕು. ಆಡಳಿತಾಧಿಕಾರಿಗಳ ಅವಧಿಯಲ್ಲಿ ನಗರದಲ್ಲಿ 200 ರಿಂದ 300 ಬೀದಿ ನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರಚಿಕಿತ್ಸೆ ನಡೆಸಿ ಬಿಡಲಾಗಿದೆ. ಈ ಕಾರ್ಯಕ್ಕೆ 40 ಲಕ್ಷ ವೆಚ್ಚವಾಗಿರುವುದಾಗಿ ತೋರಿಸಲಾಗಿದೆ. ಇದನ್ನು ನೋಡಿದರೆ ನಾವು ನಗರಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ನಾಯಿ ಹಿಡಿಯುವ ಕೆಲಸ ಮಾಡಿದರೆ ಲಾಭ ಎನಿಸುತ್ತಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಅಧಿಕಾರಿಗಳು ಕಳ್ಳ ಲೆಕ್ಕ ತೋರಿಸಿ ಗುಳುಂ ಮಾಡಿದ್ದಾರೆ. ಈ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸದಸ್ಯ ಸಿದ್ದರಾಜು ಮಾತನಾಡಿ, ನಗರಸಭೆ ವಾಹನಗಳ ವಿಮೆ ಮಾಡಿಸಲು 40 ಲಕ್ಷ ಖರ್ಚಾಗಿದೆ ಎಂದು ನಮೂದಿಸಿದ್ದಾರೆ. ಆಡಳಿತಾಧಿಕಾರಿಗಳ ಅವಧಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ಶಾಸಕ ದರ್ಶನ್ ಪ್ರತಿಕ್ರಿಯಿಸಿ ಮಾತನಾಡಿ, ನನಗೂ ಕೂಡ ಈ ರೀತಿಯ ಖರ್ಚು–ವೆಚ್ಚಗಳನ್ನು ಮಾಡಿರುವುದನ್ನು ನೋಡಿ ಆಶ್ಚರ್ಯವಾಗಿದೆ. ಈ ಬಗ್ಗೆ ಅಧ್ಯಕ್ಷರ ಗಮನಕ್ಕೂ ತಂದಿದ್ದೇನೆ. ಅಧಿಕಾರಿಗಳು ಖರ್ಚು ವೆಚ್ಚಗಳ ಬಗ್ಗೆ ಸೂಕ್ತ ಬಿಲ್ ಒದಗಿಸಬೇಕು. ಸದಸ್ಯರ ಆಶಯದಂತೆ ಲೋಕಾಯುಕ್ತದಿಂದ ತನಿಖೆ ನಡೆಸಲಾಗುವುದು ಎಂದರು. ಸದಸ್ಯ ಖಾಲೀದ್ ಅಹಮ್ಮದ್ ಮಾತನಾಡಿ, ನಗರದ ಮುಸ್ಲಿಂ ಬೀದಿಯ ದೊಡ್ಡ ಮೋರಿಗಳಲ್ಲಿ ಹೂಳು ತುಂಬಿಕೊಂಡಿದೆ. ಮಳೆ ಬಂದರೆ ನೀರು ಸರಾಗವಾಗಿ ಹರಿಯದೆ ಮನೆಗಳಿಗೆ ನೀರು ನುಗ್ಗುತ್ತಿದೆ. ಹೀಗಾಗಿ ಹೂಳು ತೆಗೆಸಬೇಕು ಎಂದು ಆಗ್ರಹಿಸಿದರು.

ನಗರಸಭೆ ಆಯುಕ್ತ ನಂಜುಂಡಸ್ವಾಮಿ ಪ್ರತಿಕ್ರಿಯೆ ನೀಡಿ ಮೋರಿಗಳ ಹೂಳು ತೆಗೆಯಲು ನಗರಸಭೆ ಸಿಬ್ಬಂದಿ ತೆರಳಿದಾಗ ಅಲ್ಲಿನ ಜನ ತಡೆ ಒಡ್ಡಿದ್ದಾರೆ. ಮೋರಿಗಳ ಮೇಲೆ ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿರುವುದರಿಂದ ಸಮಸ್ಯೆಯಾಗಿದೆ ಎಂದರು.

ಶಾಸಕ ದರ್ಶನ್ ಸದಸ್ಯರ ಸಮ್ಮುಖದಲ್ಲಿ ಹೂಳು ತೆಗೆಯುವ ಕಾರ್ಯ ನಡೆಸಿ, ಪರಿಹಾರ ಕಂಡುಕೊಳ್ಳಬೇಕು ಎಂದರು. ಸದಸ್ಯೆ ಗಾಯತ್ರಿ ಮಾತನಾಡಿ, ನಗರದ ಬಜಾರ್ ರಸ್ತೆಯಲ್ಲಿ ನಗರಸಭೆ ಮಳಿಗೆಗಳನ್ನು ಬಾಡಿಗೆಗೆ ಪಡೆದಿರುವ ವ್ಯಾಪಾರಿಗಳು ರಸ್ತೆ ಒತ್ತುವರಿ ಮಾಡಿಕೊಂಡಿರುವುದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಕೆಲವರು ಮಳಿಗೆ ಮುಂದೆ ನಿಯಮಬಾಹಿರವಾಗಿ ಗೋಡೆ ನಿರ್ಮಿಸಿದ್ದಾರೆ ತೆರವುಗೊಳಿಸಿ ಎಂದು ಆಗ್ರಹಿಸಿದರು.

ಅಧ್ಯಕ್ಷ ಶ್ರೀಕಂಠಸ್ವಾಮಿ ಹಾಗೂ ಆಯುಕ್ತ ನಂಜುಂಡಸ್ವಾಮಿ ಮಾತನಾಡಿ, ಶೀಘ್ರ ಬಜಾರ್ ರಸ್ತೆಯಲ್ಲಿ ಅನಧಿಕೃತ ಒತ್ತುವರಿ ತೆರವುಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯ ಹೂಡಬೇಕು. ನಗರದ ತುರ್ತು ಸೇವೆಗಳನ್ನು ಸ್ಥಳದಲ್ಲಿದ್ದು ಕ್ರಮ ವಹಿಸಬೇಕಾಗಿರುತ್ತದೆ. ಸದಸ್ಯರು ಕರೆ ಮಾಡಿದಾಗ ಮೈಸೂರಿನಲ್ಲಿ ಇರುವುದಾಗಿ ಉತ್ತರಿಸುವುದು ಸರಿಯಲ್ಲ. ಅಧಿಕಾರಿಗಳು ನಗರದಲ್ಲಿ ವಾಸ್ತವ್ಯವಿದ್ದು ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಶಾಸಕರು ತಾಕೀತು ಮಾಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ರೆಹೆನಾಬಾನು, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಮಹೇಶ್ ಅತ್ತಿಖಾನೆ, ಸಿದ್ದಿಕ್ ಅಹಮ್ಮದ್, ಎನ್.ಎಸ್. ಯೋಗೇಶ್, ಮಹದೇವಮ್ಮ, ವಸಂತಕುಮಾರಿ, ಗಾಯಿತ್ರಿ ಮುರುಗೇಶ್, ಮೀನಾಕ್ಷಿ ನಾಗರಾಜು, ಶ್ವೇತಲಕ್ಷ್ಮಿ, ಕೆ.ಎಂ.ಬಸವರಾಜು, ರಮೇಶ್, ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಎಇಇ ಮಹೇಶ್ ಸೇರಿದಂತೆ ನಗರಸಭಾ ಅಧಿಕಾರಿಗಳು ಉಪಸ್ಥಿತರಿದ್ದರು.

ಹುಣಸೂರಲ್ಲಿ ದೀಕ್ಷೆ ಪ್ರತಿಜ್ಞಾ ದಿನ ಆಚರಣೆ



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಹುಣಸೂರು, ಅ.15– ನಗರದ ಕೋಟೆ ವೃತ್ತದಲ್ಲಿ ಭಾರತೀಯ ಬುದ್ಧ ಸಮುದಾಯ ಹಾಗೂ ಹುಣಸೂರು ಕೃಷ್ಣಮೂರ್ತಿ ವಾದ್ಯಗೋಷ್ಠಿ ಕಲಾವಿದರ ಸಂಘದ ಸಂಯುಕ್ತಾಶ್ರಯದಲ್ಲಿ ಡಾ.ಅಂಬೇಡ್ಕರ್ ಅವರು 1956ರ ಅ.14ರಂದು ಬೌದ್ಧ ಧರ್ಮ ದೀಕ್ಷೆ ಕೈಗೊಂಡ ಸ್ಮರಣಾರ್ಥ ದೀಕ್ಷೆ ಪ್ರತಿಜ್ಞಾ ದಿನ ಆಚರಿಸಲಾಯಿತು.

ಮುಖಂಡ ಆನಂದಸ್ವಾಮಿ ಅರಳಿ ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಂಬೇಡ್ಕರ್ ಅವರು ಹಿಂದೂ ಧರ್ಮ ಬಿಟ್ಟು ಲಕ್ಷಾಂತರ ಅನುಯಾಯಿ ಗಳೊಂದಿಗೆ ನಾಗಪುರದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದ ದಿನವಿದು. ಬುದ್ಧನ ಸಮಾನತೆ, ಮಾನವೀಯತೆ ಹಾಗೂ ವೈಚಾರಿಕತೆಯ ಬೆಳಕು ಭಾರತೀಯ ಸಮಾಜದಲ್ಲಿ ಮನೆಮನೆ ತಲುಪಬೇಕು ಎಂದರು.

ವಕೀಲ ಯೋಗಣ್ಣ ಮಾತನಾಡಿ, ಭಗವಾನ್ ಬುದ್ಧನ ಸಂದೇಶವನ್ನು ಮನೆ ಮನೆಗೆ ಪಸರಿಸುವಂತೆ ಮಾಡೋಣ. ಸಂವಿಧಾನದ ಶಿಸ್ತು ಅಳವಡಿಸಿಕೊಳ್ಳೋಣ ಎಂದರು. ಡೀಡ್ ಸಂಸ್ಥೆಯ ಡಾ.ಎಸ್.ಶ್ರೀಕಾಂತ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ರಾಜು ನಾಯ್ಕರ್, ಸುಂದರೇಶ್, ಚಂದ್ರೇಗೌಡ, ಬುದ್ಧ ಸಮುದಾಯದ ಅಧ್ಯಕ್ಷ ಹನುಮಯ್ಯ ಮಾತನಾಡಿದರು. ಸಿಂಗೇಶ್ ಬುದ್ಧನ ಕುರಿತು ಹಾಡಿದರು. ಇದೇ ವೇಳೆ ಗಣ್ಯರನ್ನು ಸನ್ಮಾನಿಸಲಾಯಿತು. ಮಹೇಶ್, ಗಜೇಂದ್ರ, ದರ್ಶನ್ ಉಪಸ್ಥಿತರಿದ್ದರು.

ಉಪ್ಪಾರ ಸಮುದಾಯ ಭವನದ

ಮುಂದುವರೆದ ಕಾಮಗಾರಿಗೆ 50 ಲಕ್ಷ ಬಿಡುಗಡೆ

ಭಗೀರಥ ಉಪ್ಪಾರ ಜನ ಸೇವಾ ಟ್ರಸ್ಟ್ ಅಧ್ಯಕ್ಷ ಕೇತಹಳ್ಳಿ ಸಿದ್ಧಶೆಟ್ಟಿ



ಸುದ್ದಿಗೋಷ್ಠಿಯಲ್ಲಿ ಭಗೀರಥ ಉಪ್ಪಾರ ಜನಸೇವಾ ಟ್ರಸ್ಟ್ ಅಧ್ಯಕ್ಷ ಕೇತಹಳ್ಳಿ ಸಿದ್ಧಶೆಟ್ಟಿ ಮಾತನಾಡಿದರು.

ತಿ.ನರಸೀಪುರ, ಅ.15– ಉಪ್ಪಾರ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ 50 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಾಲೂಕು ಭಗೀರಥ ಉಪ್ಪಾರ ಜನ ಸೇವಾ ಟ್ರಸ್ಟ್ ಅಧ್ಯಕ್ಷ ಕೇತಹಳ್ಳಿ ಸಿದ್ಧಶೆಟ್ಟಿ ತಿಳಿಸಿದರು.

ಪಟ್ಟಣದ ಎಪಿಎಂಸಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂಜನಗೂಡು ಮುಖ್ಯರಸ್ತೆಯ ಹೆಳವರ ಹುಂಡಿ ಸಮೀಪ ತಾಲೂಕು ಭಗೀರಥ ಉಪ್ಪಾರ ಸಮುದಾಯ ಭವನದ ಕಾಮಗಾರಿ ಅನುದಾನದ ಕೊರತೆಯಿಂದ ಸ್ಥಗಿತಗೊಂಡಿತ್ತು. ಇದೀಗ ಮುಂದುವರೆದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಅಲ್ಲದೇ ಮುಂದಿನ ದಿನಗಳಲ್ಲಿ ಮತ್ತೆ 50 ಲಕ್ಷ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಹೀಗಾಗಿ ಸಮಾಜದ ವತಿಯಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಸಿ. ರಾಜಣ್ಣ, ವೆಂಕಟರಾಮ ವಾಟಾಳ್, ತೊಟ್ಟವಾಡಿ ನಾಗಣ್ಣ, ಕನ್ನಳ್ಳಿಮೊಳೆ ನಾಗರಾಜು, ಕರೋಹಟ್ಟಿ ಮಹೇಶ್, ಸುರೇಶ್, ಹಾಜರಿದ್ದರು.

ಕಟ್ಟೆಮಳಲವಾಡಿ ತಂಬಾಕು ಮಾರುಕಟ್ಟೆಗೆ ಯದುವೀರ್ ಭೇಟಿ



ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಗೆ ಸಂಸದ ಯದುವೀರ್ ಭೇಟಿ ನೀಡಿ ಪರಿಶೀಲಿಸಿದರು.

ಹಿರೀಕ್ಯಾತನಹಳ್ಳಿ, ಅ.15– ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಡಿ.ದೇವರಾಜು ಅರಸು ತಂಬಾಕು ಹರಾಜು ಮಾರುಕಟ್ಟೆಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿದರು.

ದಸರಾ ಹಿನ್ನೆಲೆಯಲ್ಲಿ ಹರಾಜು ಮಾರುಕಟ್ಟೆ ಪ್ರಾರಂಭದ ದಿನ ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮಂಗಳವಾರ ತಂಬಾಕು ಹರಾಜು ಮಾರುಕಟ್ಟೆಗೆ ಭೇಟಿ ನೀಡಿ ರೈತರಿಗೆ ಸಿಗುತ್ತಿರುವ ದರ ಪರಿಶೀಲಿಸಿ ಮಾತನಾಡಿದ ಅವರು, ಜನಪ್ರತಿನಿಧಿಗಳಿಗೆ ರೈತರ ಸಮಸ್ಯೆಗಳ ಸವಾಲುಗಳಿದೆ. ಅವುಗಳನ್ನು ಎದುರಿಸುವ ಕೆಲಸ ಮಾಡಬೇಕು. ಎಲ್ಲರಿಗೂ ಪರಿಹಾರ ಸಿಗುವಂತೆ ರೈತರ ಜೊತೆ ಕೈ ಜೋಡಿಸುತ್ತೇನೆ ಎಂದರು.

ಆಂಧ್ರಪ್ರದೇಶದ ತಂಬಾಕು ಮಾರುಕಟ್ಟೆಯಲ್ಲಿ ರೈತರಿಗೆ ಮೂಲ ಸೌಕರ್ಯ ಕಲ್ಪಿಸಿದ್ದು, ಅಲ್ಲಿನ ಸರ್ಕಾರ ಹಾಗೂ ಮಂಡಳಿಗಳು ರೈತರ ಪರ ನಿಲ್ಲುತ್ತವೆ. ಆದರೆ ಕರ್ನಾಟಕದಲ್ಲಿ ಮೂಲ ಸೌಕರ್ಯವಿಲ್ಲದೇ ರೈತರು ಕಂಗಾಲಾಗಿದ್ದಾರೆ ಎಂಬ ಪ್ರಶ್ನೆಗೆ ಸದ್ಯದಲ್ಲೇ ಅಧಿಕಾರಿಗಳ ಜೊತೆ ರೈತರ ಸಮಸ್ಯೆಗಳ ಬಗ್ಗೆ ಶೀಘ್ರ ಚರ್ಚಿಸುತ್ತೇನೆ. ರೈತರ ಹಲವು ಬೇಡಿಕೆಗಳಾದ ವಿದೇಶಿ ಮಾರುಕಟ್ಟೆಯ ಬೈಯರ್‌ಗಳನ್ನು ಕರೆ ತರುವ ವಿಚಾರ ಮುಂದೆ ಇದೆ. ಇದಕ್ಕೆ ಮತ್ತಷ್ಟು ಚುರುಕುಗೊಳಿಸುವ ಕೆಲಸ ಮಾಡುತ್ತೇನೆ. ಮಾರುಕಟ್ಟೆ ಪ್ರಾರಂಭ ವಿಳಂಬವಾಗಿರುವುದ್ದರಿಂದ ರೈತರಿಗೆ ಕೆಲವು ಸಮಸ್ಯೆ ಉಂಟಾಗಿದೆ. ಹಿಂದಿನ ಹಲವು ಉಪ ಕ್ರಮಗಳನ್ನು ಕೈ ಬಿಡುವುದಿಲ್ಲ ಮುಂದುವರೆಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದ ಅವರು ಅನಧಿಕೃತ ತಂಬಾಕು ಬೆಳೆಗಾರರ ಕಾರ್ಡ್‌ಗೆ ಲೈಸೆನ್ಸ್ ನೀಡುವ ಬಗ್ಗೆ ವಾಣಿಜ್ಯ ಮಂತ್ರಿಗಳೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ. ಹರಾಜು ಮಾರುಕಟ್ಟೆಯೊಳಗೆ ಲೇಬರ್ ಹಾಗೂ ರೈತರ ಮಧ್ಯ ಬಹಳಷ್ಟು ಸಮಸ್ಯೆ ಇದ್ದು, ಅಧಿಕಾರಿಗಳು ಮತ್ತು ರೈತರ ಜೊತೆ ನೇರ ಚರ್ಚೆಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಬೆಂಗಳೂರಿನಲ್ಲಿರುವ ನಿರ್ದೇಶಕರ ಕಚೇರಿಯನ್ನು ಮೈಸೂರಿಗೆ ಸ್ಥಳಾಂತರಿಸಿ ಮೈಸೂರಿನಲ್ಲಿರುವ ಆರ್‌ಎಂಓ ಕಚೇರಿಯನ್ನು ಹುಣಸೂರು ಉಪ ವಿಭಾಗಕ್ಕೆ ಸ್ಥಳಾಂತರಿಸುವ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಈ ಬಾರಿ ಅಧಿಕಾರಿಗಳು ರೈತರಿಗೆ ಬೆಲೆ ಏರಿಳಿತ ಕಾಣದಂತೆ ನೋಡಿಕೊಳ್ಳಬೇಕು. ರೈತರನ್ನು ಕಾಪಾಡುವ ಜವಾಬ್ದಾರಿ ನನ್ನ ಮೇಲಿದೆ ಎಂದರು.

ಈ ವೇಳೆ ತಂಬಾಕು ಮಂಡಳಿ ಸದಸ್ಯರಾದ ದಿನೇಶ್, ಬಸವರಾಜ್, ವಿಕ್ರಂರಾಜೇ ಅರಸು, ಜಿಪಂ ಮಾಜಿ ಸದಸ್ಯ ನಾಗರಾಜ್ ಮಲ್ಲಾಡಿ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಣ್ಣ, ಗೌರವಾಧ್ಯಕ್ಷ ಚಂದ್ರೇಗೌಡ, ಪ್ರಧಾನ ಕಾರ್ಯದರ್ಶಿ ರಾಮೇಗೌಡ, ಪದಾಧಿಕಾರಿಗಳಾದ ಮಹದೇವ್, ಜಯಣ್ಣ, ರವಿ, ವಿಷಕಂಠಪ್ಪ, ರಾಮಕೃಷ್ಣೇಗೌಡ, ಸತೀಶ್, ಹಾರಂಗಿ ಮಹಾಮಂಡಲದ ಉಪಾಧ್ಯಕ್ಷ ಮಂಜುನಾಥ್, ನಿರ್ದೇಶಕ ಕಿರಣ್ ಕುಮಾರ್, ಮುಖಂಡರಾದ ಬಿಳಿಕೆರೆ ಪ್ರಸನ್ನ, ಹಿರೀಕ್ಯಾತನಹಳ್ಳಿ ಸತೀಶ್, ಹರಾಜು ಮಾರುಕಟ್ಟೆ ಅಧೀಕ್ಷಕರು ಹಾಜರಿದ್ದರು.

ಸರ್ಕಾರದ ಸಹಾಯಧನ ಪಡೆದು ಉದ್ಯಮಶೀಲರಾಗಿ



ನಂಜನಗೂಡಿನ ಕೃಷಿ ಇಲಾಖೆ ಕಚೇರಿಯಲ್ಲಿ ಮಹಿಳಾ ಕಿಸಾನ್ ದಿವಸ್ ಕಾರ್ಯಕ್ರಮ ನಡೆಯಿತು.

ನಂಜನಗೂಡು, ಅ.15– ಮಹಿಳೆಯರು ಆಹಾರ ಮೌಲ್ಯವರ್ಧನೆ ಅಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಅವಕಾಶವಿದ್ದು, ಸರ್ಕಾರದ ಸಹಾಯಧನ ಪಡೆದು ಉದ್ಯಮಶೀಲರಾಗಬೇಕು ಎಂದು ಸುತ್ತೂರಿನ ಕೆವಿಕೆ ಕೃಷಿ ವಿಜ್ಞಾನಿ ಹೆಚ್.ವಿ.ದಿವ್ಯಾ ತಿಳಿಸಿದರು.

ನಗರದ ಕೃಷಿ ಇಲಾಖೆ ಕಚೇರಿಯಲ್ಲಿ ಮಹಿಳಾ ಕಿಸಾನ್ ದಿವಸ್ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಕೃಷಿ ಪರಿವರ್ತನೆಯಲ್ಲಿ ಉದ್ಯಮಶೀಲ ಮಹಿಳೆಯರ ಪಾತ್ರ ಎಂಬ ವಿಷಯದ ಕುರಿತು ಅವರು ಮಾತನಾಡಿದರು.

ಮಹಿಳೆಯರು ಆಹಾರ ಮೌಲ್ಯವರ್ಧನೆ ಅಡಿಯಲ್ಲಿ ಹಪ್ಪಳ, ಉಪ್ಪಿನಕಾಯಿ, ಸಾಂಬಾರು ಪುಡಿ, ಬಾಳೆ ಉತ್ಪನ್ನ, ಜಾಮ್ ಇನ್ನಿತರೆ ಪದಾರ್ಥಗಳನ್ನು ತಯಾರಿಸಿ ಲಾಭ ಪಡೆಯಬಹುದು. ಕೃಷಿಯಲ್ಲಿ ಎರೆಹುಳು ಉತ್ಪಾದನೆ, ನರ್ಸರಿ, ಕಸಿ ಕಟ್ಟುವುದು ಮುಖಾಂತರ ಮುಂದುವರೆಯಬಹುದಾಗಿದೆ. ಆಸಕ್ತ ಮಹಿಳೆಯರಿಗೆ ಸುತ್ತೂರಿನ ಕೆವಿಕೆಯಲ್ಲಿ ಮೂರುವರೆ ತಿಂಗಳ ಹೊಲಿಗೆ, ಜೂಟ್ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ಹಲವು ಮಹಿಳೆಯರು ತರಬೇತಿ ಪಡೆದು ಅಂಗಡಿ ತೆರೆದು ಸ್ವಂತ ಉದ್ಯೋಗ ನಡೆಸುತ್ತಿದ್ದಾರೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸರ್ಕಾರದ, ಕೆವಿಕೆಯ ಸಹಾಯ ಪಡೆದು ಉದ್ಯೋಗಶೀಲರಾಗಬೇಕೆಂದು ತಿಳಿಸಿದರು. ಕೃಷಿ ಸಹಾಯಕ ನಿರ್ದೇಶಕ ರವಿ ಮಾತನಾಡಿ, ಮಹಿಳೆಯರು ಕೌಶಲ್ಯ ತರಬೇತಿ ಪಡೆದು ಸರ್ಕಾರದಿಂದ ಸಿಗುವ ಸಾಲ ಸೌಲಭ್ಯಗಳಂತಹ ಸದಾವಕಾಶಗಳನ್ನು ಉಪಯೋಗಿಸಿಕೊಂಡು ಮಹಿಳಾ ರೈತ ಉದ್ಯಮಿಗಳಾಗುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಎಸ್‌ಬಿಐ ವ್ಯವಸ್ಥಾಪಕ ದೊರೆಸ್ವಾಮಿ, ರೇಷ್ಮೆ ಸಹಾಯಕ ನಿರ್ದೇಶಕ ನಾಗರಾಜು, ಪಶುಸಂಗೋಪನೆ ಅಧಿಕಾರಿಗಳಾದ ಶ್ರೀನಿವಾಸ್ ಮೂರ್ತಿ, ರಾಜಮ್ಮ, ಶಶಿಕಲಾ, ಕೃಷಿ ಇಲಾಖೆ ಸಿಬ್ಬಂದಿಗಳು ಹಾಗೂ ರೈತ ಮಹಿಳೆಯರು ಇದ್ದರು.

ಹುಲಿ ದಾಳಿಗೆ ಹಸು ಬಲಿ



ಸರಗೂರು, ಅ.15– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಮಂಗಳವಾರ ತಾಲೂಕಿನ ಹೆಗ್ಗನೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಪುಟ್ಟಮಾದು ಅವರ ಹಸು ಬಲಿಯಾಗಿರುವುದು. ಎಂದಿನಂತೆ ಪುಟ್ಟಮಾದು ಅವರು ಬೆಳಗ್ಗೆ ತಮ್ಮ ಜಮೀನಿನಲ್ಲಿ ಹಸು ಮೇಯಲು ಬಿಟ್ಟು ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ವೇಳೆ ಹುಲಿ ಹಸು ಮೇಲೆ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಹತ್ತಿರದಲ್ಲಿದ್ದ ದನಗಾಹಿಯೊಬ್ಬರು ಕಂಡು ಕೂಗಿಕೊಂಡಿದ್ದಾರೆ. ಈ ವೇಳೆಗಾಗಲೇ ಹುಲಿ ಹಸುವನ್ನು ಬಲಿ ಪಡೆದು ಪರಾರಿಯಾಗಿದೆ.

ರೈತ ಪುಟ್ಟಮಾದು ಮಾತನಾಡಿ, ಕೆಲ ದಿನಗಳ ಹಿಂದೆ ಹುಲಿ ಅಣ್ಣ ಮಾದಯ್ಯ ಎಂಬುವರ ಹಸು ಬಲಿ ಪಡೆದಿದೆ. ಇಲ್ಲಿವರೆಗೆ ಈ ಭಾಗದಲ್ಲಿ 15 ಜಾನುವಾರುಗಳು ಬಲಿ ಪಡೆದಿದೆ. ಇದೀಗ ನಮ್ಮ ಹಸು ಬಲಿಯಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವೀರಶೈವ ಲಿಂಗಾಯತ ಮಹಾಸಭಾ ಪದಾಧಿಕಾರಿಗಳ ಪದಗ್ರಹಣ



ಶ್ರೀಸೂರ್ಯ ಸಿಂಹಾಸನ ಮಠದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ನೂತನ ಅಧ್ಯಕ್ಷ, ನಿರ್ದೇಶಕರ ಪದಗ್ರಹಣ ನಡೆಯಿತು.

ತಿ.ನರಸೀಪುರ, ಅ.15– ತಾಲೂಕಿನ ವಾಟಾಳು ಗ್ರಾಮದ ಶ್ರೀಸೂರ್ಯ ಸಿಂಹಾಸನ ಮಠದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದ ನೂತನ ಅಧ್ಯಕ್ಷ ಹಾಗೂ ನಿರ್ದೇಶಕರ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಮಠದ ಆವರಣದಲ್ಲಿ ಮಹಾಸಭಾ ಗೌರವಾಧ್ಯಕ್ಷ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಸರಳವಾಗಿ ನಡೆದ ಕಾರ್ಯಕ್ರಮದಲ್ಲಿ ನಿರ್ಗಮಿತ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಅವರು ನೂತನ ಅಧ್ಯಕ್ಷ ಸಿ.ಬಿ.ಹುಂಡಿ ಗ್ರಾಮದ ಎಸ್‌ಎಂಆರ್ ಪ್ರಕಾಶ್ ಅವರಿಗೆ ಮಹಾಸಭಾ ಜವಾಬ್ದಾರಿ ಹಸ್ತಾಂತರಿಸಿದರು.

ನೂತನ ಅಧ್ಯಕ್ಷ ಸಿ.ಎಂ.ಪ್ರಕಾಶ್ ಮಾತನಾಡಿ, ವಾಟಾಳು ಶ್ರೀಗಳು ಹಾಗೂ ಜಿಲ್ಲಾ ಘಟಕದ ಮಾರ್ಗದರ್ಶನದಲ್ಲಿ ಸಮುದಾಯದ ಸಂಘಟನೆಗೆ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಕಾರಿ ಸಮಿತಿಯ ನಿರ್ದೇಶಕರೆಲ್ಲರೂ ಒಗ್ಗಟ್ಟಿನಿಂದ ದುಡಿಯುತ್ತೇವೆ ಎಂದರು.

ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜ್ ಮಾತನಾಡಿ, ಯಾವುದೇ ಒಂದು ಸಮಾಜ ಉದ್ಧಾರ ಆಗಬೇಕಾದರೆ ಸಮಾಜವನ್ನು ಒಂದುಗೂಡಿಸುವ ವ್ಯಕ್ತಿಯಾಗಬೇಕು ವಿನಃ ಸಮಾಜ ಒಡೆಯುವ ವ್ಯಕ್ತಿಯಾಗಬಾರದು ಎಂದ ಅವರು ಎಲ್ಲರೂ ಒಟ್ಟಾಗಿ ಸಮಾಜವನ್ನು ಮುನ್ನಡೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ರಾಷ್ಟ್ರೀಯ ಸಮಿತಿ ಸದಸ್ಯ ಖಂಡೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೂರ ಶಿವಕುಮಾರ್, ನೂತನ ನಿರ್ದೇಶಕರಾದ ಎಸ್.ಬಿ.ಸುಗಂಧರಾಜು, ಓಂಕಾರ್ ಸ್ವಾಮಿ, ದೊಡ್ಡನಹುಂಡಿ ನಂಜುಂಡಸ್ವಾಮಿ, ಮಲ್ಲಣ್ಣ, ಹೊಸೂರುಹುಂಡಿ ತೋಂಟೇಶ್, ಬೆನಕನಹಳ್ಳಿ ವಿಜಯಕುಮಾರ್, ಕಾರ್ ಮಲ್ಲಪ್ಪ, ಸುರೇಶ್, ಎಸ್.ಕೆ.ಕಿರಣ್, ಪರಶಿವಮೂರ್ತಿ, ಕುರುಬೂರು ಶಿವು, ಗುರುಸ್ವಾಮಿ, ತೊಟ್ಟವಾಡಿ ಶಿವಕುಮಾರ್, ಅಶ್ವಿನಿ ಮಲ್ಲಿಕಾರ್ಜುನ, ಸವಿತಾ ಮಹದೇವಸ್ವಾಮಿ, ಜ್ಞಾನೇಶ್ವರಿ, ಅಂಬಿಕಾ ಲೋಕೇಶ್, ಸುಧಾ ರಮೇಶ್, ಮಲ್ಲಿಕಾ ಮಂಟೇಸ್ವಾಮಿ, ರಾಜಮ್ಮ ರಾಜಣ್ಣ ಹಾಗೂ ಇತರರಿದ್ದರು.

ಕಾಂಗ್ರೆಸ್ ಸರ್ಕಾರದಿಂದ ಪೌರಕಾರ್ಮಿಕರಿಗೆ ಸಾಕಷ್ಟು ಅನುಕೂಲ

ಶಾಸಕ ಡಿ.ರವಿಶಂಕರ್



ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಹಿರಿಯ ಪೌರ ಕಾರ್ಮಿಕರನ್ನು ಶಾಸಕ ಡಿ.ರವಿಶಂಕರ್ ಸನ್ಮಾನಿಸಿದರು.

ಕೆ.ಆರ್.ನಗರ, ಅ.15– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪೌರ ಕಾರ್ಮಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕನಿಷ್ಠ ವೇತನ ಜಾರಿಗೆ ತಂದು ಸಫಾಯಿ ಕರ್ಮಚಾರಿ ಆಯೋಗ ರಚನೆ ಮಾಡಿ ಸಾಕಷ್ಟು ಸವಲತ್ತು ಕಲ್ಪಿಸಿದೆ. ಅವುಗಳನ್ನು ಪೌರ ಕಾರ್ಮಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ಪುರಸಭೆ ವತಿಯಿಂದ ನಡೆದ ಪೌರ ಕಾರ್ಮಿಕರ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ ನೀಡುವ ಸಲಕರಣೆ ಮತ್ತು ಸವಲತ್ತುಗಳನ್ನು ಬಳಸಿಕೊಂಡು ಸ್ವಚ್ಛತೆ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಮಿಕರ ಪರಿಶ್ರಮದಿಂದ ಪಟ್ಟಣದ ಪುರಸಭೆಗೆ 3ನೇ ಬಾರಿ ಸ್ವಚ್ಛ ನಗರ ಪ್ರಶಸ್ತಿ ದೊರೆತಿದೆ. ಇದಕ್ಕೆ ಕಾರಣರಾದ ಎಲ್ಲಾ ಕಾರ್ಮಿಕರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ ಶಾಸಕರು ನಗರವನ್ನು ಸ್ವಚ್ಛಗೊಳಿಸುವ ನೀವು ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಆಗ್ಗಿಂದ್ದಾಗೆ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು.

ಪೌರ ಕಾರ್ಮಿಕರ ಮಕ್ಕಳಿಗೆ ಸರ್ಕಾರ ಉಚಿತವಾಗಿ ಶಿಕ್ಷಣ ನೀಡುತ್ತಿದ್ದು, ಇದನ್ನು ಬಳಸಿಕೊಂಡು ಮಕ್ಕಳನ್ನು ತಮ್ಮ ಕೆಲಸಕ್ಕೆ ಬಳಸಿಕೊಳ್ಳದೆ ಶಿಕ್ಷಿತರನ್ನಾಗಿ ಮಾಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು. ದುಷ್ಚಟಗಳಿಂದ ಸಾಕಷ್ಟು ದೂರವಿದ್ದು ಆರೋಗ್ಯವಂತರಾಗಿ ಇರಬೇಕೆಂದು ತಿಳಿಸಿದರು. ಸರ್ಕಾರದ ನಿಯಮದಂತೆ ಆರೋಗ್ಯ ಇಲಾಖೆಯವರು ಕಾರ್ಮಿಕರಿಗೆ ಮತ್ತು ಅವರ ಕುಟುಂಬದವರಿಗೆ ಆರೋಗ್ಯ ತಪಾಸಣೆ ಮಾಡಿ ಅವಶ್ಯಕತೆ ಇದ್ದವರಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕೆಂದು ಸೂಚಿಸಿದ ಶಾಸಕರು ಕಾರ್ಮಿಕರಿಗಾಗಿ ಸರ್ಕಾರದಿಂದ ಬರುವ ಸಲಕರಣೆ ಮತ್ತು ಸೌಲಭ್ಯಗಳನ್ನು ಮುಖ್ಯಾಧಿಕಾರಿಗಳು ಅವರುಗಳ ಮನೆ ಬಾಗಿಲಿಗೆ ತಲುಪಿಸಬೇಕೆಂದು ತಾಕೀತು ಮಾಡಿದರು.

ಪೌರಕಾರ್ಮಿಕರ ಮಕ್ಕಳು ಶಿಕ್ಷಿತ ರಾಗಬೇಕೆಂಬ ಹಂಬಲ ಹೊಂದಿರುವ ನಾನು ಎಲ್ಲಾ ಮಕ್ಕಳಿಗೂ ವೈಯುಕ್ತಿಕವಾಗಿ ಲ್ಯಾಪ್ ಟಾಪ್ ನೀಡಲು ನಿರ್ಧರಿಸಿದ್ದು ಶೀಘ್ರದಲ್ಲೇ ವಿತರಣೆ ಮಾಡುತ್ತೇನೆ ಎಂದು ಭರವಸೆ ನೀಡಿದರು. ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್ ಮಾತನಾಡಿ, ಸ್ವಚ್ಛತೆ ಮಾಡುವ ಪೌರ ಕಾರ್ಮಿಕರು ದೇಶದ ಸೇನಾನಿಗಳಿದ್ದಂತೆ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದಾರೆ. ಇದನ್ನು ಅರಿತು ಎಲ್ಲರೂ ಸ್ವಚ್ಛತೆ ಮಾಡುವ ಜೊತೆಗೆ ತಾವು ಶುಚಿಯಾಗಿರಬೇಕೆಂದು ಕೋರಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್, ಸದಸ್ಯರಾದ ಕೆ.ಪಿ.ಪ್ರಭುಶಂಕರ್, ಸಿ.ಶಂಕರ್ ಮಾತನಾಡಿದರು.

ಇದೇ ವೇಳೆ ಹಿರಿಯ ಪೌರಕಾರ್ಮಿಕರನ್ನು ಸನ್ಮಾನಿಸಿ, ಸರ್ಕಾರದಿಂದ ದೊರೆಯುವ ಸಲಕರಣೆಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಕೋಳಿಪ್ರಕಾಶ್, ಕೆ.ಜಿ.ಸುಬ್ರಹ್ಮಣ್ಯ, ಕೆ.ಎಲ್.ಜಗದೀಶ್, ಉಮೇಶ್, ಶಿವಕುಮಾರ್, ಕೆ.ಎಸ್. ಶಂಕರ್, ವಸಂತಮ್ಮ, ನಟರಾಜು, ಮಂಜುಳ್, ಮುಖಂಡರಾದ ವೃಷಬೇಂದ್ರ, ನವೀದ್, ಆದರ್ಶ, ಪುಟ್ಟರಾಜು, ಎಂ.ಲೋಕೇಶ್, ಸಫಾಯಿ ಕರ್ಮಚಾರಿ ಆಯೋಗದ ಪದಾಧಿಕಾರಿಗಳಾದ ಡಿ.ಆರ್. ರಾಜು, ದಿನೇಶ್, ನಂಜಪ್ಪ, ಪುರಸಭೆ ಕಂದಾಯಾಧಿಕಾರಿ ಜಿ.ಎಸ್. ರಮೇಶ್, ಆರೋಗ್ಯ ನಿರೀಕ್ಷಕರಾದ ಎಸ್.ಪಿ. ರಾಜೇಂದ್ರ, ಹೆಚ್.ಎಸ್.ಲೋಕೇಶ್ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ಪುರಸಭೆ ವೃತ್ತದಲ್ಲಿ ಪಟಾಕಿ ಸಿಡಿಸುವುದನ್ನು ನಿಷೇಧಿಸಿ

ಕೆ.ಆರ್.ನಗರ: ಪಟ್ಟಣದ ಪುರಸಭೆ ವೃತ್ತಕ್ಕೆ ಸಚಿವರು ಸೇರಿದಂತೆ ಇತರ ರಾಜಕೀಯ ಮುಖಂಡರು ಆಗಮಿಸಿದಾಗ ಮತ್ತು ಗಣಪತಿ ವಿಸರ್ಜನೆ ಸೇರಿದಂತೆ ಇತರ ಹಬ್ಬ ಹರಿದಿನಗಳಲ್ಲಿ ಪಟಾಕಿ ಸಿಡಿಸುತ್ತಿರುವುದು ಸಾಮಾನ್ಯವಾಗಿದೆ. ಇದನ್ನು ನಿಷೇಧಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿಗೆ ಶಾಸಕ ಡಿ.ರವಿಶಂಕರ್ ಸೂಚಿಸಿದರು. ಇಲ್ಲಿನ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ನಡೆದ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದ ಅವರು ಪುರಸಭೆ ವೃತ್ತದ ಬಳಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಇರುವುದರಿಂದ ಗರ್ಭಿಣಿಯರಿಗೆ ಮತ್ತು ನವಜಾತ ಶಿಶುಗಳಿಗೆ ಹಾಗೂ ಬಾಣಂತಿಯರಿಗೆ ತೊಂದರೆಯಾಗುತ್ತಿರುವ ಬಗ್ಗೆ ಆಸ್ಪತ್ರೆಯ ವೈದ್ಯರಿಂದ ದೂರು ಬಂದಿದೆ. ಆದ್ದರಿಂದ ಪಟಾಕಿ, ಧ್ವನಿವರ್ಧಕ ಸೇರಿದಂತೆ ಎಲ್ಲವನ್ನು ನಿಷೇಧಿಸಿ ಶಬ್ದರಹಿತ ಪ್ರದೇಶ ಮಾಡಬೇಕು ಎಂದರು.

ಮುಡಾ ಬೆನ್ನಲ್ಲೇ ಸಿಎಂಗೆ ಮತ್ತೊಂದು ಶಾಕ್

ಅರ್ಕಾವತಿ ಲೇಔಟ್ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ಆರೋಪ

ರಾಜ್ಯಪಾಲರಿಗೆ ದೂರು ಸಲ್ಲಿಕೆ

ಬೆಂಗಳೂರು, ಅ.15– ಮುಡಾ ಹಗರಣ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಅರ್ಕಾವತಿ ಬಡಾವಣೆಯ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ನಿವೇಶನದಾರರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬಿಡಿಎ ಅಧಿಕಾರಿಗಳ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ನಿವೇಶನದ ಮಾಲೀಕರಾದ ಎಂ.ಎಸ್. ಶಿವಲಿಂಗಪ್ಪ ಎಂ.ಚಂದ್ರಶೇಖರನ್, ಕೆ.ರಾಮಚಂದ್ರಯ್ಯ ಮತ್ತು ಡಾ.ವೆಂಕಟಕೃಷ್ಣಪ್ಪ ಅವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಪತ್ರವಲ್ಲಿ, ಥಣಿಸಂದ್ರ ಸಂಪಿಗೆಹಳ್ಳಿ, ಜಕ್ಕೂರು ಕೆ.ನಾರಾಯಣಪುರ ಹಾಗೂ 16 ಹಳ್ಳಿಗಳೂ ಸೇರಿ ಸುಮಾರು 800 ಎಕರೆ ಪ್ರದೇಶದಲ್ಲಿ ಬಿಡಿಎಯಿಂದ ಅರ್ಕಾವತಿ ಬಡಾವಣೆ ನಿರ್ಮಾಣವಾಗಿತ್ತು. 2004ರಲ್ಲಿ ನಿವೇಶನಕ್ಕಾಗಿ ಬಿಡಿಎಗೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದರು. ಈ ಪೈಕಿ 20 ಸಾವಿರ ಫಲಾನುಭವಿಗಳನ್ನು ಪರಿಗಣಿಸಲಾಗಿತ್ತು. 12 ಸಾವಿರ ನಿವೇಶನದಾರರಿಗೆ ಬಿಡಿಎ ನಿವೇಶನ ನೋಂದಣಿ ಹಾಗೂ ಕ್ರಯಪತ್ರ ಮಾಡಿಕೊಡಲಾಗಿತ್ತು.



2006ರಲ್ಲಿ ನೂರಾರು ಮಂದಿಗೆ ಬಿಡಿಎಯಿಂದ 30X40 ನಿವೇಶನಕ್ಕೆ ಎರಡೂವರೆ ಲಕ್ಷ, 40X60 ನಿವೇಶನಕ್ಕೆ ನಾಲ್ಕೂವರೆ ಲಕ್ಷ ಹಣ ಪಡೆದು ಹಂಚಿಕೆ ಮಾಡಿತ್ತು. ನೋಂದಣಿ ಪತ್ರ ಹಾಗೂ ಕ್ರಯಪತ್ರ ಪಡೆದ ನಿವೇಶನದಾರರು ಕನಿಷ್ಠ ಹತ್ತು ವರ್ಷ ನಿವೇಶನ ಮಾರಾಟ ಮಾಡುವಂತಿರಲಿಲ್ಲ. 2014ರಲ್ಲಿ ಸಿಎಂ ಸಿದ್ದರಾಮಯ್ಯ ಸರ್ಕಾರ ಅರ್ಕಾವತಿ ಲೇಔಟ್‌ನಲ್ಲಿ ನೀಡಲಾಗಿದ್ದ ನಿವೇಶನ ಹಿಂಪಡೆದಿತ್ತು ಎಂದು ದೂರುದಾರರು ಆಕ್ಷೇಪಿಸಿದ್ದಾರೆ.

2006ರಿಂದ ನಿವೇಶನ ಸಂಬಂಧ ತೆರಿಗೆ ಪಾವತಿಸಲಾಗಿದೆ. 2014 ರಿಂದ ಇದುವರೆಗೂ ನಿವೇಶನದಾರರಿಗೆ ಹಂಚಿಕೆಯಾಗಿ ರಿಜಿಸ್ಟರ್ ಆಗಿದ್ದ ಸೈಟ್ ಹಿಂಪಡೆಯಲಾಗಿದೆ. ಅಲ್ಲದೆ, ಮಾಲೀಕರಿಂದ ವಶಪಡಿಸಿಕೊಂಡ ಜಾಗವನ್ನು ಅವರಿಗೂ ಹಿಂದಿರುಗಿಸಿಲ್ಲ. ಹಂಚಿಕೆ ಮಾಡಿ ನೋಂದಣಿ ಮಾಡಿದ ತಮ್ಮ ನಿವೇಶನಗಳಲ್ಲಿ ಮನೆ ನಿರ್ಮಾಣಕ್ಕೆ ಅನುವು ಮಾಡುತ್ತಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಅರ್ಕಾವತಿಯಲ್ಲಿ ಸೈಟಿಲ್ಲ, ಕೆಂಪೇಗೌಡ ಲೇಔಟ್‌ನಲ್ಲಿ ನೋಡೋಣ ಎಂದು ನಿರ್ಲಕ್ಷ್ಯದಿಂದ ಅಧಿಕಾರಿಗಳು ಉತ್ತರಿಸುತ್ತಾರೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಅರ್ಕಾವತಿ ಲೇಔಟ್‌ನಲ್ಲಿ ಅಕ್ರಮ ಎಸಗಿರುವುದು ಕಂಡುಬಂದಿದ್ದು, ವಶಪಡಿಸಿಕೊಂಡಿರುವ ಜಾಗ ಭೂಗಳ್ಳರ ಪಾಲಾಗುತ್ತಿದೆ. ಇದರಿಂದ ಅಸಲಿ ಫಲಾನುಭವಿಗಳಾಗಿರುವ ನಿವೇಶನದಾರರಿಗೆ ತೊಂದರೆಯಾಗಿದೆ ಎಂದು ದೂರುದಾರರು ಹೇಳಿದ್ದಾರೆ.

ಕೆಲ ಭೂ ಮಾಲೀಕರು ತಮ್ಮ ಜಮೀನು ಸ್ವಾಧೀನಪಡಿಸಿಕೊಳ್ಳುವುದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ನ್ಯಾಯಾಲಯವು ಭೂಸ್ವಾಧೀನ ಆದೇಶವನ್ನು ಎತ್ತಿ ಹಿಡಿದಿತ್ತು. ಆದರೆ, ಕೆಲವು ನಿಯತಾಂಕಗಳನ್ನು ಅನುಸರಿಸಿ ಭೂ ಮಾಲೀಕರ ಅರ್ಜಿಗಳನ್ನು ಪರಿಗಣಿಸಲು ಬಿಡಿಎಗೆ ನಿರ್ದೇಶನ ನೀಡಿತ್ತು. ನಂತರ ನೊಂದ ಕೆಲ ಭೂ ಮಾಲೀಕರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು, ಸುಪ್ರೀಂಕೋರ್ಟ್ ಕೂಡ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿತ್ತು.

ಆದರೆ, ನ್ಯಾಯಾಲಯದ ಆದೇಶಗಳನ್ನು ತಪ್ಪಾಗಿ ಅರ್ಥೈಸಿದ ಸರ್ಕಾರ, ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆಸಿದೆ. ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಲು ಸಿದ್ದರಾಮಯ್ಯ ಅವರು 'ರೀ ಡು' ಅಂತಿಮ ಅಧಿಸೂಚನೆ ಹೊರಡಿಸಿದ್ದು, ಇದರ ಆಧಾರದ ಮೇಲೆ ಬಡಾವಣೆ ನಿರ್ಮಿಸಲು ಸ್ವಾಧೀನಪಡಿಸಿಕೊಂಡ ಹಲವು ಜಮೀನುಗಳನ್ನು ಹಂಚಿಕೆ ಮಾಡಿದ್ದಾರೆ. ಕೆಲ ಮಧ್ಯವರ್ತಿಗಳು, ಬಿಡಿಎ ಅಧಿಕಾರಿಗಳು ಅಕ್ರಮದಲ್ಲಿ ಶಾಮೀಲಾಗಿ ಲಾಭ ಪಡೆದಿದ್ದಾರೆ.

ಅರ್ಕಾವತಿ ಬಡಾವಣೆಯಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ನ್ಯಾಯಮೂರ್ತಿ ಎಚ್.ಎಸ್.ಕೆಂಪಣ್ಣ ಅವರ ನೇತೃತ್ವದಲ್ಲಿ ಸರ್ಕಾರ ಆಯೋಗ ರಚಿಸಿದ್ದರೂ, ಆರೋಪಿಗಳನ್ನು ರಕ್ಷಿಸಲು ವರದಿಯನ್ನು ಇನ್ನೂ ಬಹಿರಂಗಪಡಿಸಿಲ್ಲ. ಸಿಎಂ ಸೇರಿ ಬಿಡಿಎ ಅಧಿಕಾರಿಗಳು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಈ ಅಕ್ರಮ ಎಸಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಶ್ವಂ (ತೆ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅತ್ಯಾಚಾರ ಪ್ರಕರಣ: ಬಿಜೆಪಿ ಶಾಸಕ ಮುನಿರತ್ನಗೆ ಜಾಮೀನು

ಬೆಂಗಳೂರು: ದಲಿತ ಸಮುದಾಯದ ಗುತ್ತಿಗೆದಾರನಿಗೆ ಬೆದರಿಕೆ, ಜಾತಿನಿಂದನೆ ಪ್ರಕರಣದಲ್ಲಿ ಜೈಲು ಸೇರಿ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಬಿಜೆಪಿ ಶಾಸಕ ಮುನಿರತ್ನಗೆ ಇದೀಗ ಅತ್ಯಾಚಾರ ಪ್ರಕರಣದಲ್ಲೂ ಬಿಗ್ ರಿಲೀಫ್ ಸಿಕ್ಕಿದೆ.



ರಾಮನಗರದ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದಲ್ಲಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮುನಿರತ್ನ ಅವರಿಗೆ ಜಾಮೀನು ನೀಡಿ ಆದೇಶ ಹೊರಡಿಸಿದೆ.

ಮಂಗಳವಾರ ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿದ ಬೆಂಗಳೂರು ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರು ಮುನಿರತ್ನಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶ ನೀಡಿದ್ದಾರೆ.

ಪೊಲೀಸರ ತನಿಖೆಗೆ ಸಹಕಾರ ನೀಡುವುದು, ಸಾಕ್ಷಿಗಳನ್ನು ನಾಶಪಡಿಸದಿರುವುದು, ಸಾಕ್ಷ್ಯಾಧಾರರ ಮೇಲೆ ಪ್ರಭಾವ ಬೀರದಿರುವುದು, ಇಬ್ಬರ ಶ್ಯೂರಿಟಿ ಮೇಲೆ ಜಾಮೀನನ್ನು ಮಂಜೂರು ಮಾಡಿದ್ದಾರೆ.

ರಾಮನಗರ ಜಿಲ್ಲೆಯ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ಆಧಾರದ ಮೇಲೆ ಎಸ್‌ಐಟಿ ಅಧಿಕಾರಿಗಳು ಮುನಿರತ್ನ ಅವರನ್ನು ಬಂಧಿಸಿದ್ದರು. ತಮ್ಮನ್ನು ಮುನಿರತ್ನ ಅವರು ಅಧಿಕಾರ ದುರುಪಯೋಗಪಡಿಸಿಕೊಂಡು ಅತ್ಯಾಚಾರ ನಡೆಸಿದ್ದಾರೆ ಎಂದು ಸಂತ್ರಸ್ತ ಮಹಿಳೆಯೊಬ್ಬರು ದೂರು ನೀಡಿದ್ದರು.

ಈ ಪ್ರಕರಣವನ್ನು ರಾಜ್ಯ ಸರ್ಕಾರ ಎಸ್‌ಐಟಿಗೆ ವಹಿಸಿತ್ತು. ಬಿಬಿಎಂಪಿ ಗುತ್ತಿಗೆದಾರರೊಬ್ಬರಿಗೆ ಜಾತಿ ನಿಂದನೆ, ಪ್ರಾಣ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಮುನಿರತ್ನ ಅವರನ್ನು ಪೊಲೀಸರು ಬಂಧಿಸಿದ್ದರು. ನಂತರ ನ್ಯಾಯಾಲಯ ಅವರಿಗೆ ಜಾಮೀನು ನೀಡಿತ್ತು. ಆದರೆ ಮಹಿಳೆ ನೀಡಿದ ದೂರಿನನ್ವಯ ಎಸ್‌ಐಟಿ ಪೊಲೀಸರು ಪರಪ್ಪನ ಅಗ್ರಹಾರ ಜೈಲಿನಿಂದ ಹೊರಬರುತ್ತಿದ್ದಂತೆ ಮುನಿರತ್ನ ಅವರನ್ನು ಬಂಧಿಸಿದ್ದರು.

ಸಿಎಂ ಸಿದ್ದರಾಮಯ್ಯ ಕೆಳಗಿಳಿಸಲು ಮುಡಾ ಹಗರಣ ದಾಖಲೆ ಹೊರತೆಗೆದಿದ್ದು ಡಿಕೆಶಿ

ಶಾಸಕ ಜನಾರ್ದನ ರೆಡ್ಡಿ ಹೊಸ ಬಾಂಬ್

ಬಳ್ಳಾರಿ, ಅ.15– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿಎಂ ಖುರ್ಚಿಯಿಂದ ಕೆಳಗಿಳಿಸಬೇಕು ಎನ್ನುವ ಪ್ರಯತ್ನದಿಂದಲೇ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣದ ದಾಖಲೆಗಳನ್ನು ಹೊರಗೆ ತೆಗೆದಿದ್ದಾರೆ. ಬಿಜೆಪಿಯವರು ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಪ್ರಯತ್ನವನ್ನೇ ಮಾಡಿಲ್ಲ ಎಂದು ಶಾಸಕ ಜನಾರ್ದನ ರೆಡ್ಡಿ ಹೊಸ ಬಾಂಬ್ ಸಿಡಿಸಿದ್ದಾರೆ.

ಬಳ್ಳಾರಿಯಲ್ಲಿ ನಡೆದ ಕುರುಬರ ಸಭೆಯಲ್ಲಿ ಮಾತನಾಡಿದ ಅವರು, ಪರೋಕ್ಷವಾಗಿ ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದ್ದಾರೆ. ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಇಳಿಸಲು ಕಾಂಗ್ರೆಸ್‌ನವರೇ ಪ್ರಯತ್ನ ಮಾಡ್ತಿದ್ದಾರೆ. ಬಿಜೆಪಿಯವರು ಯಾರೂ ಅವರನ್ನು ಇಳಿಸೋದಕ್ಕೆ ಪ್ರಯತ್ನ ಮಾಡಿಲ್ಲ. ಮುಡಾ ಹಗರಣ ದಾಖಲೆಗಳನ್ನು ಡಿಕೆಶಿ ಅವರೇ ತೆಗೆದಿದ್ದಾರೆ. ಅಧಿಕಾರದಲ್ಲಿ ಇದ್ದವರೇ ಆ ರೀತಿ ದಾಖಲೆ ತೆಗೆಯಲು ಸಾಧ್ಯ. ವಿರೋಧ ಪಕ್ಷದವರು ಹೊರಗೆ ತೆಗೆಯಲು ಸಾಧ್ಯವಿಲ್ಲ ಡಿಕೆಶಿ ಪ್ರಯತ್ನದಿಂದಲೇ ಮುಡಾ ಹಗರಣ ಹೊರಗೆ ಬಂದಿದೆ ಎನ್ನುವುದು ಮೈಸೂರಿನ ಪ್ರತಿ ಮನೆ ಮನೆಯವರಿಗೂ ಗೊತ್ತಿದೆ ಎಂದು ಹೇಳಿದರು.



ಕಾಂಗ್ರೆಸ್‌ನವರು ಸಿದ್ದರಾಮಯ್ಯ ಅವರನ್ನು ಇಳಿಸಿದರೆ ಸರ್ಕಾರ ಉಳಿಯಲ್ಲ ಎಂಬುದು ಗೊತ್ತಿದೆ. ಹೀಗಾಗಿ ಮುಡಾ ಹಗರಣ ಹೊರಗೆ ತಂದಿದ್ದಾರೆ. ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಹಾಗೂ ಸತೀಶ್ ಜಾರಕಿಹೊಳಿ ಯಾರ್‍ಯಾರು ಸಿಎಂ ಆಕಾಂಕ್ಷಿಗಳಿದ್ದಾರೋ ಅವರೇ ಸಿದ್ದರಾಮಯ್ಯ ಇಳಿಸುವ ಪ್ರಯತ್ನದಲ್ಲಿದ್ದಾರೆ. ಆದರೆ, ಸಿದ್ದರಾಮಯ್ಯ ಅಧಿಕಾರಕ್ಕಾಗಿ ಹೋರಾಟ ಮಾಡ್ತಿದ್ದಾರೆ. ರಾಜಕೀಯ, ಅಧಿಕಾರಕ್ಕಾಗಿ ಸಿದ್ದರಾಮಯ್ಯ ಹಾಗೂ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿದ್ದರು. ನನ್ನ ಬಗ್ಗೆ ಕೆಟ್ಟದಾಗಿ ಬಿಂಬಿಸಿದರು ಎಂದು ಹೇಳಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾನು ಸಚಿವನಾಗಿದ್ದಾಗ ನನ್ನ ಮೇಲೆ ಲಕ್ಷ ಕೋಟಿ ಲೂಟಿ ಮಾಡಿದ್ದೇನೆ ಅಂತ ಹೇಳಿದರು. ಏನೋ ಮಾಡಿ ಅಧಿಕಾರಕ್ಕೆ ಬರಬೇಕು ಅಂತಾ ಅಪಪ್ರಚಾರ ಮಾಡಿದರು. ಅಂದು ನಾನು ರಾಜಕಾರಣದಲ್ಲಿ ಎದ್ದು ಕಾಣುತ್ತಿದ್ದೆನು. ನನ್ನ ಹೊಡೆದರೆ, ನಾನು ಸಿಎಂ ಆಗ್ತಿನಿ ಎಂದು ನನ್ನ ಬಗ್ಗೆ ಸಿದ್ದರಾಮಯ್ಯ ಅಪಪ್ರಚಾರ ಮಾಡಿದರು. ಇಂದು ಸಿದ್ದರಾಮಯ್ಯಗೆ ತೊಂದರೆ ಆಗಿದೆ. ಕಾಂಗ್ರೆಸ್ ಕೆಲ ನಾಯಕರು ಹಾಗೂ ಡಿ.ಕೆ. ಶಿವಕುಮಾರ್ ಸೇರಿಕೊಂಡು ಸಿದ್ದರಾಮಯ್ಯ ಬುಡಕ್ಕೆ ಕೈ ಹಾಕಿದ್ದಾರೆ. ಸಿದ್ದರಾಮಯ್ಯ ಅವರನ್ನು ಸಂಪೂರ್ಣವಾಗಿ ಮನೆಯಲ್ಲಿ ಕೂಡಿಸಬೇಕು ಎಂದು ಡಿಕೆಶಿ ಪ್ಲಾನ್ ಮಾಡಿದ್ದಾರೆ. ನನ್ನ ಮಗ ಸಿಎಂ ಆಗ್ಬೇಕು ಎಂದು ಡಿಕೆಶಿ ಅವರ ತಾಯಿನೇ ಹೇಳಿದ್ದಾರೆ. ಡಿಕೆಶಿ, ಸತೀಶ್ ಜಾರಕಿಹೊಳಿ, ಖರ್ಗೆ ಸೇರಿದಂತೆ ಹಳೆ ಕಾಂಗ್ರೆಸ್ ಬಣ ಸಿದ್ದರಾಮಯ್ಯ ಬುಡಕ್ಕೆ ಕೈ ಹಾಕಿದೆ. ಸಿಎಂ ಗಾದಿಯಿಂದ ಇಳಿಸುವ ಪ್ರಯತ್ನ ಮಾಡ್ತಿದ್ದಾರೆ ಎಂದರು.

ಕರ್ನಾಟಕ ಸರ್ಕಾರ ವಜಾಗೊಳಿಸಲು ರಾಷ್ಟ್ರಪತಿಗಳಿಗೆ ಮನವಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಬಂಟ್ವಾಳ, ಅ.15– ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು ಆದರೆ ಅಧಿಕಾರಕ್ಕೆ ಬಂದ ಒಂದೂವರೆ ವರ್ಷದಲ್ಲಿ ರಾಜ್ಯ ಸರ್ಕಾರದ ಬಗ್ಗೆ ಜನತೆ ಭ್ರಮ ನಿರಸನಗೊಂಡಿದ್ದಾರೆ. ರಾಜ್ಯದಲ್ಲಿರುವ ಹಿಂದೂ ವಿರೋಧಿ ಸರ್ಕಾರವನ್ನು ವಜಾಗೊಳಿಸುವುದಕ್ಕಾಗಿ ಬಿಜೆಪಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಮಾಡಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ.



ಬಂಟ್ವಾಳದಲ್ಲಿ ಪಕ್ಷದ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿರುವ ವಿಜಯೇಂದ್ರ, ಸಿದ್ದರಾಮಯ್ಯ ಸರ್ಕಾರ ಅವ್ಯಾಹತವಾಗಿ ಭ್ರಷ್ಟಾಚಾರದಲ್ಲಿ ತೊಡಗಿದೆ. ದಲಿತರ ಅಭಿವೃದ್ಧಿಗಾಗಿ ಮೀಸಲಿಡಲಾಗಿದ್ದ ಹಣವನ್ನು ದುರುಪಯೋಗಪಡಿಸಿಕೊಂಡು ಅಹಿಂದ ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ವಿಜಯೇಂದ್ರ ಆರೋಪಿಸಿದ್ದಾರೆ.

ವಾಲ್ಮೀಕಿ ನಿಗಮದಲ್ಲಿ 87 ಕೋಟಿ ಹಗರಣ ನಡೆದಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ. ಮುಡಾ ಹಗರಣದಲ್ಲಿ ತಮ್ಮ ಪಾತ್ರವನ್ನು ನಿರಾಕರಿಸುತ್ತಲೇ ಬಂದಿರುವ ಸಿದ್ದರಾಮಯ್ಯ ಈಗ ನಿವೇಶನಗಳನ್ನು ವಾಪಸ್ ಕೊಡಿಸುವ ಮೂಲಕ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ, ಎಂದು ಟೀಕಿಸಿದ ವಿಜಯೇಂದ್ರ, ರಾಜ್ಯ ಸರಕಾರ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಿಲ್ಲ ಎಂದು ಆಡಳಿತ ಪಕ್ಷದ ಶಾಸಕ ರಾಜು ಕಾಗೆ ಅವರೇ ಹೇಳಿದ್ದಾರೆ. ಹಣದ ಕೊರತೆಯ ಬಗ್ಗೆ ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರನ್ನು, ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ರಾಜ್ಯ ಸರಕಾರ ಆರೋಪ ಕೈಬಿಡುವ ಮೂಲಕ ರಕ್ಷಣೆ ಮಾಡುತ್ತಿದೆ, ಎನ್‌ಐಎ ಪ್ರಕರಣದ ತನಿಖೆ ನಡೆಸಿದ್ದು, ಇಂತಹ ಗಲಭೆಕೋರರ ವಿರುದ್ಧ ಆರೋಪ ವಾಪಸ್ ಪಡೆದಿದ್ದು ತಪ್ಪು, ಇದನ್ನು ವಿರೋಧಿಸಿ ಅಕ್ಟೋಬರ್ 25ರಂದು ಹುಬ್ಬಳ್ಳಿಯಲ್ಲಿ ಬೃಹತ್ ಪ್ರತಿಭಟನೆ ನಡೆಸುತ್ತೇವೆ ಎಂದು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ ಒಳ ಮೀಸಲಾತಿ: ಗೃಹ ಸಚಿವ ಪರಮೇಶ್ವರ್ ನೇತೃತ್ವದಲ್ಲಿ ಅ.21ರಂದು ಸಭೆ

ಬೆಂಗಳೂರು, ಅ.15– ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ಗೃಹ ಸಚಿವ ಪರಮೇಶ್ವರ್ ನೇತೃತ್ವದಲ್ಲಿ ಅಕ್ಟೋಬರ್ 21ರಂದು ಸಭೆ ನಡೆಯುತ್ತಿದ್ದು, ಸಭೆಯಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳಿವೆ.



ಪರಮೇಶ್ವರ್ ಅವರು ದಲಿತ ಮುಖಂಡರಾಗಿದ್ದು, ಅಕ್ಟೋಬರ್ 21ರಂದು ವಿಧಾನಸೌಧದಲ್ಲಿ ಎಸ್‌ಸಿ ಸಮುದಾಯದ ಶಾಸಕರ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ, ಆರ್‌ಡಿಪಿಆರ್ ಸಚಿವ ಪ್ರಿಯಾಂಕ್ ಖರ್ಗೆ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ವಿಧಾನಸಭೆ ಉಪಸಭಾಪತಿ ರುದ್ರಪ್ಪ ಎಂ.ಲಮಾಣಿ ಸೇರಿದಂತೆ ಇತರರು ಸಭೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಈಗಾಗಲೇ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ನೇತೃತ್ವದ ಸಮಿತಿ, ಎಂಎಲ್‌ಸಿ ಸುಧಾಮದಾಸ್ ಸೇರಿದಂತೆ ಸದಸ್ಯರನ್ನೊಳಗೊಂಡ ಸಮಿತಿಯು ಮೀಸಲಾತಿ ವರ್ಗೀಕರಣದ ಕುರಿತು ಹಲವು ಸುತ್ತಿನ ಚರ್ಚೆ ನಡೆಸಿದೆ.

ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ಕೈಗೊಂಡಿರುವ ನಿರ್ಧಾರ ವೈಜ್ಞಾನಿಕವಾಗಿಲ್ಲ. ಆಗಿನ ಕಾನೂನು ಸಚಿವ ಜೆ.ಸಿ.ಮಧುಸ್ವಾಮಿ ನೇತೃತ್ವದ ಉಪಸಮಿತಿ ಸಲ್ಲಿಸಿದ್ದ ವರದಿಯನ್ನು ಆಧರಿಸಿ ಬೊಮ್ಮಾಯಿ ಸರ್ಕಾರ ಮೀಸಲಾತಿ ವರ್ಗೀಕರಣ ಕುರಿತು ನಿರ್ಧಾರ ಕೈಗೊಂಡಿತ್ತು. ಬೊಮ್ಮಾಯಿ ನೇತೃತ್ವದ ಸರ್ಕಾರವು SC ಮೀಸಲಾತಿಯನ್ನು 15ರಿಂದ ಶೇ.17ಕ್ಕೆ ಹೆಚ್ಚಿಸಿತ್ತು. ವಿವಿಧ ಸಮುದಾಯಗಳ ನಿಖರವಾದ ಮಾಹಿತಿಯಿಲ್ಲದಿದ್ದರೂ ಪರಿಶಿಷ್ಟ ಜಾತಿ ಜನಸಂಖ್ಯೆ ಹೆಚ್ಚಾಗಿದೆ ಎಂದು ಭಾವಿಸಿ ಮೀಸಲಾತಿಯನ್ನು ಮರುಹಂಚಿಕೆ ಮಾಡಿತ್ತು ಎಂದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಅಕ್ಟೋಬರ್ 18ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಜಾತಿ ಗಣತಿ ಕುರಿತಂತೆಯೂ ಚರ್ಚೆಗಳು ನಡೆಯಲಿದ್ದು, ಸಭೆಯಲ್ಲಿ ಜಾತಿ ಗಣತಿ ವರದಿ ಬಿಡುಗಡೆ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಎನ್ನಲಾಗಿದೆ.

ಈ ನಡುವೆ ಸುಪ್ರೀಂ ಕೋರ್ಟ್ ಆದೇಶದ ಹೊರತಾಗಿಯೂ ಸರ್ಕಾರವು ಮೀಸಲಾತಿ ವರ್ಗೀಕರಣವನ್ನು ಜಾರಿಗೊಳಿಸಲು ವಿಳಂಬ ನೀತಿ ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಸಮುದಾಯದ ಮುಖಂಡರ ಗುಂಪು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ಕುಸುಮ್–ಸಿ ಯೋಜನೆ: ಮೊದಲ ಹಂತ ಪೂರ್ಣಕ್ಕೆ ಡಿಸೆಂಬರ್ ಗಡುವು ನೀಡಿದ ಸರ್ಕಾರ

ಬೆಂಗಳೂರು, ಅ.15– 'ಕುಸುಮ್–ಸಿ' ಯೋಜನೆಯ ಮೊದಲ ಹಂತದಲ್ಲಿ ಸ್ಥಾಪಿಸುತ್ತಿರುವ ಫೀಡರ್ ಮಟ್ಟದ ಸೋಲಾರ್ ವಿದ್ಯುತ್ ಘಟಕಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಇಂಧನ ಇಲಾಖೆ ಅಧಿಕಾರಿಗಳಿಗೆ ಸಚಿವ ಕೆ.ಜೆ.ಜಾರ್ಜ್ ಅವರು ಸೋಮವಾರ ಸೂಚನೆ ನೀಡಿದ್ದಾರೆ.

ಬೆಸ್ಕಾಂ ಕೇಂದ್ರ ಕಚೇರಿಯಲ್ಲಿ ಸೋಮವಾರ ನಡೆದ ಕುಸುಮ್ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವರು ಮಾತನಾಡಿದರು.

ಮುಂದಿನ ಜನವರಿಯಿಂದಲೇ ವಿದ್ಯುತ್ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇದೆ. ಅದಕ್ಕೆ ಪೂರಕವಾಗಿ ಕುಸುಮ್–ಸಿ ಅಡಿ ಪ್ರಗತಿಯಲ್ಲಿರುವ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಬೇಗ ಪೂರ್ಣಗೊಳಿಸಿ, ಫೀಡರ್‌ಗಳಿಗೆ ವಿದ್ಯುತ್ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಕುಸುಮ್ ಸಿ ಯೋಜನೆಯಡಿ ಮೊದಲ ಹಂತದ ಅನುಷ್ಠಾನವನ್ನು ತ್ವರಿತಗೊಳಿಸುವ ಜೊತೆಗೆ, ಎರಡನೇ ಹಂತದ ಯೋಜನೆಗೆ ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಆರಂಭಿಸಬೇಕು ಎಂದು ತಾಕೀತು ಮಾಡಿದರು. ಅಲ್ಲದೇ, ಎಷ್ಟು ಫೀಡರ್‌ಗಳಿಗೆ ಯಾವ ಪ್ರಮಾಣದಲ್ಲಿ ವಿದ್ಯುತ್ ಪೂರೈಸಲಾಗುತ್ತದೆ ಎಂಬ ಬಗ್ಗೆ ಕೆಪಿಟಿಸಿಎಲ್‌ಗೆ ಮಾಹಿತಿ ನೀಡಬೇಕು. ಅದರನ್ವಯ, ಅಗತ್ಯಕ್ಕೆ ತಕ್ಕಂತೆ ಸಬ್‌ಸ್ಟೇಷನ್‌ಗಳ ಉನ್ನತೀಕರಣಕ್ಕೆ ಕ್ರಮ ವಹಿಸಲಾಗುತ್ತದೆ ಎಂದು ಹೇಳಿದರು.



ಕುಸುಮ್ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಉಪಕ್ರಮವಾಗಿದ್ದು, ರೈತರ ಇಂಧನ ಅಗತ್ಯಗಳನ್ನು ಪರಿಹರಿಸಲು ಮತ್ತು ಕೃಷಿಯನ್ನು ಹೆಚ್ಚು ಸಮರ್ಥನೀಯವಾಗಿಸಲು ಪ್ರಾರಂಭಿಸಲಾಗಿದೆ. ಸೌರಶಕ್ತಿಯು ರೈತರಿಗೆ ಆರ್ಥಿಕ ಮತ್ತು ನೀರಿನ ಭದ್ರತೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಕುಸುಮ್–ಬಿ ಯೋಜನೆಯಡಿ ರಾಜ್ಯಕ್ಕೆ 40 ಸಾವಿರ ಸೋಲಾರ್ ಪಂಪ್‌ಸೆಟ್‌ಗಳು ಮಂಜೂರಾಗಿವೆ. ಈ ಗುರಿ ತಲುಪಲು ಫೀಡರ್‌ಗಳಿಂದ 500 ಮೀಟರ್‌ಗೂ ಹೆಚ್ಚು ದೂರವಿರುವ ಅನಧಿಕೃತ ಪಂಪ್‌ಸೆಟ್‌ಗಳ ಸಮೀಕ್ಷೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಅರ್ಜಿ ಸಲ್ಲಿಸಿದವರಿಗೆ ಆದ್ಯತೆ ಮೇರೆಗೆ ಸೋಲಾರ್ ಪಂಪ್‌ಸೆಟ್ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಮುಂದಿನ ಹಂತದಲ್ಲಿ ಹೆಚ್ಚುವರಿ ಸೋಲಾರ್ ಪಂಪ್‌ಸೆಟ್‌ಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಬೇಕು ಎಂದು ತಿಳಿಸಿದರು.

ಅಕ್ರಮ ಪಂಪ್‌ಸೆಟ್‌ಗಳನ್ನು ಹೊಂದಿರುವ 10,151 ಅರ್ಜಿಗಳು ಕುಸುಮ್ ಬಿ ಅಡಿ ನೋಂದಣಿಯಾಗಿವೆ. ಅದೇ ರೀತಿ ಹೊಸದಾಗಿ, 27,820 ಅರ್ಜಿಗಳು ಬಂದಿದ್ದು, ಒಟ್ಟು 37,971 ಅರ್ಜಿಗಳಿಗೆ ಸಂಬಂಧಿಸಿದಂತೆ ಸೋಲಾರ್ ಪಂಪ್‌ಸೆಟ್‌ಗಳನ್ನು ಕಾಲಮಿತಿಯಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಇದೇ ವೇಳೆ ಮುಂಬರುವ ಬೇಸಿಗೆಯಲ್ಲಿ ಸಾಕಷ್ಟು ವಿದ್ಯುತ್ ಪೂರೈಕೆಯನ್ನು ಖಾತರಿಪಡಿಸಲು ಸಿದ್ಧತೆಗಳನ್ನು ಪ್ರಾರಂಭಿಸುವಂತೆ ಜಾರ್ಜ್ ಅವರು ಎಲ್ಲಾ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದರು.

ವಿದ್ಯುತ್ ಪೂರೈಕೆ ಪರಿಸ್ಥಿತಿ ಕುರಿತು ಎಸ್ಕಾಂ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಕಳೆದ ಬೇಸಿಗೆಯಲ್ಲಿ ಬರದ ನಡುವೆಯೂ ವಿದ್ಯುತ್ ಬೇಡಿಕೆಯನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ. ಮುಂದಿನ ಬೇಸಿಗೆಯಲ್ಲಿ ಬೇಡಿಕೆಗೆ ತಕ್ಕಂತೆ ವಿದ್ಯುತ್ ಪೂರೈಸಲು ಅಗತ್ಯ ವಿದ್ಯುತ್ ಲಭ್ಯವಿರಲಿದೆ. ಹೀಗಾಗಿ ಅದನ್ನು ಸಮರ್ಪಕವಾಗಿ ಒದಗಿಸಲು ಟ್ರಾನ್ಸ್‌ಫಾರ್ಮರ್‌ಗಳು, ವಿದ್ಯುತ್ ವಿತರಣಾ ಫೀಡರ್‌ಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಬೇಕು ಎಂದು ಹೇಳಿದರು. ಬಳಿಕ ದಸರಾ ದೀಪಾಲಂಕಾರ ಮತ್ತು ಡ್ರೋನ್ ಶೋ ಕುರಿತಂತೆ ಸೆಸ್ಕ್ ಕಾರ್ಯವೈಖರಿಯನ್ನು ಸಚಿವರು ಶ್ಲಾಘಿಸಿದರು.

ಮೈಸೂರು ಜಿಲ್ಲಾ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನದ ಪರಿಶೀಲನಾ ಕಾರ್ಯಾಗಾರ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಗ್ರಾಮಾಂತರ ವ್ಯಾಪ್ತಿಯ ಸದಸ್ಯತ್ವ ನೋಂದಣಿ ಅಭಿಯಾನದ ಪರಿಶೀಲನಾ ಕಾರ್ಯಾಗಾರದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿದರು.

ಮೈಸೂರು, ಅ.15(ಎಸ್‌ಬಿಡಿ)– ಬಿಜೆಪಿ ಮೈಸೂರು ಗ್ರಾಮಾಂತರ ವ್ಯಾಪ್ತಿಯ ಸದಸ್ಯತ್ವ ನೋಂದಣಿ ಅಭಿಯಾನದ ಪರಿಶೀಲನಾ ಕಾರ್ಯಾಗಾರ ಸಭೆ ನಡೆಸಿ, ಚರ್ಚಿಸಲಾಯಿತು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ರಾಜ್ಯ ಪ್ರಕೋಷ್ಠಗಳ ಸಹ ಸಂಚಾಲಕ ಎನ್.ವಿ.ಪಣೀಶ್ ಮಾತನಾಡಿ, ಪ್ರತೀ ಬೂತ್‌ಗಳಲ್ಲೂ ಕನಿಷ್ಠ 300 ಸದಸ್ಯರುಗಳನ್ನು ನೋಂದಾಯಿಸಬೇಕು. ಅದನ್ನು ಸಾಧಿಸಿದವರು ಮಾತ್ರ ಸಕ್ರಿಯ ಸದಸ್ಯರಾಗಲು ಅರ್ಹರಾಗುತ್ತೇವೆ. ಯುವಕರು, ಮಹಿಳೆಯರ ನೋಂದಣಿಗೆ ಗಮನಹರಿಸಬೇಕು. ಸದಸ್ಯತ್ವ ನೋಂದಣಿಯಂತಹ ಸಂಘಟನಾತ್ಮಕ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವರನ್ನು ಪಕ್ಷ ಗುರುತಿಸಿ, ಮುಖ್ಯ ಜವಾಬ್ದಾರಿಗಳನ್ನು ನೀಡಲಿದೆ. ಇನ್ನು 15 ಇನಗಳಲ್ಲಿ ಗುರಿ ಸಾಧನೆಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮತ್ತೋರ್ವ ಸಹ ಸಂಚಾಲಕ ಎಸ್. ಮಹದೇವಯ್ಯ ಮಾತನಾಡಿ, ಪ್ರಧಾನಿ ಮೋದಿ ಅವರು ಸದಸ್ಯತ್ವ ನೋಂದಣಿಯೂ ಡಿಜಿಟಲೀಕರಣ ಆಗಬೇಕೆಂಬ ಉದ್ದೇಶದಿಂದ ಈ ಕಾರ್ಯಾಗಾರ ಆರಂಭಿಸಿದರು. ನಮ್ಮ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ ತಾಲೂಕು ಅಧ್ಯಕ್ಷರುಗಳು ಬೂತ್ ಮಟ್ಟದ ಪದಾಧಿಕಾರಿಗಳಿಗೆ ಮಾರ್ಗದರ್ಶನ ನೀಡಬೇಕು. ಮೊಬೈಲ್ ಬಳಕೆ ಕಷ್ಟವಾದವರು ಸ್ಥಳೀಯ ಯುವಕರ ಸಹಕಾರ ಪಡೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಡಿಜಿಟಲ್ ವಿಧಾನದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನ ನಡೆಯುತ್ತಿದೆ. ಇದರಿಂದ ಯುವಕ–ಯುವತಿಯರು, ವೃತ್ತಿಪರರು, ಮಹಿಳೆಯರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವರ್ಗದ ಜನರೂ ತಮ್ಮ ಮೊಬೈಲ್ ಮೂಲಕವೇ ಸರಳವಾಗಿ ಸದಸ್ಯತ್ವ ಪಡೆದುಕೊಳ್ಳುತ್ತಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಅಭಿಯಾನ ನಡೆಯುತ್ತಿದ್ದು, ಈಗಾಗಲೇ 50 ಲಕ್ಷಕ್ಕೂ ಹೆಚ್ಚು ಮಂದಿ ನೋಂದಣಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ, ಎಲ್ಲಾ ಬೂತ್ ಮಟ್ಟದ ಪದಾಧಿಕಾರಿಗಳು ಸದಸ್ಯತ್ವ ನೋಂದಣಿಯ ನಿಖರ ಅಂಕಿಅಂಶ ನೀಡಬೇಕು ಎಂದು ಮನವಿ ಮಾಡಿದರು. ಈ ವೇಳೆ ಸದಸ್ಯತ್ವ ಅಭಿಯಾನದ ಸಂಚಾಲಕಿ ಮಂಗಳ ಸೋಮಶೇಖರ್, ಮುಖಂಡ ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್, ಕಿರಣ್ ಜಯರಾಮೇಗೌಡ, ಮಂಡಲದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆನ್‌ಲೈನ್ ಟ್ರೇಡಿಂಗ್ ನೆಪದಲ್ಲಿ 30 ಲಕ್ಷ ರೂ. ವಂಚನೆ



ರಿವಾರ್ಡ್ ನೆಪದಲ್ಲಿ ಮಹಿಳೆಗೆ 9.53 ಲಕ್ಷ ವಂಚನೆ

ಎಸ್‌ಬಿಐ ರಿವಾರ್ಡ್ ಪಾಯಿಂಟ್ಸ್ ಅನ್ನು ಕ್ಯಾಶ್‌ಗೆ ಕನ್ವರ್ಟ್ ಮಾಡಿಕೊಳ್ಳಿ ಎಂಬ ಮೆಸೇಜ್ ಕ್ಲಿಕ್ ಮಾಡಿದ ಮಹಿಳೆಯೊಬ್ಬರಿಂದ ವಂಚಕರು 9.53 ಲಕ್ಷ ರೂ. ಲಪಟಾಯಿಸಿದ್ದಾರೆ. ಮೆಸೇಜ್‌ನಲ್ಲಿ ತಿಳಿಸಿದ್ದಂತೆ ಡೆಬಿಟ್ ಕಾರ್ಡ್‌ನ ಕೊನೆಯ ನಾಲ್ಕು ಸಂಖ್ಯೆ ಹಾಗೂ ಆಧಾರ್ ನಂಬರ್, ನಂತರ ಓಟಿಪಿ ಸಂಖ್ಯೆ ನಮೂದಿಸಿದ್ದಾರೆ. ಬಳಿಕ ಎಸ್‌ಬಿಐ ಓಡಿ ಲೋನ್ ಅಕೌಂಟ್‌ನಿಂದ ಸೈಬರ್ ವಂಚಕರು ಹಣ ದೋಚಿದ್ದಾರೆ. ಈ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು, ಅ.15(ಎಸ್‌ಬಿಡಿ)– ಆನ್‌ಲೈನ್ ಟ್ರೇಡಿಂಗ್ ನೆಪದಲ್ಲಿ ವ್ಯಕ್ತಿಯೊಬ್ಬರಿಗೆ 1 ಲಕ್ಷ ರೂ. ಪ್ರಾಫಿಟ್ ನೀಡಿ ನಂಬಿಕೆ ಗಿಟ್ಟಿಸಿದ ನಂತರ ಅವರಿಂದ 30.85 ಲಕ್ಷ ರೂ. ಹೂಡಿಕೆ ಮಾಡಿಸಿ, ವಂಚಿಸಿರುವ ಪ್ರಕರಣ ಮೈಸೂರಿನಲ್ಲಿ ನಡೆದಿದೆ.

ನಗರದ ಯಾದವಗಿರಿ ನಿವಾಸಿಯೊಬ್ಬರು ಫೇಸ್‌ಬುಕ್ ಜಾಹೀರಾತು ಮೂಲಕ ವಂಚಕರ ಬಲೆಗೆ ಸಿಲುಕಿ ಹಣ ಕಳೆದುಕೊಂಡಿದ್ದು, ಈ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಪ್ರಕಟವಾದ ಜಾಹೀರಾತಿನ ಮೇಲೆ ಕ್ಲಿಕ್ ಮಾಡಿದಾಗ ತಮ್ಮ ಮೊಬೈಲ್ ಸಂಖ್ಯೆಯನ್ನು ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಸೇರಿಸಲಾಯಿತು. ನಂತರ ಒಂದು ಲಿಂಕ್ ಕಳುಹಿಸಿ ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿಕೊಳ್ಳಲು ಸೂಚಿಸಲಾಯಿತು. ಅದರಂತೆ ಆಪ್ ಡೌನ್‌ಲೋಡ್ ಮಾಡಿಕೊಂಡು ಕೆವೈಸಿ ಮಾಹಿತಿ ನೀಡಿದ ಬಳಿಕ ಖಾತೆ ತೆರೆದುಕೊಂಡಿತು. ದೈನಂದಿನ ಶೇರು ಮಾರುಕಟ್ಟೆ, ಯಾವ ಸ್ಟಾಕ್ಸ್ ಹಾಗೂ ಐಪಿಓಗಳನ್ನು ಟ್ರೇಡ್ ಮಾಡಬೇಕು, ಯಾವಾಗ ಸ್ಟಾಕ್ ಖರೀದಿಸಿ, ಮಾರಾಟ ಮಾಡಬೇಕು ಎಂಬ ಮಾಹಿತಿ ನೀಡಲಾಗುತ್ತಿತ್ತು. ಅಲ್ಲದೆ ಆ ಗ್ರೂಪ್‌ನಲ್ಲಿದ್ದ ಇತರೆ ಸದಸ್ಯರು ತಾವು ಇನ್ವೆಸ್ಟ್ ಮಾಡಿ ಪ್ರಾಫಿಟ್ ಪಡೆದಿರುವುದಾಗಿ ಸ್ಕ್ರೀನ್ ಶಾಟ್‌ಗಳನ್ನು ಶೇರ್ ಮಾಡಿದ್ದರಿಂದ ನಾನೂ ಕೂಡ ಹಣ ಹೂಡಿಕೆ ಮಾಡಿದೆ. ಗ್ರೂಪ್‌ನಲ್ಲಿ ಸೂಚಿಸಿದಾಗಲೇ ಐಪಿಓ ಖರೀದಿಸಿ, ಮಾರಾಟ ಮಾಡಿದ್ದರಿಂದ ಟ್ರೇಡಿಂಗ್ ಖಾತೆಗೆ ಪ್ರಾಫಿಟ್ ಹಣ ಸೇರುತ್ತಿತ್ತು. ಆರಂಭದಲ್ಲಿ 1 ಲಕ್ಷ ರೂ. ವಿತ್‌ಡ್ರಾ ಮಾಡಿದೆ. ಆದ್ದರಿಂದ ನಂಬಿಕೆ ಹೆಚ್ಚಾಗಿ ಹಲವು ಹಂತಗಳಲ್ಲಿ ಒಟ್ಟು 30.85 ಲಕ್ಷ ಹೂಡಿಕೆ ಮಾಡಿದೆ. ಅದರಿಂದ ಒಟ್ಟು 2 ಕೋಟಿ ರೂ. ಪ್ರಾಫಿಟ್ ಬಂದಿರುವುದಾಗಿ ಟ್ರೇಡಿಂಗ್ ಖಾತೆಯಲ್ಲಿ ತೋರಿಸಿತು. ಆದರೆ ಆ ಹಣವನ್ನು ವಿತ್‌ಡ್ರಾ ಮಾಡಲು ಹೋದಾಗ ಶೇ.15ರಷ್ಟು ಬ್ರೋಕರೇಜ್ ಹಣ ಪಾವತಿಸುವಂತೆ ಸೂಚನೆ ನೀಡಲಾಯಿತು. ನಂತರ ಆ ಪ್ರಕ್ರಿಯೆಯೇ ಸ್ಥಗಿತವಾಯಿತು ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

97 ಕೋಟಿ ರೂ. ಆನ್‌ಲೈನ್ ವಂಚನೆ: ಖಾಸಗಿ ಬ್ಯಾಂಕ್ ಮ್ಯಾನೇಜರ್ ಸೇರಿ 8 ಮಂದಿ ಬಂಧನ

ಬೆಂಗಳೂರು, ಅ. 15–ಬ್ಯಾಂಕ್ ಖಾತೆಗಳನ್ನು ಮಾಡಿಕೊಟ್ಟು ಕೋಟ್ಯಾಂತರ ರೂ. ಆನ್‌ಲೈನ್ ವಂಚನೆಗೆ ಸಹಕಾರ ನೀಡಿದ್ದ ಖಾಸಗಿ ಬ್ಯಾಂಕ್ ಮ್ಯಾನೇಜರ್ ಸೇರಿ 8 ಮಂದಿಯನ್ನು ಬಂಧಿಸುವಲ್ಲಿ ಬೆಂಗಳೂರು ನಗರ ಸೈಬರ್ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಬ್ಯಾಡರಹಳ್ಳಿಯ ಖಾಸಗಿ ಬ್ಯಾಂಕ್ ಮ್ಯಾನೇಜರ್ ಕಿಶೋರ್ ಸಾಹು, ಬ್ಯಾಂಕ್ ಸೇಲ್ಸ್ ಮ್ಯಾನೇಜರ್ ಮನೋಹರ್, ಸೇಲ್ಸ್ ಎಕ್ಸಿಕ್ಯುಟಿವ್‌ಗಳಾದ ಕಾರ್ತಿಕ್, ರಾಕೇಶ್ ಬಂಧಿತರು. ವಂಚನೆಗೆ ಬ್ಯಾಂಕ್ ಖಾತೆಗಳನ್ನು ನೀಡಿದ್ದ ಚಿಕ್ಕಮಗಳೂರಿನ ಬ್ಯೂಟಿಶಿಯನ್ ಸಿ.ಪಿ ಮಾಲಾ, ಕಾರ್ಮಿಕರಾದ, ರಘುರಾಜ್, ಲಕ್ಷ್ಮೀಕಾಂತ ಕೂಡ ಜೈಲು ಸೇರಿದ್ದಾರೆ. ಆರೋಪಿ ಕಿಶೋರ್ ಸಾಹು ಹಾಗೂ ಇತರ ಬ್ಯಾಂಕ್ ಸಿಬ್ಬಂದಿ ಸೂಕ್ತ ದಾಖಲೆಗಳನ್ನು ಪರಿಶೀಲಿಸದೆ ಆರು ಚಾಲ್ತಿ ಖಾತೆಗಳನ್ನು ವಂಚಕರಿಗೆ ಮಾಡಿಕೊಟ್ಟಿದ್ದರು. ಪರಿಣಾಮ ಈ ಖಾತೆಗಳಿಂದಲೇ ಸೈಬರ್ ವಂಚಕರು ದೇಶಾದ್ಯಂತ 254 ಸೈಬರ್ ವಂಚನೆ ಕೃತ್ಯಗಳನ್ನು ಎಸಗಿ 97 ಕೋಟಿ ರೂ. ಲಪಟಾಯಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಕ್ಕಮಗಳೂರಿನ ಮಾಲಾ ಬ್ಯೂಟಿಶಿಯನ್ ಆಗಿದ್ದು, ಸ್ವಂತ ಪಾರ್ಲರ್ ನಡೆಸುತ್ತಿದ್ದಾರೆ. ಕೆಂಗೇಗೌಡ ಟೈಲರ್ ಆಗಿದ್ದಾರೆ. ರಘುರಾಜ್ ಅಡಿಕೆ ಸುಲಿಯುವ ಫ್ಯಾಕ್ಟರಿ ನಡೆಸುತ್ತಿದ್ದಾರೆ. ಕಾರ್ಮಿಕ ಲಕ್ಷ್ಮೀಕಾಂತ ಸೇರಿ ಆರು ಮಂದಿಗೆ 2023ರಲ್ಲಿ ಒಂದೇ ದಿನ ಬೆಂಗಳೂರಿನ ಬ್ಯಾಡರಹಳ್ಳಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ತೆರೆಯಲು ಬ್ಯಾಂಕ್ ಅಧಿಕಾರಿಗಳು ಅವಕಾಶ ಮಾಡಿಕೊಟ್ಟಿದ್ದರು. ಸೈಬರ್ ದಂಧೆಕೋರರು ಬ್ಯಾಂಕ್ ಸಿಬ್ಬಂದಿ ಹಾಗೂ ಮಾಲಾ ಸೇರಿ ಇತರ ಬ್ಯಾಂಕ್ ಖಾತೆದಾರರಿಗೆ ಕಮಿಷನ್ ನೀಡಿ, ಖಾತೆಗಳನ್ನು ಸೈಬರ್ ವಂಚನೆ ಹಣ ವಹಿವಾಟಿಗೆ ಬಳಸಿರುವುದು ತನಿಖೆಯಲ್ಲಿ ಗೊತ್ತಾಗಿದೆ.

ಬಾಡಿಗೆ ಬ್ಯಾಂಕ್ ಖಾತೆಗಳನ್ನು ಕಮಿಷನ್ ಆಧಾರದಲ್ಲಿ ಪಡೆದು ಸೈಬರ್ ವಂಚನೆ ಕೃತ್ಯ ಎಸಗುತ್ತಿದ್ದ ದಂಧೆಕೋರರು, ಇಬ್ಬರು ಬಾಡಿಗೆ ಬ್ಯಾಂಕ್ ಖಾತೆದಾರರು ಹಾಗೂ ಮಧ್ಯವರ್ತಿಗಳು ಸೇರಿ 9 ಮಂದಿ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಯಲಹಂಕದ ಉದ್ಯಮಿಯೊಬ್ಬರಿಗೆ ಷೇರು ಮಾರುಕಟ್ಟೆಯಲ್ಲಿ ದುಪ್ಪಟ್ಟು ಲಾಭ ಕೊಡಿಸುವುದಾಗಿ ಆಮಿಷವೊಡ್ಡಿದ್ದ ಸೈಬರ್ ವಂಚಕರು ವಿಐಪಿ ಟ್ರೇಡಿಂಗ್ ಹೆಸರಿನಲ್ಲಿ 2024ರ ಮಾರ್ಚ್‌ನಿಂದ ಜೂನ್‌ವರೆಗೆ 1.5 ಕೋಟಿ ರೂ. ವಿವಿಧ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿಸಿಕೊಂಡಿದ್ದರು. ಈ ಹೂಡಿಕೆ ಮೊತ್ತಕ್ಕೆ 25 ಕೋಟಿ ರೂ.ಲಾಭ ಬಂದಿದ್ದು, ಅದರ ಸ್ಕ್ರೀನ್ ಶಾಟ್ ಹಂಚಿಕೊಂಡಿದ್ದರು. ಆದರೆ, ಈ ಹಣ ಡ್ರಾ ಮಾಡಲು 70 ಲಕ್ಷ ರೂ. ಪುನಃ ಜಮೆ ಮಾಡಬೇಕು ಎಂದು ಬೇಡಿಕೆ ಇಟ್ಟಿದ್ದರು. ಇದರಿಂದ ಅನುಮಾನಗೊಂಡ ಉದ್ಯಮಿ ಸೈಬರ್ ಠಾಣೆಗೆ ದೂರು ನೀಡಿದ್ದರು.

ಈ ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ ಇನ್‌ಸ್ಪೆಕ್ಟರ್ ಹಜರೇಶ್ ಕಿಲ್ಲೇದಾರ್ ನೇತೃತ್ವದ ತಂಡ, ಉದ್ಯಮಿ ಹಣ ವರ್ಗಾಯಿಸಿದ್ದ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸಿತ್ತು. ಈ ಪೈಕಿ ಆರು ಬ್ಯಾಂಕ್ ಖಾತೆಗಳು ಚಿಕ್ಕಮಗಳೂರಿನ ಮಾಲಾ ಮತ್ತಿತರರ ಹೆಸರಿನಲ್ಲಿದ್ದು, ಬ್ಯಾಡರಹಳ್ಳಿ ಶಾಖೆಯಲ್ಲಿ ತೆರೆದಿರುವುದು ಗೊತ್ತಾಗಿತ್ತು. ಈ ಖಾತೆಗಳು ಸೈಬರ್ ವಂಚನೆಗೆ ಬಳಕೆಯಾದ ಖಾತೆಗಳ ಲಿಸ್ಟ್‌ನಲ್ಲಿದ್ದವು. ಇದರಿಂದ ಅನುಮಾನಗೊಂಡ ತನಿಖಾ ತಂಡ, ಚಿಕ್ಕಮಗಳೂರಿನ ನಿವಾಸಿಗಳಿಗೆ ಅಲ್ಲಿ ಬ್ಯಾಂಕ್ ಶಾಖೆಯಿದ್ದರೂ ಬೆಂಗಳೂರಿನಲ್ಲಿ ಖಾತೆ ತೆರೆದಿದ್ದ ರಹಸ್ಯ ಭೇದಿಸಿದಾಗ ವಂಚನೆಗೆ ಬಳಸಲೆಂದೇ ಖಾತೆಗಳನ್ನು ಸೃಜಿಸಿರುವುದು ದೃಢಪಟ್ಟಿತ್ತು.

ವಾಕಿಂಗ್ ಮಾಡುತ್ತಿದ್ದ ಗೃಹಿಣಿ ಸರ ಅಪಹರಣ



ಮೈಸೂರು, ಅ.15(ಎಸ್‌ಬಿಡಿ)– ಖದೀಮರು ವಾಕಿಂಗ್ ಮಾಡುತ್ತಿದ್ದ ಮಹಿಳೆಯ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಬಸವೇಶ್ವರನಗರದಲ್ಲಿ ಸೋಮವಾರ ಬೆಳ್ಳಂಬೆಳಗ್ಗೆಯೇ ನಡೆದಿದೆ.

ಇಲ್ಲಿನ 2ನೇ ಕ್ರಾಸ್ ನಿವಾಸಿ ಆರ್. ಅನುಸೂಯ(67) ಅವರ ಸುಮಾರು 50 ಗ್ರಾಂ ಚಿನ್ನದ ಸರ ಖದೀಮರ ಪಾಲಾಗಿದ್ದು, ಸರ ಕೀಳುವಾಗ ಗಟ್ಟಿಯಾಗಿ ಹಿಡಿದುಕೊಂಡಿದ್ದರಿಂದ 10 ಗ್ರಾಂನಷ್ಟು ತುಂಡು ಉಳಿದುಕೊಂಡಿದೆ. ಅನಸೂಯ ಅವರು ಸೋಮವಾರ ಬೆಳಗ್ಗೆ 7.30ರ ಸಮಯದಲ್ಲಿ ಮನೆಯಿಂದ ಒಂದನೇ ಕ್ರಾಸ್ ಕಡೆಗೆ ವಾಕಿಂಗ್ ಹೋಗುತ್ತಿದ್ದಾಗ ಹಿಂಭಾಗದಲ್ಲಿ ಒಂದು ಬೈಕ್ ನಿಂತುಕೊಂಡಿದೆ. ಆಗ ಅನಸೂಯ ಅವರು ಹಿಂದಿರುಗಿ ನೋಡುವಷ್ಟರಲ್ಲಿ ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದವನು ಅವರೆದುರೇ ಬಂದು ನಿಂತಿದ್ದಾನೆ. ಯಾರೆಂದು ಗಾಬರಿಯಿಂದ ನೋಡುವಾಗಲೇ ಆತ ಏಕಾಏಕಿ ಅನಸೂಯ ಅವರ ಕೊರಳಿನಲ್ಲಿದ್ದ 40 ಗ್ರಾಂ ಮಾಂಗಲ್ಯ ಸರ ಹಾಗೂ 20 ಗ್ರಾಂ ಸಾಮಾನ್ಯ ಸರವನ್ನು ಕಿತ್ತುಕೊಂಡಿದ್ದಾನೆ. ಅನಸೂಯ ಅವರು ಕಿರುಚಿಕೊಂಡು ಸರವನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾರೆ. ಪರಿಣಾಮ ಸುಮಾರು 10 ಗ್ರಾಂನಷ್ಟು ತುಂಡು ಮಾತ್ರ ಅವರ ಕೈಯಲ್ಲಿ ಉಳಿದಿದ್ದು, ಸುಮಾರು 50 ಗ್ರಾಂನಷ್ಟು ಚಿನ್ನಾಭರಣ ಖದೀಮರ ಪಾಲಾಗಿದೆ.

ಪಲ್ಸರ್ ಮಾದರಿಯ ಬೈಕ್‌ನಲ್ಲಿ ಬಂದಿದ್ದ ಇಬ್ಬರೂ 30–35 ವರ್ಷದವರಾಗಿದ್ದು, ಸರ ಕಿತ್ತುಕೊಂಡು ಪರಾರಿಯಾದರು ಎಂದು ಅನಸೂಯ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣ: ಜಾಮೀನು ಕೋರಿ ಹೈಕೋರ್ಟ್‌ಗೆ ದರ್ಶನ್ ಅರ್ಜಿ



ಬೆಂಗಳೂರು, ಅ.15– ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರಿಗೆ ನಗರದ ಸೆಷನ್ಸ್ ನ್ಯಾಯಾಲಯ ಜಾಮೀನು ತಿರಸ್ಕರಿಸಿದ ಬೆನ್ನಲ್ಲೇ ಅವರೀಗ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಕುರಿತ ಜಾಮೀನು ಅರ್ಜಿಯನ್ನು ದರ್ಶನ್ ಪರ ವಕಾಲತ್ತು ವಹಿಸಿರುವ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಮಂಗಳವಾರ ಮಧ್ಯಾಹ್ನ ಹೈಕೋರ್ಟ್ ಫೈಲಿಂಗ್ ವಿಭಾಗಕ್ಕೆ ಸಲ್ಲಿಸಿದರು.

ಸುಮಾರು 300 ಪುಟಗಳಿಗೂ ಅಧಿಕ ದಸ್ತಾವೇಜು ಹೊಂದಿರುವ ಈ ಅರ್ಜಿಗೆ ಸದ್ಯ ಎಫ್‌ಆರ್ ನಂಬರ್ ನೀಡಲಾಗಿದ್ದು, ಪರಿಶೀಲನೆ ನಂತರ ಕ್ರಿಮಿನಲ್ ಅರ್ಜಿ ಸಂಖ್ಯೆ ನಮೂದಾಗಬೇಕಿದೆ. ನಂತರವೇ ಅದು ನ್ಯಾಯಪೀಠದ ಮುಂದೆ ಬರಲಿದೆ ಅಥವಾ ಅವರ ಪರ ವಕೀಲರು ಮೆಮೊ ಸಲ್ಲಿಕೆಯ ಮೂಲಕ ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಸೂಕ್ತ ನ್ಯಾಯಪೀಠದಲ್ಲಿ ಮನವಿ ಮಾಡಲಿದ್ದಾರೆ. ಯೋಗ್ಯತೆಯ ವಾದಾಂಶಗಳ ಆಧಾರದಲ್ಲಿ ಜಾಮೀನು ನೀಡುವಂತೆ ಕೋರಲಾಗಿರುವ ಈ ಅರ್ಜಿಯಲ್ಲಿ ದರ್ಶನ್ ಅವರಿಗೆ ತುರ್ತು ವೈದ್ಯಕೀಯ ಚಿಕಿತ್ಸೆಯ ಅಗತ್ಯವನ್ನು ವಿಶೇಷವಾಗಿ ಪ್ರತಿಪಾದಿಸಲಾಗಿದೆ. ದರ್ಶನ್ ಈಗ ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದು ಅಗತ್ಯ ಚಿಕಿತ್ಸೆಗಾಗಿ ತಕ್ಷಣವೇ ಜಾಮೀನು ಮಂಜೂರು ಮಾಡಬೇಕು ಎಂದು ಕೋರಲಾಗಿದೆ.

ಮೂರೂ ಕ್ಷೇತ್ರ ಗೆಲ್ಲುತ್ತೇವೆ



ಬೆಂಗಳೂರು, ಅ.15– ಚುನಾವಣಾ ಆಯೋಗ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ದಿನಾಂಕ ಘೋಷಿಸಿದ್ದು, ಉಪ ಚುನಾವಣೆ ಸೇರಿದಂತೆ ಎಲ್ಲಾ ಚುನಾವಣೆಗೂ ಕಾಂಗ್ರೆಸ್ ಪಕ್ಷ ಸಜ್ಜಾಗಿದೆ. ಮೂರು ಕ್ಷೇತ್ರಗಳಲ್ಲೂ ನಾವು ಗೆದ್ದೇ ಗೆಲ್ಲುತ್ತೇವೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಈ ಕುರಿತು ವಿಧಾನಸೌಧದಲ್ಲಿ ಮಾತನಾಡಿದ ಅವರು, ಉಪಚುನಾವಣೆ ಘೋಷಣೆಯಾಗಿದ್ದು, ಆಯೋಗ ಚುನಾವಣಾ ದಿನಾಂಕ ಘೋಷಣೆ ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ. ಈ ಕ್ಷೇತ್ರಗಳಲ್ಲಿ ಶಾಸಕ ಸ್ಥಾನ ಖಾಲಿಯಾದಾಗಿನಿಂದಲೇ ನಮ್ಮ ತಯಾರಿ ಆರಂಭವಾಗಿದೆ. ನಮ್ಮ ಕೆಲಸ ನಾವು ಮಾಡುತ್ತಿದ್ದೇವೆ ಎಂದರು. ಚನ್ನಪಟ್ಟಣ ಅಭ್ಯರ್ಥಿ ಆಯ್ಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಈ ಚುನಾವಣೆಗಳಲ್ಲಿ ನಾವೇ ಅಭ್ಯರ್ಥಿಗಳು ಎಂದು ಹೇಳಿದರು. ಚನ್ನಪಟ್ಟಣದಲ್ಲಿ ಯೋಗೇಶ್ವರ್ ಬಂಡಾಯ ಎದ್ದಿರುವ ಬಗ್ಗೆ ಮಾತನಾಡಿ, ಈ ವಿಚಾರವಾಗಿ ನಾನು ಮಾಧ್ಯಮಗಳ ಮಾತನ್ನು ಕೇಳುವುದಿಲ್ಲ. ಅವರ ಪಕ್ಷಗಳಿಂದ ಅಭ್ಯರ್ಥಿ ಅಂತಿಮ ಆಯ್ಕೆಯಾಗಲಿ. ಅವರು ಕೈಗೊಳ್ಳುವ ನಿರ್ಧಾರದ ಬಗ್ಗೆ ಅಧಿಕೃತವಾಗಿ ಪ್ರಕಟಿಸಲಿ. ಆಗ ನಾನು ಅದನ್ನು ನಂಬುತ್ತೇನೆ ಎಂದರು.

ಅ.20ಕ್ಕೆ ಬಾಗಲಕೋಟೆಯಲ್ಲಿ ರಾಯಣ್ಣ ಚನ್ನಮ್ಮ ಬ್ರಿಗೇಡ್ ಸಭೆ



ಶಿವಮೊಗ್ಗ, ಅ.15– ಹಿಂದೂ ಧರ್ಮದ ಎಲ್ಲಾ ಸಮುದಾಯದ ಬಡವರ ಏಳಿಗೆಗಾಗಿ ರಾಯಣ್ಣ ಚನ್ನಮ್ಮ ಬ್ರಿಗೇಡ್ ಆರಂಭಿಸುತ್ತಿದ್ದು, ಅ.20 ರಂದು ಬಾಗಲಕೋಟೆಯ ಚರಂತಿಮಠ ಸಭಾಂಗಣದಲ್ಲಿ ಚಿಂತನ ಮಂಥನ ಸಭೆ ಆಯೋಜಿಸಲಾಗಿದೆ ಎಂದು ಮಾಜಿ ಡಿಸಿಎಂ ಕೆಎಸ್ ಈಶ್ವರಪ್ಪ ತಿಳಿಸಿದರು. ಶಿವಮೊಗ್ಗದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಈ ಹಿಂದೆ ರಾಯಣ್ಣ ಬ್ರಿಗೇಡ್ ಸ್ಥಾಪನೆ ಮಾಡಿದ್ದೆ. ಆಗ ಈ ಬ್ರಿಗೇಡ್ ನಿಲ್ಲಿಸುವಂತೆ ಯಡಿಯೂರಪ್ಪ ಅವರು ತಿಳಿಸಿದ್ದರು. ಹೀಗಾಗಿ ಬ್ರಿಗೇಡ್ ಸ್ಥಗಿತಗೊಳಿಸಿದ್ದೆ. ಆದರೆ ಈ ಬಾರಿ ಅಂತಹ ತಪ್ಪು ಮಾಡುವುದಿಲ್ಲ ಎಂದರು. ಬಾಗಲಕೋಟೆಯಲ್ಲಿ ನಡೆಯುವ ಸಭೆಯಲ್ಲಿ ಉತ್ತರ ಕರ್ನಾಟಕ ಭಾಗದ 25 ಮಂದಿ ಸಾಧು ಸಂತರು ಭಾಗವಹಿಸಲಿದ್ದು, ಸುಮಾರು ಎರಡೂವರೆ ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಗೌರವಾನ್ವಿತ 2ನೇ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಮಿಸ್ ಸಂಖ್ಯೆ : 62 / 2023

ಅರ್ಜಿದಾರರು : ಶ್ರೀಮತಿ ದೊಡ್ಡತಾಯಮ್ಮ ಮತ್ತು ಇತರರು **ವಿರುದ್ಧ**

ಎದುರುದಾರರು: ನಿಂಗಮ್ಮ ಮತ್ತು ಇತರರು

ಎದುರುದಾರರ ಸಂಖ್ಯೆ 14: ಶ್ರೀ.ಜಿ.ಆರ್ ನಾಗರಾಜು ಬಿನ್ ರಾಮಚಂದ್ರಶೆಟ್ಟಿ ಸುಮಾರು ವಯಸ್ಸು 56 ವರ್ಷ, ವಾಸ: ಇಡಬ್ಲ್ಯೂಎಸ್–5, 21ನೇ ಕ್ರಾಸ್, 23ನೇ ಮುಖ್ಯ ರಸ್ತೆ, 2ನೇ ಹಂತ, ಜೆ.ಪಿ ನಗರ, ಮೈಸೂರು.

ಎದುರುದಾರರ ಸಂಖ್ಯೆ 15: ಶ್ರೀ ಎನ್ ಸುಬ್ರಮಣ್ಯ ಬಿನ್ ಲೇಟ್ ನಂಜುಂಡಸ್ವಾಮಿ, ಸುಮಾರು 84 ವರ್ಷ: ವಾಸ:ನಂ.23/413, 4ನೇ ಕ್ರಾಸ್, ಗಣೇಶ ಗುಡಿ ಬೀದಿ, ಭ್ರಮರಾಂಭ ಬಡಾವಣೆ, ಚಾಮರಾಜನಗರ ಟೌನ್, ಚಾಮರಾಜನಗರ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

6ನೇ ಅರ್ಜಿದಾರರಾದ ಶ್ರೀಮತಿ ಭಾಗ್ಯಮ್ಮ ಮತ್ತು ಇತರರು ಎದುರುದಾರರ ವಿರುದ್ಧ ನ್ಯಾಯಾಲಯದಲ್ಲಿ ಅಸಲು ದಾವೆಯನ್ನು ಮುಂದುವರೆಸಲು ಕೋರಿ ಈ ದಾವೆಯನ್ನು ದಾಖಲಿಸಿದ್ದು, 14 ಮತ್ತು 15ನೇ ಎದುರುದಾರರಾದ ನೀವುಗಳು ನ್ಯಾಯಾಲಯದ ನೋಟೀಸನ್ನು ಸ್ವೀಕರಿಸದ ಕಾರಣ ಈ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡುವುದರ ಮೂಲಕ ನಿಮಗೆ ನ್ಯಾಯಾಲಯದ ನೋಟೀಸನ್ನು ನೀಡುತ್ತಿದ್ದು, ನೀವು ದಿನಾಂಕ: 16/11/24 ರ 11.00 ಗಂಟೆಗೆ ಮಾನ್ಯ ಘನ ನ್ಯಾಯಾಲಯದಲ್ಲಿ ಇದ್ದು, 14 ಮತ್ತು 15ನೇ ಎದುರುದಾರರಾದ ತಾವು ನ್ಯಾಯಾಲಯದಲ್ಲಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ನೀವು ನ್ಯಾಯಾಲಯದಲ್ಲಿ ಹಾಜರಿಲ್ಲದ ಪಕ್ಷದಲ್ಲಿ ಏಕಪಕ್ಷೀಯವಾಗಿ ಅರ್ಜಿದಾರರ ಪರವಾಗಿ ತೀರ್ಪು ನೀಡಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಅರ್ಜಿದಾರರ ಪರ ವಕೀಲರು
ದಿನಾಂಕ : 17-09-2024

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು, ಗೌರವಾನ್ವಿತ 2ನೇ ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

1ನೇ ವರ್ಷದ ಸವಿನೆನಪು



ನೀನು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ...
ದುಃಖತಪ್ತರು: ತಾಯಿ, ತಂದೆ, ಅಣ್ಣ ಅತ್ತಿಗೆ ಮತ್ತು ಕುಟುಂಬ ವರ್ಗದವರು

ಎಸ್. ಪ್ರಕಾಶ್

8ನೇ ವರ್ಷದ ಸವಿನೆನಪು



ನಂದೀಶ್ ಕುಮಾರ್
ಜನನ: 13.11.1997 ಮರಣ: 16.10.2016
K.G. ಕೊಪ್ಪಲು, ಮೈಸೂರು


8ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು ಕುಟುಂಬವರ್ಗದವರು

ಎಸ್. ಮಧುಕರ್
ಜನನ: 26.03.1980, ಮರಣ: 16.10.2023

THIRD YEAR REMEMBRANCE
16-10-2021



M.MADAIAH CFTRI
WE MISS YOU A LOT..
Smt. kamalamma, M.Lokesh Advocate, M.Manju, Sridevi, Harshitha & Thejas

ಶ್ರೀರಂಗಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.

ಬಿ.ಎಂ.ರಸ್ತೆ, ಶ್ರೀರಂಗಪಟ್ಟಣ ಮಂಡ್ಯ ಜಿಲ್ಲೆ–571438
ದೂರವಾಣಿ :295024

ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಮೇಲ್ಕಂಡ ಸಂಘದ ಅತ್ಯುತ್ತಮ ಚಾಲನೆ ಸ್ಥಿತಿಯಲ್ಲಿರುವ 2010ರಲ್ಲಿ ಖರೀದಿಸಿರುವ **KA11 A1867** ಹಾಗೂ 2014 ರಲ್ಲಿ ಖರೀದಿಸಿರುವ **KA11 A8428** ರ ನೋಂದಣಿಯ TATA ಕಂಪನಿಯ ಎರಡು ಲಾರಿಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮಾಡುವ ಮೂಲಕ ಮಾರಾಟ ಮಾಡಲು ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ದಿ: 22/10/2024 ಮಂಗಳವಾರ ಬೆಳಗ್ಗೆ 11.30 ಕ್ಕೆ ಸಂಘದ ಆವರಣದಲ್ಲಿ ಟೆಂಡರ್ ಕಂ ಬಹಿರಂಗ ಹರಾಜು ನಡೆಸಲಾಗುವುದು ಆಸಕ್ತರು ಲಾರಿಗಳ ವಿವರಗಳನ್ನು ಸಂಘದ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಆವರಣದಲ್ಲಿ ಲಾರಿಗಳನ್ನು ಪರಿಶೀಲಿಸಬಹುದಾಗಿರುತ್ತದೆ.

ಶ್ರೀ. ಎಂ.ನಂದೀಶ್‌ರವರು
ಅಧ್ಯಕ್ಷರು 9845393175

ಯು.ಕೆ.ಪಾರ್ವತಮ್ಮರವರು
ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು
9620470965

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

ಇ–ಮೇಲ್: ceo_zp_mys@nic.in ದೂ.ಸಂ: 0821–2526301,330
ಸಂಖ್ಯೆ: ಇಎಸ್ ಟಿ (5)/25429/2022–23 ದಿನಾಂಕ: 14.10.2024

(ಇ–ಪ್ರೊಕ್ಯೂರ್‌ಮೆಂಟ್) ಟೆಂಡರ್ ಅಧಿಸೂಚನೆ

ವಿಷಯ: ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜರುಗುವ ವಿವಿಧ ಸಭೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಉಪಹಾರ, ಊಟ, ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ. ವೆಬ್ ಸೈಟ್: https://Kppp.karnataka.gov.in/ ಅಲ್ಪಾವಧಿ ಟೆಂಡರ್ ಮೊತ್ತ ರೂ.12.00 ಲಕ್ಷ, ಇ.ಎಂ.ಡಿ.ಮೊತ್ತ – ರೂ.30,000/– (ಮೂವತ್ತು ಸಾವಿರ ರೂ ಗಳು ಮಾತ್ರ). ಟೆಂಡರ್ ಸಲ್ಲಿಸಲು ಕೊನೆಯ ದಿ: 28.10.2024ರ ಸಂಜೆ 05–00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿ: 29.10.2024ರ ಸಂಜೆ 05–00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

DIPR/DDMYS-671/KSMCA-457/2024-25

ದಿ ಮೈಸೂರು ಕಾಫಿ ಸಂಸ್ಕರಣ ಸಹಕಾರ ಸಂಘ ನಿ.

ಕೆ.ಆರ್.ಎಸ್. ರಸ್ತೆ, ಯಾದವಗಿರಿ, ಮೈಸೂರು-570020 ದೂ.ಸಂ: 9845807364

ಪ್ರಕಟಣೆ

ಮೇಲ್ಕಂಡ ಸಂಘದ ಆಡಳಿತ ಮಂಡಳಿಗೆ ಚುನಾವಣೆಯನ್ನು ಬುಧವಾರ ದಿನಾಂಕ: 30–10–2024 ರಂದು ನಡೆಸಲು ಈಗಾಗಲೇ ಚುನಾವಣಾ ವೇಳಾಪಟ್ಟಿಯನ್ನು ಚುನಾವಣಾಧಿಕಾರಿಯಾದ ಶ್ರೀ ಜಿ.ಆರ್.ರಘು ರವರು ಪ್ರಕಟಿಸಿರುತ್ತಾರೆ.

ಚುನಾವಣಾ ವೇಳಾಪಟ್ಟಿ ಅನ್ವಯ ದಿ:15–10–2024 ಮಂಗಳವಾರದಂದು ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕವಾಗಿರುತ್ತದೆ.

ದಿ:22–10–2024ನೇ ಮಂಗಳವಾರ ಅಪರಾಹ್ನ 3:00 ಗಂಟೆ ಒಳಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ದಿ:23–10–2024 ರಂದು ನಾಮಪತ್ರಗಳ ಪರಿಶೀಲನೆ.

ದಿ:24–10–2024 ರಂದು ಅಪರಾಹ್ನ 3:00 ಗಂಟೆಯ ಒಳಗೆ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನಾಂಕವಾಗಿರುತ್ತದೆ.

ದಿ:30-10-2024 ರಂದು ಸಂಘದ ಕಛೇರಿ ಆವರಣದಲ್ಲಿ ಬೆಳಗ್ಗೆ 9:00 ಗಂಟೆ ಇಂದ ಅಪರಾಹ್ನ 4:00 ಗಂಟೆಯ ವರೆಗೆ ಮತದಾನ.

ಚುನಾವಣಾ ವೇಳಾಪಟ್ಟಿಯನ್ನು ಸಂಘದ ನೋಟಿಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಘದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ (ದೂ ಸಂ. 9845807364) ಎಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಿದೆ.

ವಿಶೇಷ ಸೂಚನೆ: ನಾಮಪತ್ರ ಸಲ್ಲಿಸುವ ಸಂಧರ್ಭ ಹಾಗೂ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಧರ್ಭದಲ್ಲಿ ಸದಸ್ಯರು ತಮ್ಮ ಭಾವಚಿತ್ರವುಳ್ಳ ಮತ್ತು ಹೆಸರು ವಿಳಾಸ ವಿವರವುಳ್ಳ ಆಧಾರ್ ಕಾರ್ಡ್/ಡ್ರೈವಿಂಗ್ ಲೈಸೆನ್ಸ್/ಪಾನ್ ಕಾರ್ಡ್/ವೋಟರ್ ಐಡಿ/ ಸಂಘದಿಂದ ನೀಡಿರುವ ಗುರುತಿನ ಕಾರ್ಡ್. ಈ ಮೇಲಿನ ಯಾವುದಾದರು ಒಂದು ಭಾವಚಿತ್ರವುಳ್ಳ ಗುರುತಿನ ಕಾರ್ಡ್‌ನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಸಹಿ/– ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ವಿಶೇಷಾಧಿಕಾರಿ
ದಿ ಮೈಸೂರು ಕಾಫಿ ಸಂಸ್ಕರಣ ಸಹಕಾರ ಸಂಘ ನಿ. ಮೈಸೂರು

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ),

CA-12, 2ನೇ ಹಂತ, ವಿಜಯನಗರ, ಮೈಸೂರು–570017,
ದೂರವಾಣಿ ಸಂಖ್ಯೆ: 0821-2514823, ಇಮೇಲ್: vijayanagarasclub@gmail.com

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ) ಇವರು ಮಾನ್ಯುಯಲ್ ಮುಖಾಂತರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಹಾಗೂ ಹೆಸರಾಂತ ಸ್ಥಳೀಯ ಕಟ್ಟಡ ನಿರ್ಮಾಣಗಾರರು ಇವರಲ್ಲಿ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟಮೊತ್ತ	ಇ.ಎಂ.ಡಿ	ಕೆಲಸ ಪೂರೈಸಲು ನಿಗದಿ ಪಡಿಸಿದ ಅವಧಿ	ಟೆಂಡರ್ ಫಾರಂ ಮೊತ್ತ
1.	ಕ್ಲಬ್ ಕಟ್ಟಡದ 3ನೇ ಮಹಡಿಯಲ್ಲಿನ ರೂಮುಗಳ ನವೀಕರಣ ಕಾಮಗಾರಿ	12 ಲಕ್ಷಗಳು	12 ಸಾವಿರ ರೂಪಾಯಿಗಳು	2 ತಿಂಗಳು	1000/–

1. ಟೆಂಡರ್ ಫಾರಂಗಳನ್ನು, ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ)ನ ಕಛೇರಿ CA No.12, 2ನೇ ಹಂತ, ವಿಜಯನಗರ, ಮೈಸೂರು ಇಲ್ಲಿ ದಿನಾಂಕ: 26–10–2024ರೊಳಗಾಗಿ ಕಛೇರಿಯ ವೇಳೆಯಲ್ಲಿ ಪಡೆಯಲು ತಿಳಿಸಿದೆ. ದೂರವಾಣಿ ಸಂಖ್ಯೆ 9972829472
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ 02/11/2024ರೊಳಗೆ ಬೆಳಗ್ಗೆ 11.00 ರಿಂದ 2.00ರವರೆಗೆ ಮತ್ತು ಸಂಜೆ 6.00 ರಿಂದ 9.00ರವರೆಗೆ ಕ್ಲಬ್‌ನ ಕಛೇರಿಯಲ್ಲಿ ಸಲ್ಲಿಸುವುದು.

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ), ಪರವಾಗಿ

ಹೆಚ್.ಎಂ.ರಾಮಚಂದ್ರ
ಸಹಿ/– ಅಧ್ಯಕ್ಷರು

ಎನ್.ಎಲ್.ಶೇಖರ್
ಸಹಿ/– ಕಾರ್ಯದರ್ಶಿ

ವಿ.ಸೂ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಕಾರ್ಯಕಾರಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.